ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 9 ಸೋಮವಾರ 2023

ಸಂಪುಟ: 44 | ಸಂಚಿಕೆ: 174 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೊಹ್ಲಿ, ರಾಹುಲ್ ಹೋರಾಟ: ಭಾರತಕ್ಕೆ ಭರ್ಜರಿ ಜಯ

● ಟೂರ್ನಿಯಲ್ಲಿ ಟೀಂ ಇಂಡಿಯಾ ಶುಭಾರಂಭ ● ಸ್ಪಿನ್ನರ್‌ಗಳ ಮೋಡಿಗೆ ತತ್ತರಿಸಿದ ಆಸೀಸ್



ಚೆನ್ನೈ, ಅ.8– ಲೋ ಸ್ಕೋರಿಂಗ್ ಆದರೂ ಹೈವೋಲ್ಟೇಜ್‌ನಿಂದ ಕೂಡಿದ್ದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಮತ್ತು ಕನ್ನಡಿಗ ಕೆ.ಎಲ್.ರಾಹುಲ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಭಾರತ, ಆಸ್ಟ್ರೇಲಿಯಾ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಭಾರತ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ನೀಡಿದ 200 ರನ್‌ಗಳ ಗುರಿ ಬೆನ್ನತ್ತಿದ ಭಾರತ 41.2 ಓವರ್‌ನಲ್ಲೇ 4 ವಿಕೆಟ್ ನಷ್ಟಕ್ಕೆ 201 ರನ್ ಬಾರಿಸಿ ಗೆಲುವು ಸಾಧಿಸಿತು. ಚೇಸಿಂಗ್ ಆರಂಭಿಸಿದ ಭಾರತ 2 ಓವರ್ ಆಗುವಷ್ಟರಲ್ಲಿ ಕೇವಲ 2 ರನ್‌ಗಳಿಗೆ ಇಶಾನ್ ಕಿಶನ್, ನಾಯಕ ರೋಹಿತ್ ಶರ್ಮಾ ಹಾಗೂ ಶ್ರೇಯಸ್ ಅಯ್ಯರ್ ಅವರುಗಳ ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಅಭಿಮಾನಿಗಳಲ್ಲಿ ಆತಂಕ ಎದುರಾಗಿತ್ತು. ಆದರೆ 4ನೇ ವಿಕೆಟ್‌ಗೆ ಜೊತೆಯಾದ ವಿರಾಟ್ ಕೊಹ್ಲಿ, ಕನ್ನಡಿಗ ಕೆ.ಎಲ್.ರಾಹುಲ್ ಈ ಆತಂಕವನ್ನು ದೂರ ಮಾಡಿದರು.

ಆರಂಭದಲ್ಲಿ ನಿಧಾನಗತಿಯ ಬ್ಯಾಟಿಂಗ್ ನಡೆಸಿದ ಈ ಜೋಡಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಈ ಮಧ್ಯೆ ಕೊಹ್ಲಿ ಸಿಕ್ಕ ಜೀವದಾನವನ್ನು ಸದುಪಯೋಗಪಡಿಸಿಕೊಂಡು ಮತ್ತಷ್ಟು ಎಚ್ಚರಿಕೆಯ ಆಟವಾಡಿದರು. ಅಲ್ಲದೇ ಕೊಹ್ಲಿ ಹಾಗೂ ರಾಹುಲ್ ಅರ್ಧಶತಕ ಸಿಡಿಸಿ ಮಿಂಚಿದರು. ತಾಳ್ಮೆ ಹಾಗೂ ಎಚ್ಚರಿಕೆಯ ಬ್ಯಾಟಿಂಗ್ ಮಾಡುತ್ತಿದ್ದ ಕೊಹ್ಲಿ 116 ಎಸೆತಗಳಲ್ಲಿ 6 ಬೌಂಡರಿ ಒಳಗೊಂಡ 85 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆಗಾಗಲೇ ಕೊಹ್ಲಿ ರಾಹುಲ್ ಜೊತೆಗೂಡಿ 216 ಎಸೆತಗಳಲ್ಲಿ 165 ರನ್‌ಗಳ ಜೊತೆಯಾಟವಾಡಿದ್ದರು. ಬಳಿಕ ರಾಹುಲ್ ಜೊತೆಗೂಡಿದ ಹಾರ್ದಿಕ್ ಪಾಂಡ್ಯ ತಂಡಕ್ಕೆ ಜಯ ತಂದುಕೊಟ್ಟರು. ಇನ್ನಿಂಗ್ಸ್ ಕೊನೆವರೆಗೂ ಹೋರಾಡಿದ ರಾಹುಲ್ 115 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್ ಒಳಗೊಂಡ 97 ರನ್ ಗಳಿಸಿ ಅಜೇಯರಾಗುಳಿದರು. ಕೊನೆಯಲ್ಲಿ ಹಾರ್ದಿಕ್ ಪಾಂಡ್ಯ 11 ರನ್ ಕೊಡುಗೆ ನೀಡಿದರು. ಆಸೀಸ್ ಪರ ಜೋಶ್ ಹ್ಯಾಜಲ್‌ವುಡ್ 3, ಮಿಚೆಲ್ ಸ್ಟಾರ್ಕ್ 1 ವಿಕೆಟ್ ಪಡೆದರು. ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ● 8ನೇ ಪುಟಕ್ಕೆ

ಕರ್ನಾಟಕಕ್ಕೆ ಜಿಎಸ್‌ಟಿ ಪರಿಹಾರ ಬಿಡುಗಡೆ ಮಾಡಿ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು, ಅ.8– ಕರ್ನಾಟಕಕ್ಕೆ ನೀಡಬೇಕಾದ ಜಿಎಸ್‌ಟಿ ಪರಿಹಾರ ಬಿಡುಗಡೆ ಮಾಡಿ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆದ 52ನೇ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕೌನ್ಸಿಲ್ ಸಭೆಯಲ್ಲಿ ರಾಜ್ಯಕ್ಕೆ ನೀಡಬೇಕಾದ 2,333 ಕೋಟಿ ರೂಪಾಯಿಗಳ ಜಿಎಸ್‌ಟಿ ಪರಿಹಾರವನ್ನು ಬಿಡುಗಡೆ ಮಾಡುವ ವಿಷಯವನ್ನು ಕರ್ನಾಟಕವು ಮುನ್ನೆಲೆಗೆ ತರಲು ಶನಿವಾರ ಯಶಸ್ವಿಯಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರತಿನಿಧಿಸಿದ್ದ ಕರ್ನಾಟಕ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಷಯ ಪ್ರಸ್ತಾಪಿಸುತ್ತಿದ್ದಂತೆ, ನಿರ್ಮಲಾ ಅವರು ಜಿಎಸ್‌ಟಿ ಪರಿಹಾರದ ಬಾಕಿಯನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.



ನಮ್ಮ ಕೋರಿಕೆ ಮೇರೆಗೆ, ಲೇಬಲ್ ಮಾಡದ ರಾಗಿ ಮಿಶ್ರಣಗಳನ್ನು ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. ಲೇಬಲ್ ಮಾಡಿದ ರಾಗಿ ಮಿಶ್ರಣಗಳು ಶೇ.12ರಿಂದ 18ರ ಬದಲಿಗೆ ಶೇ.5 ಜಿಎಸ್‌ಟಿ ವಿಧಿಸಲಾಗಿದೆ ಎಂದು ಹೇಳಿದರು. ಅಂತೆಯೇ GST ಕೌನ್ಸಿಲ್ ಪುಡಿ ರೂಪದಲ್ಲಿ ರಾಗಿ ಹಿಟ್ಟಿನ ಆಹಾರ ತಯಾರಿಕೆಗೆ ಶೂನ್ಯ ದರವನ್ನು ಶಿಫಾರಸು ಮಾಡಿದೆ ಮತ್ತು ಸಡಿಲ ರೂಪದಲ್ಲಿ ಮಾರಾಟ ಮಾಡುವಾಗ ತೂಕದಲ್ಲಿ ಕನಿಷ್ಠ ಶೇ.70 ರಾಗಿ ಹೊಂದಿರಬೇಕು ಮತ್ತು ಪೂರ್ವ–ಪ್ಯಾಕೇಜ್ ಮತ್ತು ಲೇಬಲ್ ರೂಪದಲ್ಲಿ ಮಾರಾಟ ಮಾಡಿದರೆ ಶೇ.5 ಜಿಎಸ್‌ಟಿ ಇರಲಿದೆ ಎಂದು ಹೇಳಿದರು.

ರಾಗಿ ಮೇಲಿನ ಜಿಎಸ್‌ಟಿ ವಿನಾಯಿತಿಯನ್ನು ರಾಜ್ಯ ಸರ್ಕಾರವು ಬಹಳ ಸಮಯದಿಂದ ಒತ್ತಾಯಿಸುತ್ತಿದೆ ಮತ್ತು ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಪ್ರಧಾನವಾಗಿರುವ ರಾಗಿ ಬೆಳೆಗಾರರಿಗೆ ಸಹಾಯ ಮಾಡುವ ಕ್ರಮವನ್ನು ಕೌನ್ಸಿಲ್ ಅದನ್ನು ರೈತರಿಗೆ ಒಂದು ಪ್ರಗತಿ ಎಂದು ಪರಿಗಣಿಸಿದೆ. ಇನ್ನು ಪರಿಹಾರಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಲಹೆಯಂತೆ ಕೃಷ್ಣ ಬೈರೇಗೌಡ ಅವರು ರಾಜ್ಯದ ಪ್ರಕರಣವನ್ನು ಮಂಡಿಸಿದರು ಮತ್ತು ಸಿಎಜಿ ಆಡಿಟ್ ದೃಢೀಕರಿಸಿದರೂ ಬಾಕಿ ಪಾವತಿಸದ ಕಾರಣ ಹಣಕಾಸು ಸಚಿವರು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಎಸ್‌ಟಿ ಕೌನ್ಸಿಲ್ ಸಭೆಗೂ ಮುನ್ನ ಸಚಿವರು ಬುಧವಾರ ನಡೆದ ಸಭೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ರಾಜ್ಯದ ಬೇಡಿಕೆಗಳನ್ನು ಕಾರ್ಯಸೂಚಿಯಲ್ಲಿ ತರುವಂತೆ ಜಿಎಸ್‌ಟಿ ಕೌನ್ಸಿಲ್‌ಗೆ ಪತ್ರವನ್ನೂ ಬರೆದಿದ್ದರು ಎಂದು ತಿಳಿದುಬಂದಿದೆ.

ಪಟಾಕಿ ಗೋದಾಮು ದುರಂತ; ಸಿಐಡಿ ತನಿಖೆಗೆ

ಬೆಂಗಳೂರು: ಆನೇಕಲ್ ತಾಲೂಕು ಅತ್ತಿಬೆಲೆಯ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 14 ಮಂದಿ ಸಾವಿಗೀಡಾದ ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ಇಲಾಖೆಗೆ (ಸಿಐಡಿ) ಒಪ್ಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಇದೀಗ ಪೊಲೀಸರ ವಶದಲ್ಲಿರುವ ಅಂಗಡಿ ಮಾಲೀಕನ ನಿರ್ಲಕ್ಷ್ಯವೇ ಘಟನೆಗೆ ಕಾರಣ ಎಂದು ಸಿಎಂ ಹೇಳಿದರು. ● 8ನೇ ಪುಟಕ್ಕೆ

ಜಾನಪದ ಝೇಂಕಾರದೊಂದಿಗೆ ಪರಿಸರ ಸಂರಕ್ಷಣೆ ಅರಿವು ಮೂಡಿಸಿದ ಯುವ ಸಂಭ್ರಮ



ಯೋಗನೃತ್ಯ ಪ್ರದರ್ಶನ...

ಯೋಗ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೈಸೂರು ವಿವಿಯಲ್ಲಿ ಹೊಸದಾಗಿ ಆರಂಭಿಸಿರುವ ಪಿಜಿ ಡಿಪ್ಲೊಮೊ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಯುವ ಸಂಭ್ರಮ ವೇದಿಕೆಯಲ್ಲಿ ಯೋಗ ನೃತ್ಯ ಪ್ರದರ್ಶನ ನೀಡುವ ಮೂಲಕ ನೋಡುಗರಲ್ಲಿ ಬೆರಗು ಮೂಡಿಸಿದರು. ಹಿನ್ನೆಲೆ ಸಂಗೀತಕ್ಕೆ ಅನುಗುಣವಾಗಿ ಕ್ಲಿಷ್ಟಕರ ಯೋಗಾಸನಗಳನ್ನು ಪ್ರದರ್ಶನ ಮಾಡಿದ ವಿದ್ಯಾರ್ಥಿಗಳು ಯೋಗಾಭ್ಯಾಸದಿಂದ ಆರೋಗ್ಯವೃದ್ಧಿ ಎಂಬುದನ್ನು ಮನದಟ್ಟು ಮಾಡಿದರು.

ಮೈಸೂರು,ಅ.8(ಎಂಕೆ)–ಹಚ್ಚ ಹಸಿರಿನ ಮಾನಸ ಗಂಗೋತ್ರಿಯಲ್ಲಿ ಪ್ರಕೃತಿ ಆರಾಧನೆ... ನೀರಿಗೆ ನೈದಿಲೆ ಶೃಂಗಾರ, ನಾಡಿಗೆ ಕಾಡೇ ಶೃಂಗಾರ... ಕಾಡು ಉಳಿಸಿದರೆ ಮಾನವ ಜೀವ ಉಳಿದಂತೆ ಎಂಬ ಸತ್ಯ ಸಂದೇಶವನ್ನು ಯುವ ಮನಸುಗಳಲ್ಲಿ ಅಚ್ಚೊತ್ತಿಸಲಾಯಿತು...!


ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮದ ಸಾಂಸ್ಕೃತಿಕ ವೇದಿಕೆಯಲ್ಲಿ ಹಸಿರೇ ಉಸಿರು, ಪ್ರಕೃತಿಯೇ ದೈವ ಎಂಬುದನ್ನು ಅಮೋಘ, ಅತ್ಯಾಕರ್ಷಕ ಹಾಗೂ ವಿನೂತನ ಸಂಗೀತ ಮತ್ತು ನೃತ್ಯ ಸಂಯೋಜನೆಯೊಂದಿಗೆ ಪ್ರಸ್ತುತಪಡಿಸಲಾಯಿತು.

ಕಿಕ್ಕಿರಿದು ತುಂಬಿದ್ದ ಯುವ ಸಮೂಹದಲ್ಲಿ ನೆಲ–ಜಲ, ವಿಶ್ವವಿಖ್ಯಾತ ಮೈಸೂರು ದಸರಾ ವೈಭವ, ನವ ದುರ್ಗೆಯರ ದರ್ಶನದ ಜೊತೆ ಜೊತೆಗೆ ವೀರ ಯೋಧರನ್ನು ಸ್ಮರಿಸಿದ ವಿವಿಧ ಕಾಲೇಜುಗಳ ಕಲಾತಂಡಗಳು ಮಸ್ತ್ ಮನರಂಜನೆಯ ರಸದೌತಣ ನೀಡಿದರು. ಮೈಸೂರಿನ ವಿಕಲಚೇತನರ ಅಭ್ಯುದಯ ಸೇವಾ ಸಂಸ್ಥೆಯ ವಿಶೇಷಚೇತನ ಮಕ್ಕಳು, ಮಹದೇವಪುರ ರಸ್ತೆಯಲ್ಲಿರುವ ಸಂತ ಜೋಸೆಫ್ ಮಹಿಳಾ ಕಾಲೇಜು, ಬೃಂದಾವನ ಬಡಾವಣೆಯಲ್ಲಿನ ಭಾರತೀ ಸ್ತ್ರೀ ಸಮಾಜ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಹಾಗೂ ಟಿ.ನರಸೀಪುರ ಮೇಣಸಿಕ್ಯಾತನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಕಲಾತಂಡದ ವಿದ್ಯಾರ್ಥಿಗಳು ಅರ್ಥಪೂರ್ಣ ಸಂಗೀತ ಹಾಗೂ ನೃತ್ಯಾಭಿನಯದ ಮೂಲಕ ಪ್ರಕೃತಿಯ ಮಹತ್ವ ಸಾರಿದರು.

ಜಾನಪದ ಝೇಂಕಾರ: ಜಾನಪದ ಕಲಾಪ್ರಕಾರಗಳಾದ ಕಂಸಾಳೆ, ಕೋಲಾಟ, ಪೂಜಾ ಕುಣಿತ, ಕೊಡವ ಸಾಂಸ್ಕೃತಿಕ ನೃತ್ಯ, ಕರಾವಳಿಯ ಜಾನಪದ ಕಲೆಗಳ ಜೊತೆಗೆ ಧರೆಗೆ ದೊಡ್ಡವರಾದ ಸಿದ್ದಪ್ಪಾಜಿ, ಮಂಟೆಸ್ವಾಮಿ ಅವರ ಭವಿಷ್ಯವಾಣಿಯನ್ನು ತಿಳಿಸಲಾಯಿತು. 'ಹಾಲುಮಲೆ ಜೇನುಮಲೆ' ಹಾಡಿನೊಂದಿಗೆ ಮಲೈ ಮಹದೇಶ್ವರನ ಉಘೇ ಝೇಂಕಾರ ಮೊಳಗಿಸಲಾಯಿತು. ಮಂಡ್ಯದ ಪಾಂಡವಪುರ ಕ್ಯಾತನಹಳ್ಳಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗುಂಡ್ಲುಪೇಟೆ ಹಂಗಳದ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಾಸನದ ಎನ್‌ಡಿಆರ್‌ಕೆ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಜಾನಪದ ಸೊಗಡನ್ನು ಬಯಲು ರಂಗಮಂದಿರದೆಲ್ಲೆಡೆ ಪಸರಿಸಿದರು.

ದಸರಾ ವೈಭವ: ನವದುರ್ಗೆಯರ ದರ್ಶನ ಮಾಡಿಸಿದ ಗುಂಡ್ಲುಪೇಟೆ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು, ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜು ಹಾಗೂ ಹುಣಸೂರಿನ ● 4ನೇ ಪುಟಕ್ಕೆ

ದಲೈಲಾಮಾ ಆಸ್ಪತ್ರೆಗೆ ದಾಖಲು



ನವದೆಹಲಿ: ಟಿಬೆಟಿಯನ್ ಬೌದ್ಧ ಧರ್ಮ ಗುರು ದಲೈಲಾಮಾ ಅವರು ಭಾನುವಾರ ಸಂಜೆ ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್(ಏಮ್ಸ್)ಗೆ ದಾಖಲಾಗಿದ್ದಾರೆ. ದಲೈಲಾಮಾ ಅವರನ್ನು ಕಾರ್ಡಿಯಾಲಜಿ ಪ್ರಾಧ್ಯಾಪಕ ಡಾ.ರಾಜೀವ್ ನಾರಂಗ್ ಅವರ ಕಾರ್ಡಿಯೋ–ನ್ಯೂರೋ ಸೆಂಟರ್‌ನ ಖಾಸಗಿ ವಾರ್ಡ್‌ಗೆ ದಾಖಲಿಸಲಾಗಿದೆ. ದಲೈಲಾಮಾ ಅವರು ನಿರಂತರ ಶೀತದಿಂದ ಬಳಲುತ್ತಿದ್ದು, ವೈದ್ಯಕೀಯ ತಪಾಸಣೆಗಾಗಿ ದೆಹಲಿಗೆ ತೆರಳಿದ್ದಾರೆ. ಯಾರೂ ಆತಂಕಪಡುವ ಅಗತ್ಯವಿಲ್ಲ. ಇನ್ನೆರಡು–ಮೂರು ದಿನಗಳಲ್ಲಿ ಧರ್ಮಶಾಲಾಗೆ ಹಿಂತಿರುಗುತ್ತಾರೆ ಎಂದು ಅವರ ಆಪ್ತ ಕಾರ್ಯದರ್ಶಿ ಚಿಮಿ ರಿಗ್ಜಿನ್ ಧರ್ಮಶಾಲಾದಲ್ಲಿ ಹೇಳಿದ್ದರು.

ಬಿಗ್ ಬಾಸ್ 10ನೇ ಆವೃತ್ತಿ ಆರಂಭ

ಹಾವಿನ ಬುಟ್ಟಿಯೊಂದಿಗೆ ದೊಡ್ಮನೆ ಪ್ರವೇಶಿಸಿದ ಸ್ನೇಕ್ ಶ್ಯಾಂ



ಬೆಂಗಳೂರು, ಅ.8– ಕನ್ನಡದ ಜನಪ್ರಿಯ ರಿಯಾಲಿಟಿ ಶೋ ಬಿಗ್ ಬಾಸ್ ಹತ್ತನೇ ಆವೃತ್ತಿ ಭಾನುವಾರ ಆರಂಭವಾಗಿದ್ದು, ಮೈಸೂರಿನ ಉರಗ ರಕ್ಷಕ ಸ್ನೇಕ್ ಶ್ಯಾಂ ಸೇರಿದಂತೆ 16 ಸ್ಪರ್ಧಿಗಳು ಈ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದಾರೆ.

ಈವರೆಗೂ 53 ಸಾವಿರ ಹಾವುಗಳನ್ನು ಹಿಡಿದು ಕಾಡಿಗೆ ಬಿಡುವ ಮೂಲಕ ರಕ್ಷಿಸಿರುವ ಸ್ನೇಕ್ ಶ್ಯಾಂ ಅವರಿಗೆ ಬುಟ್ಟಿಯೊಳಗೆ ಪ್ಲಾಸ್ಟಿಕ್ ● 8ನೇ ಪುಟಕ್ಕೆ

ದಸರಾ ಭದ್ರತೆಗೆ ಪೊಲೀಸ್ ಇಲಾಖೆ ಸಿದ್ಧತೆ

- ಡಿಜಿ ಅಲೋಕ್ ಮೋಹನ್ ಅವರಿಂದ ಇಂದು ಸಭೆ
- ಈ ಬಾರಿ ದಸರಾಗೆ ಹೆಚ್ಚಿನ ಜನರ ಆಗಮನದ ನಿರೀಕ್ಷೆ
- ಜಂಬೂಸವಾರಿ, ಪಂಜಿನ ಕವಾಯತ್‌ಗೆ ಹೆಚ್ಚಿನ ಭದ್ರತೆ
- ವಿವಿಧ ಕಾರ್ಯಕ್ರಮಗಳ ಮೇಲೆ ಪೊಲೀಸ್ ಕಣ್ಗಾವಲು
- ಹೊರ ಜಿಲ್ಲೆಗಳ ಪೊಲೀಸ್ ಸಿಬ್ಬಂದಿ ಬಳಕೆಗೆ ಚಿಂತನೆ



ಅಲೋಕ್ ಮೋಹನ್

ಮೈಸೂರು,ಅ.8(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವ ಆರಂಭಕ್ಕೆ ಕೇವಲ 7 ದಿನಗಳಷ್ಟೇ ಬಾಕಿಯಿರುವ ಹಿನ್ನೆಲೆಯಲ್ಲಿ ದಸರಾ ಮಹೋತ್ಸವದ ಯಶಸ್ವಿಗಾಗಿ ಸೂಕ್ತ ಭದ್ರತೆ ಕಲ್ಪಿಸಲು ಪೊಲೀಸ್ ಇಲಾಖೆಯಿಂದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ನಾಳೆ(ಅ.9) ರಾಜ್ಯ ಪೊಲೀಸ್ ಮಹಾನಿರ್ದೇಶಕ(ಡಿಜಿ ಮತ್ತು ಐಜಿಪಿ) ಅಲೋಕ್ ಮೋಹನ್ ಅವರ ನೇತೃತ್ವದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಯಲಿದೆ.

ಡಿಜಿ-ಐಜಿಪಿ ಸಭೆ ಬಳಿಕ ಭದ್ರತೆಯ ಸ್ಪಷ್ಟ ಚಿತ್ರಣ

“ ದಸರಾ ಮಹೋತ್ಸವದ ಭದ್ರತೆ ಅವಲೋಕಿಸಲು ಡಿಜಿ–ಐಜಿಪಿ ಅಲೋಕ್ ಮೋಹನ್ ಅವರ ನೇತೃತ್ವದಲ್ಲಿ ಸೋಮವಾರ (ಅ.9) ಸಭೆ ನಡೆಯಲಿದೆ. ಆ ಸಭೆಯಲ್ಲಿ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಆ ನಂತರ ದಸರಾ ಮಹೋತ್ಸವದ ಭದ್ರತೆಗೆ ಎಷ್ಟು ಮಂದಿ ಪೊಲೀಸರನ್ನು ನೇಮಿಸಬೇಕು ಎಂಬ ಮಾಹಿತಿ ನಿರ್ಧರಿಸಲಾಗುತ್ತದೆ.

–ರಮೇಶ್ ಬಾನೊತ್, ಮೈಸೂರು ನಗರ ಪೊಲೀಸ್ ಆಯುಕ್ತ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಿಂದಾಗಿ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಿರುವ ಹಿನ್ನೆಲೆಯಲ್ಲಿ ಹಾಗೂ ದಸರಾ ದೀಪಾಲಂಕಾರ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಆಯೋಜನೆಯಿಂದಾಗಿ ನವರಾತ್ರಿ ವೇಳೆ ಮೈಸೂರು ಪ್ರವಾಸಿಗರಿಂದ ತುಂಬಿ ತುಳುಕಲಿದ್ದು, ದಸರಾ ಕಾರ್ಯಕ್ರಮಗಳ ಯಶಸ್ವಿಗಾಗಿ ಪೊಲೀಸ್ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ದಸರಾ ಮಹೋತ್ಸವದ ಮೇಲೆ ಉಗ್ರರ ಕರಿ ನೆರಳಿನ ಆತಂಕ ಸಹಜವಾಗಿದ್ದು, ಈ ಹಿನ್ನೆಲೆಯಲ್ಲೂ ಹೆಚ್ಚಿನ ಭದ್ರತೆಗಾಗಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಅ.15ರಂದು ಚಾಮುಂಡಿಬೆಟ್ಟದಲ್ಲಿ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದ್ದು, ಅ.24ರಂದು ಜಂಬೂಸವಾರಿ ನೆರವೇರಲಿದೆ. ಇದರ ನಡುವೆ ದಸರಾ ಫಲಪುಷ್ಪ ಪ್ರದರ್ಶನ, ದಸರಾ ವಸ್ತು ಪ್ರದರ್ಶನ, ಯುವದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳು ವಿವಿಧ ಸ್ಥಳದಲ್ಲಿ ಕಾರ್ಯಕ್ರಮ ಜರುಗುವುದರಿಂದ ಹೆಚ್ಚಿನ ಪೊಲೀಸ್ ಭದ್ರತೆಯ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದು ಹಿರಿಯ ಅಧಿಕಾರಿಗಳ ಸಭೆಯ ಬಳಿಕ ಕೆಲವು ನಿರ್ಧಾರ ಕೈಗೊಳ್ಳಲಿದ್ದಾರೆ.

ಪೂರ್ವ ಸಿದ್ಧತಾ ಸಭೆ: ಪೊಲೀಸ್ ಇಲಾಖೆ ಕೈಗೊಳ್ಳುವ ಭದ್ರತೆಯ ಆಧಾರದಲ್ಲಿ ದಸರಾ ಮಹೋತ್ಸವ ಶಾಂತಿಯುತವಾಗಿ, ಯಶಸ್ವಿಯಾಗಿ ನೆರವೇರಲಿದೆ. ದಸರಾ ಮಹೋತ್ಸವ ಭದ್ರತಾ ಕಾರ್ಯ ಅವಲೋಕಿಸಲು ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ನೇತೃತ್ವದಲ್ಲಿ ಪೊಲೀಸ್ ಭದ್ರತೆ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ. ಮೈಸೂರಿನ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆ ಸಲಿದ್ದಾರೆ. ಈ ಸಭೆಯಲ್ಲಿ ದಕ್ಷಿಣ ವಲಯ ಐಜಿಪಿ, ಪೊಲೀಸ್ ಆಯುಕ್ತರು, ಡಿಸಿಪಿ, ಎಸಿಪಿ ● 8ನೇ ಪುಟಕ್ಕೆ

ಮಂಡ್ಯ ಮನ್‌ಮುಲ್ ಮೆಗಾ ಡೇರಿಗೆ ಬೆಂಕಿ

● ಡೇರಿಯ ಪ್ಯಾಕಿಂಗ್ ತಯಾರಿಕಾ ಘಟಕಕ್ಕೆ ಹಾನಿ ● ಡಿಸಿ, ಎಸ್ಪಿ ಭೇಟಿ ಪರಿಶೀಲನೆ, ಉನ್ನತ ತನಿಖೆಗೆ ಆದೇಶ ● ಫೈರಿಂಗ್ ಸೇಫ್ಟಿಯೂ ಇಲ್ಲ, ಅಗ್ನಿಶಾಮಕ ದಳದ ಎನ್‌ಒಸಿಯೂ ಇಲ್ಲ



ಮಂಡ್ಯ,ಅ.8(ಮೋಹನ್‌ರಾಜ್)–ಪ್ರತಿಷ್ಠಿತ ಹಾಲು ಒಕ್ಕೂಟ ಎಂದೇ ಹೆಸರು ಮಾಡಿರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್)ದ ಮೆಗಾ ಡೇರಿಯ ಪ್ಯಾಕಿಂಗ್ ತಯಾರಿಕಾ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ.

ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿರುವ ಮನ್‌ಮುಲ್ ಮೆಗಾ ಡೇರಿಯಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಮೆಗಾ ಡೈರಿ ಮೊದಲ ಅಂತಸ್ತಿನಲ್ಲಿರುವ ಪ್ಯಾಕಿಂಗ್ ತಯಾರಿಕಾ ಘಟಕದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತುಕೊಂಡು ಬೆಂಕಿಯ ಕೆನ್ನಾಲಿಗೆ ಎಲ್ಲೆಡೆ ಆವರಿಸಿದೆ ಎಂದು ಆ ಸಂದರ್ಭದಲ್ಲಿ ಡೈರಿಯ ಬಳಿ ಇದ್ದ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಘಟನೆ ವಿವರ: ಭಾನುವಾರ ಬೆಳಗ್ಗೆ 7ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನೌಕರರು ಹೋಗಿ ನೋಡಿದಾಗ ಬೆಂಕಿ ಜ್ವಾಲೆ ಹೆಚ್ಚಾಗಿದ್ದು, ನಂದಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಬೆಂಕಿ ವೇಗವಾಗಿ ಎಲ್ಲೆಡೆ ಆವರಿಸಿದ್ದರಿಂದ ಪ್ಯಾಕಿಂಗ್ ಘಟಕಕ್ಕೆ ಹಾನಿಯಾಗಿದೆ. ಪ್ಯಾಕಿಂಗ್ ತಯಾರಿಕಾ ಘಟಕದ ಪಕ್ಕದಲ್ಲೇ ತುಪ್ಪ, ಖೋವಾ ತಯಾರಿಕಾ ಘಟಕವೂ ಇದ್ದು, ಸದ್ಯ ಆ ಸ್ಥಳಕ್ಕೆ ಬೆಂಕಿಯ ಕೆನ್ನಾಲಿಗೆ ಚಾಚಿಲ್ಲ. ಒಂದು ವೇಳೆ ಆ ಸ್ಥಳದಲ್ಲೂ ಬೆಂಕಿ ಕಾಣಿಸಿಕೊಂಡಿದ್ದರೆ ಲಕ್ಷಾಂತರ ರೂ. ಮೌಲ್ಯದ ತುಪ್ಪ ಹಾಗೂ ಖೋವಾ ಬೆಂಕಿಗೆ ಆಹುತಿಯಾಗುತ್ತಿತ್ತು. ಅದೃಷ್ಟವಶಾತ್ ಭಾನುವಾರ ರಜೆ ಇದ್ದಿದ್ದರಿಂದ ಯಾವುದೇ ಕಾರ್ಮಿಕರು ಮತ್ತು ಸಿಬ್ಬಂದಿ ಇಲ್ಲದಿದ್ದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಮೆಗಾ ಡೇರಿ ಕಟ್ಟಡದಲ್ಲಿ ಬೆಂಕಿ ಧಗಧಗಿಸಿ ಹೊತ್ತಿ ಉರಿದಿದ್ದರಿಂದ ಮನ್‌ಮುಲ್ ಆವರಣದಲ್ಲಿ ದಟ್ಟ ಹೊಗೆ ಆವರಿಸಿತ್ತು. ತಕ್ಷಣವೇ ಬೆಂಕಿ ನಂದಿಸಲು ಸ್ಥಳೀಯ ನೌಕರರು ಮತ್ತು ಅಗ್ನಿಶಾಮಕ ಸಿಬ್ಬಂದಿ ಹರಸಾಹಸಪಟ್ಟು ಬೆಂಕಿ ನಂದಿಸಲು ಸಂಪೂರ್ಣ ಯಶಸ್ವಿಯಾದರು. ಮಂಡ್ಯ, ಮದ್ದೂರು ಸೇರಿದಂತೆ ಮೈಸೂರಿನಿಂದ ಹೆಚ್ಚುವರಿಯಾಗಿ ಅಗ್ನಿಶಾಮಕ ದಳ ಆಗಮಿಸಿ ಒಟ್ಟು 7 ಅಗ್ನಿಶಾಮಕ ದಳದ ಸಹಾಯದಿಂದ ಬೆಂಕಿಯನ್ನು ಸಂಪೂರ್ಣ ನಂದಿಸಲು ಸಾಧ್ಯವಾಯಿತು.

ಅಮಿತ್ ಶಾ ಉದ್ಘಾಟಿಸಿದ್ದ ಡೇರಿ: ಕಳೆದ ಡಿಸೆಂಬರ್‌ನಲ್ಲಿ ಮೆಗಾಡೇರಿಯನ್ನು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಉದ್ಘಾಟಿಸಿದ್ದರು. ಕೇಂದ್ರ ಸರ್ಕಾರದ ಸಹಕಾರದಿಂದ ನಿರ್ಮಾಣವಾಗಿದ್ದ ಡೇರಿಯನ್ನು ಅಂದು ಮಂಡ್ಯದಲ್ಲಿ ಬಿಜೆಪಿ ಪಕ್ಷದ ಬೃಹತ್ ಸಮಾವೇಶಕ್ಕಾಗಿ ಆಗಮಿಸಿದ್ದ ಶಾ, ಡೇರಿಯ ನೂತನ ಕಟ್ಟಡವನ್ನು ಸಹ ಉದ್ಘಾಟಿಸಿದ್ದರು.

ಪ್ಯಾಕಿಂಗ್ ವಸ್ತುಗಳು ನಾಶ: ಅವಘಡದ ಬಗ್ಗೆ ಮಂಡ್ಯ ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಕೆ.ಪಿ.ಗುರುರಾಜ್ ಮಾತನಾಡಿ, ಭಾನುವಾರ ಬೆಳಗ್ಗೆ 7.45ಕ್ಕೆ ಬೆಂಕಿ ಅವಘಡದ ಬಗ್ಗೆ ಮಾಹಿತಿ ಬಂತು. ನಾವು ಬರುವಷ್ಟರಲ್ಲಿ ಪ್ಯಾಕಿಂಗ್ ವಸ್ತುಗಳು ನಾಶವಾಗಿತ್ತು. ಸರಿಯಾದ ಸಮಯಕ್ಕೆ ಸಿಬ್ಬಂದಿಗಳಿಂದ ಬೆಂಕಿ ನಂದಿಸುವ ಕಾರ್ಯಕ್ಕೆ ಮುಂದಾಗಿದ್ದರಿಂದ ದೊಡ್ಡ ಅವಘಡ ತಪ್ಪಿಸಿದೆ. ಮದ್ದೂರು, ಮಂಡ್ಯ, ಮೈಸೂರು ಸೇರಿ ತಕ್ಷಣ 7 ಅಗ್ನಿಶಾಮಕ ದಳ ವಾಹನದಿಂದ ಬೆಂಕಿ ನಂದಿಸುವ ಕಾರ್ಯದಲ್ಲಿ ಯಶಸ್ವಿಯಾಗಿದೆ ಎಂದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿರುವ ಸಾಧ್ಯತೆ ಇದ್ದು, ಅಗ್ನಿಶಾಮಕದಳದಿಂದ ಮೆಗಾ ಡೈರಿಗೆ ಎನ್‌ಓಸಿ ಪಡೆದಿಲ್ಲ. ಅಲ್ಲದೆ ಫೈರಿಂಗ್ ಸೇಫ್ಟಿಯನ್ನು ತೆಗೆದುಕೊಂಡಿಲ್ಲ. ● 8ನೇ ಪುಟಕ್ಕೆ

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 101.20 ಅಡಿ	ಇಂದಿನ ಮಟ್ಟ 2,276.65 ಅಡಿ	ಇಂದಿನ ಮಟ್ಟ 2,856.09 ಅಡಿ
ಹಿಂದಿನ ವರ್ಷದ ಮಟ್ಟ 123.70 ಅಡಿ	ಹಿಂದಿನ ವರ್ಷದ ಮಟ್ಟ 2,282.07 ಅಡಿ	ಹಿಂದಿನ ವರ್ಷದ ಮಟ್ಟ 2,853.75 ಅಡಿ
ನಿನ್ನೆಯ ಮಟ್ಟ 101.22 ಅಡಿ	ನಿನ್ನೆಯ ಮಟ್ಟ 2,276.51 ಅಡಿ	ನಿನ್ನೆಯ ಮಟ್ಟ 2,855.82 ಅಡಿ
ಇಂದಿನ ಒಳಹರಿವು 3,682 ಕ್ಯುಸೆಕ್	ಇಂದಿನ ಒಳಹರಿವು 1,972 ಕ್ಯುಸೆಕ್	ಇಂದಿನ ಒಳಹರಿವು 2,240 ಕ್ಯುಸೆಕ್
ಇಂದಿನ ಹೊರಹರಿವು 3,719 ಕ್ಯುಸೆಕ್	ಇಂದಿನ ಹೊರಹರಿವು 1,000 ಕ್ಯುಸೆಕ್	ಇಂದಿನ ಹೊರಹರಿವು 1,150 ಕ್ಯುಸೆಕ್

ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯ ಬೆಳೆಸಿಕೊಳ್ಳಿ

ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸಲಹೆ



ಮೈಸೂರು, ಅ.8(ಜಿಎ)– ದೇವರ ಸನ್ನಿಧಿಗಳಿಗೆ ಹೋಗುವುದರ ಜೊತೆಗೆ ಗ್ರಂಥಾಲಯಗಳಲ್ಲಿ ಕುಳಿತು ಉತ್ತಮ ಪುಸ್ತಕವನ್ನು ಓದಿ ಜ್ಞಾನ ವೃದ್ಧಿಸಿಕೊಳ್ಳಿ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸಲಹೆ ನೀಡಿದರು.

ನಗರದ ಸೆನೆಟ್ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮೈಸೂರು ಜಿಲ್ಲಾ ಶಾಖೆ ವತಿಯಿಂದ ಭಾನುವಾರ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿರುವಂತೆ ಶಿಕ್ಷಣದ ಜೊತೆ ಮಾನವೀಯ ಮೌಲ್ಯ, ಜ್ಞಾನವನ್ನು ಬೆಳೆಸಿಕೊಳ್ಳಿ. ಅಲ್ಲದೇ ಹೆಣ್ಣು ಮಕ್ಕಳು ಗ್ರಂಥಾಲಯಗಳಿಗೆ ತೆರಳಿ ಪುಸ್ತಕವನ್ನು ಓದಿ ವಿದ್ಯಾವಂತರಾಗಿ. ಪ್ರತಿಭೆಗಳನ್ನು ಪುರಸ್ಕರಿಸಿ ಗೌರವಿಸಿದರೆ ಉಳಿದ ಮಕ್ಕಳಿಗೂ ಓದುವಂತಹ ಮನಸ್ಸು ಬರುತ್ತದೆ. ಮಕ್ಕಳ ಉನ್ನತ ಶಿಕ್ಷಣಕ್ಕೆ ನೌಕರರ ಸಂಘದಿಂದ ಅನುಕೂಲವಾದರೆ ಅವರು ವಿದ್ಯಾವಂತರಾಗಲು ಇನ್ನಷ್ಟು ಆಸಕ್ತಿ ಹೊಂದುತ್ತಾರೆ ಎಂದರು.

ನೌಕರರ ನಿಲುವು ಬೇಡಿಕೆಗಳ ಬಗ್ಗೆ ಈಗಾಗಲೇ ತಿಳಿಸಿದ್ದು, ತಮ್ಮ ಸಂಘಟನೆ ಮೂಲಕ ಸಮಸ್ಯೆಗಳನ್ನು ಎತ್ತಿ ಹಿಡಿದರಷ್ಟೇ ಪರಿಹಾರ ಆಗುವುದು, ಮುಖ್ಯಮಂತ್ರಿಗಳೊಟ್ಟಿಗೆ ಈಗಾಗಲೇ ಮಾತನಾಡಿದ್ದು, ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಮನವಿ ಮಾಡಿದ್ದೇನೆ. ಸದ್ಯದಲ್ಲಿ ಜಾರಿಯಾಗಲಿದೆ. ಅಲ್ಲದೆ ಶಿಕ್ಷಕರ ಸಮುದಾಯದ ಪರವಾಗಿ ನಾವು ಕೂಡ ಧ್ವನಿ ಎತ್ತಲು ಮುಂದಿದ್ದು, ಶಿಕ್ಷಕರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದರ ಜೊತೆಗೆ ಯಾರೇ ಅಧಿಕಾರಕ್ಕೆ ಬಂದರೂ ಹೋರಾಟ ಮಾಡುವುದಕ್ಕೂ ನಾನು ನಿಮ್ಮೊಟ್ಟಿಗೆ ಇರುತ್ತೇನೆಂದು ಭರವಸೆ ನೀಡಿದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮವಾದ ವಿದ್ಯಾಭ್ಯಾಸ ಮಾಡಿದರೆ ಉನ್ನತ ಶಿಕ್ಷಣಕ್ಕೆ ಅನುಕೂಲ ಆಗುತ್ತದೆ. ನಮ್ಮ ಸಂಸ್ಥೆಯು ಸರ್ಕಾರಿ ನೌಕರರ ಮಕ್ಕಳಿಗೆ ಸರ್ಕಾರಿ ಶುಲ್ಕವನ್ನು ಪಡೆಯುವುದರ ಜೊತೆಗೆ ಅದರಲ್ಲೂ ಶೇ.50ರಷ್ಟು ರಿಯಾಯಿತಿಯಲ್ಲಿ ಪ್ರವೇಶಾತಿ ನೀಡಿ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ವಿದ್ಯಾರ್ಥಿಯು ಜೀವನ ಬಹಳ ಉತ್ಕೃಷ್ಟವಾದದ್ದು, ಅದನ್ನು ಸದುಪಯೋಗ ಮಾಡಿಕೊಂಡರೆ, ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಯು ಜೀವನದಲ್ಲಿ ವಿದ್ಯೆಯನ್ನು ಅರಿತುಕೊಳ್ಳಲಷ್ಟೆ ಉಪಯೋಗ ಮಾಡಿಕೊಳ್ಳಬೇಕು. ದುಶ್ಚಟಗಳಿಗೆ ಬಲಿಯಾಗಬಾರದು. ಶಿಕ್ಷಣದ ಜೊತೆಗೆ ಇಂದಿನ ಮಕ್ಕಳು ನಮ್ಮ ಭಾರತೀಯ ಸಂಸ್ಕೃತಿ, ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು ಹಾಗೂ ಸಮಾಜಕ್ಕೆ ಉತ್ತಮ ಕಾರ್ಯಗಳನ್ನು ಮಾಡುವಂತಹ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ್, ರಾಜ್ಯ ಖಜಾಂಚಿ ಆರ್.ಶ್ರೀನಿವಾಸ್, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ, ಹಿರಿಯ ಉಪಾಧ್ಯಕ್ಷರಾದ ಎಂ.ವಿ.ರುದ್ರಪ್ಪ, ಎಸ್.ಬಸವರಾಜು, ಮಾಲಂಗಿ ಸುರೇಶ್, ಕೆ.ಆರ್.ನಗರ ಶಾಖೆಯ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ರಿಜ್ವಾನ್ ಮತ್ತು ರಾಜ್ಯ ಉಪಾಧ್ಯಕ್ಷರು, ತಾಲೂಕು ಅಧ್ಯಕ್ಷರು, ಸಂಘದ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜಿಲ್ಲೆಯ ಎಲ್ಲಾ ವೃಂದ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬರ ಪರಿಸ್ಥಿತಿ ಬಗ್ಗೆ ಕೇಂದ್ರ ತಂಡ ಸಮರ್ಪಕ ಅಧ್ಯಯನ ಮಾಡಬೇಕು

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ




ಮೈಸೂರು,ಅ.8 (ಬಿಎಲ್‌ಯು)–ಬರ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಲು ರಾಜ್ಯಕ್ಕೆ ಆಗಮಿಸಿರುವ ಕೇಂದ್ರ ಸರ್ಕಾರದ ತಂಡ ಸಮರ್ಪಕವಾಗಿ ಅಧ್ಯಯನ ಮಾಡಿ ಸರಿಯಾದ ಮಾಹಿತಿ ನೀಡಿದರೆ ಮಾತ್ರ ರೈತರಿಗೆ ಸೂಕ್ತ ಪರಿಹಾರ ದೊರೆಯಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬರ ಅಧ್ಯಯನ ತಂಡದ ವಿರುದ್ಧ ನಿನ್ನೆ ಕೂಡ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವಿಚಾರ ನನ್ನ ಗಮನಕ್ಕೆ ಕೂಡ ಬಂದಿದೆ ಎಂದರು.

ಬರ ಅಧ್ಯಯನ ತಂಡದವರು ಸೂಕ್ತ ರೀತಿಯಲ್ಲಿ ಅಧ್ಯಯನ ಮಾಡಿ ಕೇಂದ್ರ ಸರ್ಕಾರಕ್ಕೆ ಸರಿಯಾದ ಸಮಗ್ರ ಮಾಹಿತಿ ನೀಡಬೇಕು. ಈ ಮೂಲಕ ರಾಜ್ಯದ ರೈತರಿಗೆ ಸೂಕ್ತ ಪರಿಹಾರ ದೊರೆಯಲು ಸಾಧ್ಯ ಎಂದು ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನ ಆನೇಕಲ್ ಬಳಿಯ ಅತ್ತಿಬೆಲೆ ಪಟಾಕಿ ದುರಂತದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಲೈಸನ್ಸ್ ಪಡೆದು ಪಟಾಕಿ ದಾಸ್ತಾನು ಮಾಡಲಾಗಿತ್ತೆ ಎಂಬ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ತಪ್ಪಿತಸ್ಥರಾದರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇಸ್ರೇಲ್ ಹಾಗೂ ಹಮಾಸ್ ಉಗ್ರರ ನಡುವೆ ಯುದ್ಧ ನಡೆಯುತ್ತಿರುವ ಪ್ರದೇಶದಲ್ಲಿ ಕನ್ನಡಿಗರು ಸಿಲುಕಿರುವ ಬಗ್ಗೆ ಈ ತನಕ ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿದ್ದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ನಾಗೇಶ, ವಾರದ ಸಮಾವೇಶದ ನಿರ್ವಾಹಕ ಸುನೀಲ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಿಧ ತಾಲೂಕುಗಳಿಗೆ ಮೈಸೂರು ವಿಭಾಗದ ಲೋಕಾಯುಕ್ತರ ಭೇಟಿ

ಮೈಸೂರು,ಅ.8–ಕರ್ನಾಟಕ ಲೋಕಾಯುಕ್ತ ಮೈಸೂರು ಜಿಲ್ಲಾ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ಅ.11ರಂದು ವಿವಿಧ ತಾಲೂಕುಗಳಿಗೆ ಭೇಟಿ ನೀಡಲಿದ್ದು, ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಬಹುದಾಗಿದೆ.

ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ಸಾರ್ವಜನಿಕ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಸಾರ್ವಜನಿಕ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿ ಮಾಡಿದ ದೂರುಗಳನ್ನು ನಮೂನೆ 01ರಲ್ಲಿ ಮತ್ತು 02ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳೊಡನೆ ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅ11ರಂದು ಮೈಸೂರು ನಗರ, ಮೈಸೂರು ತಾಲೂಕಿನ ಮಿನಿ ವಿಧಾನ ಸೌಧ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲೂಕಿನ ಸರ್ಕಾರಿ ಅತಿಥಿ ಗೃಹ, ಮಡಿಕೇರಿ ಜಿಲ್ಲೆ ಸೋಮವಾರಪೇಟೆ ತಾಲೂಕಿನ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ದೂರು ಸಲ್ಲಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು, ಕರ್ತವ್ಯ ಲೋಪವೆಸಗುವ ಭ್ರಷ್ಟ ಸರ್ಕಾರಿ, ಸಾರ್ವಜನಿಕ ನೌಕರರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರಿಗೆ ಅರ್ಜಿ ಆಹ್ವಾನ

ಮೈಸೂರು, ಅ.8– ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), 2023–24ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರು, ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಗದಿಪಡಿಸಿದ ಸಂಚಿತ ಸಂಭಾವನೆ, ಗೌರವಧನ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.12ರಂದು ಕೊನೆ ದಿನ. ಅ.13ರಂದು ಬೆಳಗ್ಗೆ 11 ಗಂಟೆಗೆ ಸಂಸ್ಥೆಯಲ್ಲಿ ಸಂದರ್ಶನ ನಡೆಸಲಾಗುವುದು. ಆಸಕ್ತರು www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.ಸಂಖ್ಯೆ 0821–2438931 ಸಂಪರ್ಕಿಸಿ.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ

ಮೈಸೂರು, ಅ.8– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್‌ವಸತಿ ಕಾರ್ಯಕ್ರಮದಲ್ಲಿ ಹುಣಸೂರು ತಾಲೂಕಿನ ಮೋದೂರು, ಬಿಳಿಗೆರೆ, ಮನುಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಮಾಸಿಕ 9 ಸಾವಿರ ಗೌರವಧನದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಸಮರ್ಥ ವಿಕಲ ಚೇತನ ವ್ಯಕ್ತಿಗಳು ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲೂಕು ಪಂಚಾಯಿತಿಯಲ್ಲಿರುವ ಪುನರ್ವಸತಿ ಕಾರ್ಯಕರ್ತರಿಂದ (ಶ್ರೀ ದೇವರಾಜ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ಹುಣಸೂರು ತಾಲೂಕು) ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಅ.17ರೊಳಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸುವಂತೆ ಮೈಸೂರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನುಶಾಸ್ತ್ರದ ಶ್ಲೋಕಗಳಲ್ಲಿ ಜಾತಿ ಶ್ರೇಷ್ಠತೆ, ಸಂಪತ್ತಿನ ಒಡೆತನದ ಉಲ್ಲೇಖ ತಾರತಮ್ಯತೆಗೆ ಕನ್ನಡಿ ಹಿಡಿದಿದೆ

ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಬಸವರಾಜ ಸಾದರ ಅಭಿಮತ



> “ವಚನಕಾರರು ತಮ್ಮ ವಚನಗಳಲ್ಲಿ 'ಸನಾತನ ಧರ್ಮ' ಎನ್ನುವುದನ್ನು ಒಪ್ಪಿಕೊಳ್ಳದೇ 'ಪುರಾತನ ಧರ್ಮ' ಎಂದು ಉಲ್ಲೇಖಿಸಿ, 'ಸನಾತನ'ಕ್ಕೆ ಪರ್ಯಾಯವಾಗಿ 'ಪುರಾತನ' ಎಂದು ಕರೆಯುತ್ತಿದ್ದರು. ಇದು ಸಹ ಒಪ್ಪುವ ಮಾತು. **–ಎಸ್.ಜಿ.ಸಿದ್ದರಾಮಯ್ಯ ಹಿರಿಯ ಸಾಹಿತಿ**

ಮೈಸೂರು, ಅ.8(ಎಸ್‌ಪಿಎನ್)–ಮನುಶಾಸ್ತ್ರದ ಶ್ಲೋಕಗಳಲ್ಲಿ ಜಾತಿ ಶ್ರೇಷ್ಠತೆ ಹಾಗೂ ಸಂಪತ್ತು ಒಡೆತನ ಕುರಿತು ವಿವರಿಸಿದ್ದು, ಇದರಲ್ಲಿ ಸಮಾನತೆಯ ತಾರತಮ್ಯದ ಮೇರುಪರ್ವತ ಅರಿವಿಗೆ ಬರುತ್ತದೆ ಎಂದು ಬೆಂಗಳೂರು ಆಕಾಶವಾಣಿ ನಿವೃತ್ತ ನಿರ್ದೇಶಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಬಸವರಾಜ ಸಾದರ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮೈಸೂರು ನಗರ ಮತ್ತು ಜಿಲ್ಲಾ ಘಟಕ, ವೀರಶೈವ ಲಿಂಗಾಯತ ಸಂಘ–ಸಂಸ್ಥೆ ಹಾಗೂ ಬಸವ ಬಳಗಗಳ ಒಕ್ಕೂಟ ಸೇರಿದಂತೆ ಇತರೆ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ನಡೆದ ಎರಡು ದಿನಗಳ ಬಸವ ಜಯಂತಿ ಕಾರ್ಯಕ್ರಮದ ವಿಚಾರ ಗೋಷ್ಠಿಯಲ್ಲಿ 'ಸಮಾನತೆ: ಬಸವಣ್ಣನವರ ಸಮಾನತೆಯ ಆಶಯಗಳು' ಶೀರ್ಷಿಕೆಯಡಿ 'ಸಮ ಸಮಾಜ' ಕುರಿತು ಮಾತನಾಡಿದರು.

ಮನುಶಾಸ್ತ್ರದ 99 ಮತ್ತು ನೂರನೇ ಶ್ಲೋಕದಲ್ಲಿ ಬ್ರಾಹ್ಮಣ ಶ್ರೇಷ್ಠ ಜಾತಿ ಹಾಗೂ ಜಾತಿ ಶ್ರೇಷ್ಠತೆಯ ಕಾರಣಕ್ಕೆ ರಾಜ್ಯದ ಭೂಮಿ ಒಡೆತನದ ಕುರಿತು ವಿವರಿಸುತ್ತದೆ. ಇದಕ್ಕಾಗಿಯೇ ಮನುಶಾಸ್ತ್ರ ಬಡವರ, ಶೋಷಿತರ, ಅಸ್ಪೃಶ್ಯರ ವಿರೋಧಿ ಎಂದು ಬಿಂಬಿತವಾಗಿದೆ ಎಂದರು. 12ನೇ ಶತಮಾನದ ಕ್ರಾಂತಿಯಿಂದ ಸಮಾಜದ ಮೇಲೆ ಯಾವುದೇ ಪರಿಣಾಮ ಬೀರಲ್ಲ ಎಂದು ಕೆಲವರು ವಾದಿಸುತ್ತಾರೆ. ಅದಕ್ಕೆ ಉದಾಹರಣೆ ನೀಡುವುದು ಐದು ಬೆರಳು ಒಂದೇ ಸಮಾನಾಗಿಲ್ಲ. ಪ್ರಕೃತಿಯಲ್ಲೇ ಸಮಾನತೆ ತರಲು ಸಾಧ್ಯವಾಗಿಲ್ಲ. ಇನ್ನು ಕ್ರಾಂತಿಯಿಂದ ಸಾಧ್ಯವೇ ಎಂದು ಪ್ರಶ್ನಿಸುವವರಿದ್ದಾರೆ ಎಂದ ಅವರು, ಈ ಕ್ರಾಂತಿಯ ಆಶಯಗಳು, ಅದರ ಪ್ರಸ್ತುತ ಕುರಿತು ಇಂದಿನ ವೇದಿಕೆಯಲ್ಲಿ ನೆನೆಯುತ್ತಿರುವುದೇ ಸಾಕ್ಷಿ. ಯಾವುದೇ ಕ್ರಾಂತಿ ತಕ್ಷಣಕ್ಕೆ ಫಲ ಕೊಡುವುದಿಲ್ಲ. ಆದರೆ, ಅದರ ಎಫೆಕ್ಟ್ ದೀರ್ಘಕಾಲದ್ದಾಗಿರುತ್ತದೆ. ಬಸವಣ್ಣ ತಾನು ಹುಟ್ಟಿದ ಜಾತಿಯನ್ನೇ ಧಿಕ್ಕರಿಸಿ, ಲಿಂಗಾಯತ ಧರ್ಮ ಸ್ಥಾಪನೆಗೆ ಮುಂದಾಗಿದ್ದು, ತಾನು ಜನಿಸಿದ ಜಾತಿಯಲ್ಲಿನ ತಾರತಮ್ಯದ ಕುರಿತು ತಮ್ಮ ವಚನಗಳ ಮೂಲಕ ಪ್ರಶ್ನಿಸಿರುವುದು ಇಂದಿಗೂ ಸತ್ಯ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ವಿಚಾರ ಗೋಷ್ಠಿಯ ಅಧ್ಯಕ್ಷೀಯ ಭಾಷಣ ಮಾಡಿದರು. ಪ್ರೊ.ಲೋಲಾಕ್ಷಿ ಅವರು ಸ್ತ್ರೀ ಸಮಾನತೆ ಕುರಿತು ಮಾತನಾಡಿದರು. ಬೆಂಗಳೂರಿನ ಡಾ.ಹೆಚ್.ದಂಡಪ್ಪ ಅವರು 'ಕಾಯಕ ತತ್ವ' ಕುರಿತು ಮಾತನಾಡಿದರು. ನಂತರ ವಿದುಷಿ ಶುಭ ರಾಘವೇಂದ್ರ ಮತ್ತು ತಂಡದವರು ವಚನಗಾಯನ ನಡೆಸಿಕೊಟ್ಟರು. ವೇದಿಕೆಯಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಟಿ.ಲಿಂಗರಾಜು ಹಡಜನ, ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್, ಕೋಶಾಧ್ಯಕ್ಷ ಎನ್.ಜಿ.ಗಿರೀಶ್, ಪ್ರಧಾನ ಕಾರ್ಯದರ್ಶಿ ದೇವಲಾಪುರ ಡಿ.ಪಿ.ಸುರೇಶ್ ಉಪಸ್ಥಿತರಿದ್ದರು.

'ಮಹಿಷಾ ದಸರಾ' ವಿರುದ್ಧ 'ಚಾಮುಂಡಿಬೆಟ್ಟ ಚಲೋ'ಗೆ ಅನುಮತಿ ನೀಡುವಂತೆ ಪೊಲೀಸ್ ಆಯುಕ್ತರಿಗೆ ಬಿಜೆಪಿ ಮನವಿ



ಮೈಸೂರು,ಅ.8(ಎಸ್‌ಪಿಎನ್)– 'ಮಹಿಷ ದಸರಾ' ಆಚರಿಸುವುದನ್ನು ವಿರೋಧಿಸಿ ಭಾರತೀಯ ಜನತಾ ಪಾರ್ಟಿಯಿಂದ ಅ.13ರಂದು ಬೆಳಗ್ಗೆ 8 ಗಂಟೆಗೆ 'ಚಾಮುಂಡಿಬೆಟ್ಟ ಚಲೋ' ಹಮ್ಮಿಕೊಂಡಿದ್ದು, ಇದಕ್ಕೆ ಅನುಮತಿ ನೀಡುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರಿಗೆ, ಶಾಸಕ ಟಿ.ಎಸ್.ಶ್ರೀವತ್ಸ ಅವರ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಿದ್ದಾರೆ.

ಮೈಸೂರು ದಸರಾ ಪ್ರತಿವರ್ಷದಂತೆ ಇದೇ ತಿಂಗಳು ಅ.15ರಿಂದ ಆರಂಭವಾಗುತ್ತಿರುವುದು ಸರಿಯಷ್ಟೆ. ಆದರೆ, 500 ವರ್ಷಗಳಿಗೂ ಹೆಚ್ಚು ಇತಿಹಾಸವಿರುವ ದಸರಾ ಉತ್ಸವವು ವಿಜಯನಗರ ಅರಸರ ಕಾಲದಿಂದ ಪ್ರಾರಂಭಗೊಂಡು ನಂತರದ ದಿನಗಳಲ್ಲಿ ಮೈಸೂರಿನಲ್ಲಿ ಮುಂದುವರೆದು ಜಗತ್ಪ್ರಸಿದ್ಧವಾಗಿದೆ. ದುಷ್ಟಶಕ್ತಿಯ ಸಂಹಾರ ಶಿಷ್ಟಶಕ್ತಿಯ ವಿಜೃಂಭಣೆಯ ಪ್ರತೀಕವಾಗಿರುವ ಈ ನವರಾತ್ರಿಯ 9 ದಿನಗಳಲ್ಲಿ ನವದುರ್ಗೆಯನರನ್ನು ಪೂಜಿಸುವುದು ಬಹುಕೋಟಿ ಜನರ ಸಂಪ್ರದಾಯವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕೆಲ ವ್ಯಕ್ತಿಗಳು 'ಮಹಿಷ ದಸರಾ' ಎಂಬ ಶೀರ್ಷಿಕೆಯಡಿ ಪುರಾಣದಲ್ಲಿ ಇಲ್ಲದ ಆಚರಣೆಯನ್ನು ಪ್ರಾರಂಭಿಸಿ ಸಮಾಜ ಒಡೆಯುವ ಕೆಲಸದಲ್ಲಿ ತೊಡಗಿದ್ದಾರೆ. ಈ ವರ್ಷವೂ ಮಹಿಷಾ ದಸರಾ ನಡೆಸಲು ಮುಂದಾಗಿರುವುದನ್ನು ವಿರೋಧಿಸಿ ಅ.13ರಂದು ಬೆಳಗ್ಗೆ 8 ಗಂಟೆಗೆ 'ಚಾಮುಂಡಿ ಚಲೋ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಹಿಷ ದಸರಾ ವಿರೋಧಿಸಲು ಸಂಸದ ಪ್ರತಾಪ ಸಿಂಹ, ಮೇಯರ್ ಶಿವಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಇತರೆ ಬಿಜೆಪಿ ಮುಖಂಡರು, ನೆರೆ ಜಿಲ್ಲೆಯ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಾಲ್ಗೊಳ್ಳುತ್ತಿರುವ ಸದರಿ ಕಾರ್ಯಕ್ರಮಕ್ಕೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ.

ಮಹಿಷ ದಸರಾ ಆಚರಣೆಯಿಂದ ಯಾರಿಗೂ ನೋವುಂಟು ಮಾಡಲ್ಲ

ಶ್ರೀ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸ್ಪಷ್ಟನೆ



ಮೈಸೂರು, ಅ.8(ಬಿಎಲ್‌ಯು)– ಮಹಿಷಾ ದಸರಾ ಆಚರಣೆ ಮೂಲಕ ಯಾರ ಮನಸ್ಸಿಗೂ ನೋವುಂಟು ಮಾಡುವುದು ನಮ್ಮ ಉದ್ದೇಶವಲ್ಲ ಎಂದು ಮೈಸೂರಿನ ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ದಸರಾಗೆ ಪರ್ಯಾಯವಾಗಿ ನಾವು ಮಹಿಷ ದಸರಾ ಮಾಡುತ್ತಿಲ್ಲ ಎಂದು ತಿಳಿಸಿದರು.

ರೈತ ದಸರಾ, ಮಹಿಳಾ ದಸರಾ ರೀತಿ ಮಹಿಷಾ ದಸರಾ ಆಚರಣೆ ಮಾಡುತ್ತಿದ್ದೇವೆ. ಮಹಿಷ ಮಹೋತ್ಸವ, ಮಹಿಷಾ ದಿನಾಚರಣೆ ಅಥವಾ ಮಹಿಷಾ ಸಮಾವೇಶದ ಹೆಸರಿನಲ್ಲಿ ಈ ಆಚರಣೆ ಮಾಡುತ್ತಿದ್ದೇವೆ. ಇದನ್ನು ಹತ್ತು ದಿನಗಳ ಕಾಲ ಆಚರಣೆ ಮಾಡದೆ ಒಂದು ದಿನದ ಕಾರ್ಯಕ್ರಮವಾಗಿ ಆಚರಣೆ ಮಾಡುತ್ತಿದ್ದೇವೆ ಎಂದು ಸ್ವಾಮೀಜಿ ಹೇಳಿದರು.

ಮಹಿಷ ದಸರಾ ಆಚರಣೆ ವಿಚಾರವಾಗಿ ನ್ಯಾಯಾಲಯದ ಮೊರೆ ಹೋಗಿರುವುದು ಸಂತೋಷ. ನ್ಯಾಯಾಲಯದ ತೀರ್ಪನ್ನು ನಾವು ಸ್ವಾಗತಿಸುತ್ತಿದ್ದೇವೆ. ಈ ಸಂಬಂಧ ನ್ಯಾಯಾಲಯಕ್ಕೆ ನಾವು ಕೂಡ ಹಲವು ದಾಖಲೆಗಳನ್ನು ನೀಡುತ್ತೇವೆ ಎಂದರು.

ಸಾಮಾಜಿಕ ಹೋರಾಟಗಾರ ಮಂಟೇಲಿಂಗಯ್ಯ 1974 ರಲ್ಲೇ ಮಹಿಷನಿಗೆ ಪೂಜೆ ಸಲ್ಲಿಸಿ ಮಹಿಷ ದಸರಾ ಆರಂಭಿಸಿದರು. ಈ ಹಿನ್ನೆಲೆ ಮಹಿಷ ದಸರಾ ಆಚರಣೆಗೆ 50 ವರ್ಷಗಳ ಇತಿಹಾಸವಿದೆ ಎಂದು ಸ್ವಾಮೀಜಿ ತಿಳಿಸಿದರು.

ಇಎಸ್‌ಐ ಪ್ರಯೋಜನ ಕುರಿತು ಕಾರ್ಮಿಕರಿಗೆ ಮಾಹಿತಿ ಕಾರ್ಯಾಗಾರ




ಮೈಸೂರು,ಅ.8 (ಪಿಎಂ)– ನ್ಯಾಷನಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್ (ಎನ್‌ಐಪಿಎಂ) ಮೈಸೂರು ಘಟಕದ ವತಿಯಿಂದ 'ಇಎಸ್‌ಐನ ಕಾರ್ಯವಿಧಾನ ಮತ್ತು ಪ್ರಯೋಜನಗಳು' ಕುರಿತು ಇತ್ತೀಚೆಗೆ ಮಾಹಿತಿ ಕಾರ್ಯಾಗಾರ ನಡೆಯಿತು.

ಇಎಸ್‌ಐಸಿನ (ನೌಕರರ ವಿಮಾ ನಿಗಮ) ಆಡಳಿತಾತ್ಮಕ ಅಂಶಗಳು, ಪ್ರಯೋಜನಗಳು ಮತ್ತು ಆಧಾರ್ ಕಾರ್ಡ್ ಜೋಡಣೆ ಕುರಿತು ಇಎಸ್‌ಐಸಿ ಶಾಖಾ ವ್ಯವಸ್ಥಾಪಕ ರಾಕೇಶ್‌ಕುಮಾರ್ ಝಾ ವಿವರವಾಗಿ ಮಾಹಿತಿ ನೀಡಿದರು. ಮೈಸೂರು ಇಎಸ್‌ಐ ಆಸ್ಪತ್ರೆಯ ಹಿರಿಯ ತಜ್ಞವೈದ್ಯ ಡಾ.ಮಾಲೇಗೌಡ, ವೈದ್ಯಕೀಯ ಅಂಶ ಹಾಗೂ ಕಾರ್ಯವಿಧಾನಗಳ ಬಗ್ಗೆ ಮಾಹಿತಿ ನೀಡಿದರು.

ಮೈಸೂರು ಮತ್ತು ನಂಜನಗೂಡಿನ ಕೈಗಾರಿಕೆ ಪ್ರದೇಶದ ವಿವಿಧ ಕೈಗಾರಿಕೆಗಳ 70ಕ್ಕೂ ಹೆಚ್ಚು ಕಾರ್ಮಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


ಇಎಸ್‌ಐಸಿ ಅಧೀಕ್ಷಕ ಶಿವಕುಮಾರ್, ವೀಕ್ಷಕ ಮಹೇಶ್, ಎನ್‌ಐಪಿಎಂ ಅಧ್ಯಕ್ಷ ಸಿ.ವಿ.ಶ್ರೀನಿವಾಸನ್, ಕಾರ್ಯದರ್ಶಿ ಎನ್.ದೇವರಾಜ್, ರಚನಾ ಮಹೇಶ್ ಮತ್ತಿತರರು ಹಾಜರಿದ್ದರು.

ಅಭಯ್‌ಗೆ ಪಿಹೆಚ್.ಡಿ ಪದವಿ



ಮೈಸೂರು,ಅ.8–ಮೈಸೂರು ವಿಶ್ವವಿದ್ಯಾನಿಲಯ ವಾಣಿಜ್ಯ ಶಾಸ್ತ್ರ ವಿಭಾಗದ ಡಾ.ಹೆಚ್.ರಾಜಶೇಖರ್ ಮಾರ್ಗದರ್ಶನದಲ್ಲಿ ಆರ್.ಅಭಯ್ ಸಂಶೋಧನೆ ನಡೆಸಿ ಸಾದರಪಡಿಸಿದ 'Effectiveness of Audit Committee Practices- A Study of Listed Companies in India' ಮಹಾಪ್ರಬಂಧವನ್ನು ವಿವಿ ಪಿಹೆಚ್.ಡಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.10.2023 ಸೋಮವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ


- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯಿಡ್ ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.
- **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ಮೈಸೂರು:** ಮೈಸೂರು ವಿಭಾಗ ಮಟ್ಟದ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರಿಗೆ ಒಂದು ದಿನದ ಮಾಹಿತಿ ಶಿಬಿರ, ಉದ್ಘಾಟನೆ: ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕಿ ವಿಜಯಲಕ್ಷ್ಮಿ, ಮುಖ್ಯ ಅತಿಥಿಗಳು: ಭಾರತ್ ಸ್ಕೌಟ್ಸ್ ಮತ್ತ ಗೈಡ್ಸ್ ರಾಜ್ಯ ಪ್ರಧಾನ ಆಯುಕ್ತ ಪಿಜಿಆರ್ ಸಿಂಧ್ಯಾ, ಅಧ್ಯಕ್ಷತೆ: ಜಿಲ್ಲಾ ಮುಖ್ಯ ಆಯುಕ್ತ ಪಿ.ವಿಶ್ವನಾಥ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ, ಬೆಳಗ್ಗೆ 10.30ಕ್ಕೆ.
- **ರಂಗಾಯಣ, ಮೈಸೂರು:** ಬಿ.ವಿ.ಕಾರಂತ ಕಾಲೇಜು ರಂಗೋತ್ಸವ–2023, 'ಕೂಳಿನ ಕಾಳಗ' ನಾಟಕ, ರಚನೆ: ಡಾ.ಮಾಧುಪ್ರಸಾದ್, ನಿರ್ದೇಶನ: ಸುಭಾಷ್ ಎ.ಎಸ್., ಸ್ಥಳ: ಭೂಮಿಗೀತೆ, ಸಂಜೆ 5.30ರಿಂದ
- **ಚಿನ್ಮಯ ಮಿಷನ್:** ಗೀತಾ ಜ್ಞಾನ ಯಜ್ಞ, ಧರ್ಮಸಂಸ್ಥಾನ ಯೋಗ (ಭಗವದ್ಗೀತೆಯ 5ನೇ ಅಧ್ಯಾಯ), ಸ್ವಾಮಿ ದತ್ತಪಾದಾನಂದರಿಂದ ಸ್ಥಳ: ಚಿನ್ಮಯ ಮಿಷನ್, ರಾಯಕ್ಷೇತ್ರ, ವಿದ್ಯಾರಣ್ಯಪುರಂ, ಸಂಜೆ 6.30ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಯನ' ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಶ್ರೀ ಉತ್ತರಾದಿ ಮಠರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಭಗವದ್ಗೀತಾ ಅಭಿಯಾನ, ಪಂ. ಶ್ರೀ ಕಪಿಲಾಚಾರ್ಯ ಗಲಗಲಿ ಅವರಿಂದ ಪ್ರವಚನ, ಸ್ಥಳ: ರೋಗಮೋಚನೆ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ 6.10 'ಅಂಚೆ–ಅಂಕನ ಆಕಾಶವಾಣಿ ಅಂಕಣ': ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಆರ್.ರಾಮಕೃಷ್ಣ, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 8.30 ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ–ವೃಂದಗಾನ, 12.45 ನಮ್ಮ ಆರೋಗ್ಯ: ವಿಶ್ವ ಮಾನಸಿಕ ಆರೋಗ್ಯ ವರ್ಧನೆ ಕುರಿತು ಡಾ.ಎಂ.ಎನ್.ರಾಜೇಶ್ ಅವರೊಂದಿಗೆ ಮಾತುಕತೆ, 1.00 ಪ್ರಗತಿಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಶೈಲ ಸಿದ್ದರಾಮಪ್ಪ, 3.00 ಆರ್.ಎನ್.ತ್ಯಾಗರಾಜನ್ ಮತ್ತು ಡಾ.ಆರ್.ಎನ್.ತಾರಾನಾಥನ್, ಯುಗಳ ಗಾಯನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ– ಹಿರಿಯ ನಾಗರಿಕರಲ್ಲಿ ಕಂಡು ಬರುವ ಸಾಮಾನ್ಯ ಸಮಸ್ಯೆಗಳು. ಭಾಗವಹಿಸುವವರು ಡಾ.ಪ್ರತಿಭೆ ಪೆರೇರ, 4.45 ಹಿಂದಿ ಪಾಠ: ಆಯೇಷಾ ಸುಲ್ತಾನಾ, 6.00 'ಅಂಚೆ– ಅಂಕನ ಆಕಾಶವಾಣಿ ಅಂಕಣ': ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: 'ಹಣ್ಣು–ಹೊನ್ನು' ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ, **ರಾತ್ರಿ:** 10.00 ನಾಟಕ.

ಕೊಡಗು ಗಾಲ್ಫ್ ಕ್ಲಬ್ ಓಪನ್ ಚಾಂಪಿಯನ್‌ಶಿಪ್–2023 ಟೂರ್ನಿ ಉದ್ಘಾಟನೆ




22ನೇ ಆವೃತ್ತಿಯ ಕೊಡಗು ಗಾಲ್ಫ್ ಓಪನ್ ಚಾಂಪಿಯನ್‌ಶಿಪ್–2023 ಟೂರ್ನಿಯನ್ನು ಮುಖ್ಯ ಅತಿಥಿಗಳಾದ ಕೆ.ಸಿ.ಬಿದ್ದಪ್ಪ ಅವರು ಉದ್ಘಾಟಿಸಿದರು. ಈ ವೇಳೆ ಜಯಚಾಮರಾಜೇಂದ್ರ ಗಾಲ್ಫ್ ಕ್ಲಬ್ ಅಧ್ಯಕ್ಷ ಡಾ. ಅಬ್ರಹಾಂ ಥೋಮಸ್, ಕ್ಯಾಪ್ಟನ್ ಕೆ.ಎ.ಅನಿಲ್‌ಕುಮಾರ್, ಗೌರವ ಕಾರ್ಯದರ್ಶಿ ವಿ.ಜಿ.ಆಚಾರ್, ಟೂರ್ನಮೆಂಟ್ ಉಪಸಮಿತಿ ಛೇರ್ಮನ್ ಎಂ.ಎ.ಬೋಪಣ್ಣ, ಜಯಚಾಮರಾಜೇಂದ್ರ ಗಾಲ್ಫ್ ಕ್ಲಬ್‌ನ ಅಸೋಸಿಯೇಷನ್ ಆಫ್ ಗಾಲ್ಫರ್ಸ್ ಅಧ್ಯಕ್ಷ ಡಾ.ಪಿ.ಎ.ಕುಶಾಲಪ್ಪ, ಕಾರ್ಯದರ್ಶಿ ಸಿ.ಬಿ.ಚನ್ನಪ್ಪ, ಖಜಾಂಚಿ ಬಿ.ಪಿ.ನಾಣಯ್ಯ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ದಸರಾ ನಾಡಕುಸ್ತಿಗೆ 220 ಜೋಡಿ

ಮೈಸೂರು, ಅ.8(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅ.15 ರಿಂದ 21 ರವರೆಗೆ ನಡೆಯುವ ನಾಡ ಕುಸ್ತಿಗೆ ಭಾನುವಾರ ಜೋಡಿ ಕಟ್ಟುವ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, 220 ಜೋಡಿಗಳನ್ನು ಕಟ್ಟುವ ಮೂಲಕ ಕುಸ್ತಿ ಪಂದ್ಯಾವಳಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮೈಸೂರಿನ ವಸ್ತುಪ್ರದರ್ಶನ ಆವರಣದ ಪಿ. ಕಾಳಿಂಗರಾವ್ ಗಾನ ಮಂಟಪದಲ್ಲಿ ಭಾನುವಾರ ನಡೆದ ದಸರಾ ನಾಡಕುಸ್ತಿ ಪಂದ್ಯಾವಳಿಯ ಜೋಡಿಕಟ್ಟುವ ಪ್ರಕ್ರಿಯೆಯಲ್ಲಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ 500 ಕ್ಕೂ ಹೆಚ್ಚು ಕುಸ್ತಿ ಪಟುಗಳು ಪಾಲ್ಗೊಂಡಿದ್ದರು. ಶಾಸಕರಾದ ಕೆ.ಹರೀಶ್‌ಗೌಡ ಹಾಗೂ ಟಿ.ಎಸ್.ಶ್ರೀವತ್ಸ ಜೋಡಿ ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡಿದರು.

ಜೋಡಿ ಕಟ್ಟುವ ಕಾರ್ಯದಲ್ಲಿ ತೊಡಗಿದ್ದ ಹಿರಿಯ ಕುಸ್ತಿಪಟುಗಳು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಕುಸ್ತಿಪಟುಗಳನ್ನು ವಯಸ್ಸು, ತೂಕದ ಆಧಾರದಲ್ಲಿ 220 ಜೋಡಿ ಕಟ್ಟಿದರು. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ನೂರಕ್ಕೂ ಹೆಚ್ಚು ಮಂದಿ ಕುಸ್ತಿಪಟುಗಳು ಆಗಮಿಸಿರುವುದು ವಿಶೇಷ. ರಾಜ್ಯದ ವಿವಿಧ ಗರಡಿಗಳ 70ಕ್ಕೂ ಹೆಚ್ಚು ಮಂದಿ 17 ವರ್ಷದ ಒಳಪಟ್ಟ ಉದಯೋನ್ಮುಖ ಕುಸ್ತಿಪಟುಗಳು ನಾಡಕುಸ್ತಿಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದಾರೆ. 7 ದಿನಗಳ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಪ್ರತಿದಿನ 30 ಜೋಡಿಗಳಿಗೆ ಸ್ಪರ್ಧೆ ನಡೆಯಲಿದ್ದು, ಅದರಂತೆ 220 ಜೋಡಿ ಕುಸ್ತಿಯಲ್ಲಿ ಸೆಣೆಸಲು ನಿಗದಿವಾಡಲಾಗಿದೆ. ಇದರಿಂದಾಗಿ ಕೆಲ ಕುಸ್ತಿಪಟುಗಳಿಗೆ ಸೆಣೆಸಲು ಅವಕಾಶ ಕೈ ತಪ್ಪಿದಂತಾಗಿದ್ದು, ನಿರಾಸೆಯಿಂದ ವಾಪಸ್ಸಾದ ಘಟನೆಯೂ ಇಂದು ಜರುಗಿತು.



ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಿಇಓ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಎಸ್ಪಿ ಸೀಮಾ ಲಾಟ್ಕರ್, ಕುಸ್ತಿ ಉಪ ಸಮಿತಿ ವಿಶೇಷಾಧಿಕಾರಿ ನಂದಿನಿ, ಕಾರ್ಯದರ್ಶಿ ರವಿಶಂಕರ್ ಹಾಗೂ ಇತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಬಸವ ಜಯಂತಿ ಸಮಾರೋಪ


ಮಾನವೀಯತೆ–ಕಾಯಕನಿಷ್ಠೆ ಧರ್ಮದ ಬುನಾದಿ ಎಂದು ಪ್ರತಿಪಾದಿಸಿದ ವಿಶ್ವಗುರು ಬಸವಣ್ಣ

ಮಾಜಿ ಸಚಿವ ವಿ.ಸೋಮಣ್ಣ ಬಣ್ಣನೆ

ಮೈಸೂರು,ಅ.8(ಪಿಎಂ)– ಮಾನವೀಯತೆ ಮತ್ತು ಕಾಯಕನಿಷ್ಠೆ ಎರಡೂ ಧರ್ಮದ ಬುನಾದಿ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿದವರು ವಿಶ್ವಗುರು ಬಸವಣ್ಣ ಎಂದು ಮಾಜಿ ಸಚಿವ ವಿ.ಸೋಮಣ್ಣ ಬಣ್ಣಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಸವ ಜಯಂತಿ 2023ರ ಸಮಾರೋಪ ಸಮಾರಂಭದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.

ಸಮುದಾಯದಲ್ಲಿ ನಮ್ಮವರೇ ನಮ್ಮವರ ಕಾಲು ಎಳೆಯುವ ಪ್ರವೃತ್ತಿ ಇನ್ನಾದರೂ ಬಿಡಬೇಕು. ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಸಂಸ್ಕೃತಿ ನೀಡಬೇಕಿದೆ. ಅದಕ್ಕಾಗಿ ನಾವು ಯಾವ ರೀತಿ ನಡೆದುಕೊಳ್ಳಬೇಕೆಂಬ ಚಿಂತನೆಯೂ ಆಗಬೇಕಿದೆ ವೀರಶೈವ–ಲಿಂಗಾಯತ ಆದರ್ಶಪ್ರಾಯ ಸಮಾಜ. ಈ ಸಮಾಜದ ಹಲವು ಮಹನೀಯರು ಈ ನಾಡಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.



ಸರ್ಕಾರದ ಶಾಲಾ ಬಿಸಿಯೂಟ ಯೋಜನೆಗೆ ನಮ್ಮ ಸಮುದಾಯದ ಮಠಗಳ ಅನ್ನ ದಾಸೋಹವೇ ಪ್ರೇರಣೆ. ಬಸವಣ್ಣನವರ ಅನುಭವ ಮಂಟಪವು ದೇಶಕ್ಕೆ ಮಾದರಿ ಎಂದು ಹೊಸ ಸಂಸತ್ ಭವನದ ಉದ್ಘಾಟನೆ ವೇಳೆ ಪ್ರಧಾನಿ ನರೇಂದ್ರ ಮೋದಿ ಉಲ್ಲೇಖಿಸಿದ್ದಾರೆ. ಬಸವಣ್ಣ ದುಡಿಮೆಗೆ ಮಹತ್ವ ನೀಡಿದ್ದಾರೆ. ಆದರೆ ಇತ್ತೀಚೆಗೆ ನಾವೇನು ಮಾಡುತ್ತಿದ್ದೇವೆ. ನಮ್ಮ ತೀರ್ಮಾನಗಳು ಯಾವ ಸ್ವರೂಪದಲ್ಲಿವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಆ ಮೂಲಕ ಒಗ್ಗಟ್ಟು ಪ್ರದರ್ಶಿಸಲು ಮುಂದಾಗಬೇಕಿದೆ. ಎಲ್ಲಾ ಸಮುದಾಯಗಳ ಅವಕಾಶ ವಂಚಿತರನ್ನೂ ನೋಡಿಕೊಳ್ಳಬೇಕಿರುವುದೂ ನಮ್ಮ ಕರ್ತವ್ಯವಾಗಿದೆ ಎಂದು ನುಡಿದರು.

ಬಿಹಾರದಲ್ಲಿ ಜಾತಿ ಗಣತಿ ಬಿಡುಗಡೆ ಮಾಡಿದ ಬೆನ್ನಲ್ಲೇ ಕರ್ನಾಟಕದಲ್ಲೂ ಬಿಡುಗಡೆಗೆ ಕೂಗು ಕೇಳಿಬರುತ್ತಿದೆ. 1919ರಲ್ಲಿ ಮಿಲ್ಲರ್ ಕಮಿಟಿ ವರದಿಯಲ್ಲಿ ವೀರಶೈವ ಲಿಂಗಾಯತರ ಜನಸಂಖ್ಯೆಯನ್ನು ಶೇ.12ರಷ್ಟು ಎಂದು ಉಲ್ಲೇಖಿಸಲಾಗಿತ್ತು. 1975ರ ಹಾವನೂರು ಆಯೋಗ ವರದಿಯಲ್ಲಿ ಶೇ.14.04ರಷ್ಟು ಎಂದು ನಮೂದಿಸಲಾಗಿತ್ತು. ಎಲ್ಲೋ ಒಂದು ಕಡೆ ನಮ್ಮ ಸಮುದಾಯ ಕಾವಲು ದಾರಿಯಲ್ಲಿ ಹೋಗಲು ಅವಕಾಶ ಮಾಡಲಾಗುತ್ತಿದೆ ಎಂದರು.

ನಮ್ಮಲ್ಲಿ ಅರ್ಹತೆ ಇದ್ದವರಿಗೆ ಅವಕಾಶ ನೀಡಲು ನಾವು ಒಗ್ಗಟ್ಟಾಗಿ ನಿಲ್ಲಬೇಕಿದೆ. ನಮ್ಮಲ್ಲಿ ಎಲ್ಲವೂ ಇದೆ. ಆದರೆ ಅವಕಾಶಗಳು ಬಂದಾಗ ಕಣ್ಮುಚ್ಚಿ ಕುಳಿತುಕೊಳ್ಳುತ್ತೇವೆ. ಇನ್ನಾದರೂ ಅದನ್ನು ನಾವು ಬಿಡಬೇಕಿದೆ ಸಮುದಾಯ ಹಾಗೂ ಸಮುದಾಯದ ಸ್ವಾಮೀಜಿಗಳಿಗಿಂತ ನಾವ್ಯಾರೂ ದೊಡ್ಡವರಲ್ಲ ಎಂದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಬಸವಣ್ಣನವರ ಚಿಂತನೆಗಳು ಎಂದೆಂದಿಗೂ ಪ್ರಸ್ತುತ. ಅವರೊಬ್ಬ ಆದರ್ಶ, ಸಮಾಜದ ಬೆಳಕು. ಇಡೀ ಮಾನವ ಕುಲಕ್ಕೆ ಅಗತ್ಯವಾಗಿ ಬೇಕಿರುವ ವಿಚಾರಧಾರೆಗಳನ್ನು ಅವರು ಕೊಟ್ಟಿದ್ದಾರೆ. ವೀರಶೈವ–ಲಿಂಗಾಯತ ಮಠಗಳು ಬಸವಣ್ಣನವರ ಆಶಯದಂತೆ ಯಾವುದೇ ಭೇದಭಾವವಿಲ್ಲದೇ ಸಮಾಜದ ಸೇವೆಯಲ್ಲಿ ನಿರತವಾಗಿವೆ ಎಂದು ಹೇಳಿದರು.

ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಅವರ ಸಂಪಾದಕತ್ವದಲ್ಲಿ ಐದನೇ ಮುದ್ರಣವಾಗಿ ಹೊರತಂದಿರುವ 'ಕರ್ನಾಟಕ ಶರಣ ಕಥಾಮೃತ' ಕೃತಿಯನ್ನು ಶ್ರೀ ಕುಂದೂರು ಮಠದ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಂಸದ ವಿ.ಶ್ರೀನಿವಾಸ ಪ್ರಸಾದ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ನಂಜನಗೂಡು ಶ್ರೀ ಕ್ಷೇತ್ರ ದೇವನೂರು ಮಠದ ಶ್ರೀ ಮಹಾಂತ ಸ್ವಾಮೀಜಿ, ಗಾವಡಗೆರೆಯ ಶ್ರೀ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ, ಒಕ್ಕೂಟದ ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಬಿಜೆಪಿಗೆ ಬಂದ ಮೇಲೆ ನಾಲ್ಕೈದು ಬಾರಿ ಸೋಲು ಕಂಡೆ

ಮೈಸೂರು, ಅ.8(ಪಿಎಂ)– ಒಂದೇ ಒಂದು ನೋವು ಅಂದರೆ ಬಿಜೆಪಿಗೆ ಬರುವವರೆಗೆ ನಾನು ಸೋಲು ಕಂಡಿರಲಿಲ್ಲ. ಬಿಜೆಪಿಗೆ ಬಂದಮೇಲೆ ನಾಲ್ಕೈದು ಬಾರಿ ಸೋಲು ಕಂಡೆ. ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಶಾಸಕನಾಗಿದ್ದವನು ನಾನು ಎಂದು ಮಾಜಿ ಸಚಿವ ವಿ.ಸೋಮಣ್ಣ ಹೇಳಿದರು.

ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಬೇರೆಯವರಿಗೆ ಯಾವುದೇ ಅನಾನುಕೂಲವಾಗದೇ ನಮ್ಮವರಿಗೆ ಒಂದು ಅವಕಾಶವಿದೆ ಎಂದಾಗ, ಅದಕ್ಕೆ ಆದ್ಯತೆ ನೀಡಬೇಕು. ಕೊಡುಗೆ ನೀಡಬೇಕು ಎಂಬ ಮನೋಭಾವ ಇರುವವರಿಗೆ ಸಹಕಾರ ನೀಡಬೇಕು ಎಂದರು.

ಜಾತಿ ಜನಗಣತಿಯಿಂದ ಒಳ್ಳೆಯದಾದರೆ ಆಗಲಿ

ಸಂಸದ ವಿ.ಶ್ರೀನಿವಾಸ ಪ್ರಸಾದ್

ಮೈಸೂರು,ಅ.8(ಪಿಎಂ)– ನಾವು ಜಾತಿ ಜನಗಣತಿಯನ್ನು ಏಕೆ ವಿರೋಧ ಮಾಡಬೇಕೆಂದು ಪ್ರಶ್ನಿಸಿದ ಸಂಸದ ವಿ.ಶ್ರೀನಿವಾಸ ಪ್ರಸಾದ್, ಈ ಬಗ್ಗೆ ವಿಶಾಲ ದೃಷ್ಟಿಕೋನದಿಂದ ನೋಡಬೇಕು. ಅದರಿಂದ ಸಮಾಜಕ್ಕೆ ಒಳ್ಳೆಯದು ಆದರೆ ಆಗಲಿ ಎಂದು ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ತುಳಿತಕ್ಕೆ ಒಳಗಾದವರಿಗೆ ದಾರಿ ತೋರಿದವರು ಬಸವಣ್ಣ. ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಪ್ರಾತಃ ಸ್ಮರಣೀಯರು. ನಾನು ಪ್ರತಿದಿನ ಬೆಳಗ್ಗೆ ಈ ಮೂವರನ್ನು ಸ್ಮರಿಸುತ್ತೇನೆ ಎಂದರು.

ಬಸವಣ್ಣನವರಿಂದ ಪ್ರಾರಂಭವಾದದ್ದು ಲಿಂಗಾಯತ ಧರ್ಮ. ಅವರು ವೈದಿಕ ಮನೆತನದಲ್ಲಿ ಹುಟ್ಟಿದರೂ ತಾರತಮ್ಯದ ಹಿನ್ನೆಲೆಯಲ್ಲಿ ವೈದಿಕ ಧರ್ಮ ತಿರಸ್ಕರಿಸಿ, ಸಮಾನತೆ ಸಮಾಜ ನಿರ್ಮಾಣಕ್ಕಾಗಿ ವೈದಿಕ ವರ್ಗದವರೂ ಸೇರಿದಂತೆ ಎಲ್ಲಾ ವರ್ಗದವರಿಗೆ ಅವರು ಲಿಂಗ ದೀಕ್ಷೆ ನೀಡಿದರು. ಕೇವಲ ಶೂದ್ರರಿಗೆ ಮಾತ್ರ ಲಿಂಗ ದೀಕ್ಷೆ ನೀಡಿದ್ದಲ್ಲ ಎಂದು ಹೇಳಿದರು.



ಈ ರಾಷ್ಟ್ರ ಕಂಡಂತಹ ಹಿರಿಯ ರಾಷ್ಟ್ರೀಯ ನಾಯಕರು ನಿಜಲಿಂಗಪ್ಪ. ಇವರು ಸಂವಿಧಾನ ಸಭೆ ಸದಸ್ಯರಾಗಿದ್ದವರು. ಅಂಬೇಡ್ಕರ್ ಅವರೂ ಮಹಾರಾಷ್ಟ್ರದಿಂದ ಸಂವಿಧಾನ ಸಭೆ ಸದಸ್ಯರಾಗಿದ್ದರು. ನಿಜಲಿಂಗಪ್ಪ ಮತ್ತು ಅಂಬೇಡ್ಕರ್ ಅವರಿಬ್ಬರಿಗೂ ಪರಸ್ಪರ ಪರಿಚಯವಿತ್ತು. ನಿಜಲಿಂಗಪ್ಪರಿಂದ ಶರಣರ ಬಗ್ಗೆ ಅಂಬೇಡ್ಕರ್ ತಿಳಿದುಕೊಂಡಿದ್ದರು ಎಂದರು.

ಶಾಮನೂರು ಶಿವಶಂಕರಪ್ಪ ಬಗ್ಗೆ ಗೌರವವಿದೆ: 2ಎ ಮೀಸಲಾತಿ ಕೊಡಿ ಎಂದು ಪಂಚಮಸಾಲಿ ಸ್ವಾಮೀಜಿಯವರು ಬೀದಿಯಲ್ಲಿ ಹೋರಾಟ ಮಾಡಿದ್ದು ಏಕೆಂದು ಅರ್ಥವಾಗಲಿಲ್ಲ. ವೀರಶೈವ ಮಹಾಸಭಾ ಎಲ್ಲರನ್ನೂ ಒಟ್ಟುಗೂಡಿಸಬೇಕು. ಅಂತಹ ಸಂಘಟನೆಯ ಅಧ್ಯಕ್ಷರಾಗಿರುವ ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರ ಇತ್ತೀಚೆಗಿನ ಹೇಳಿಕೆ (ಸರ್ಕಾರ ಲಿಂಗಾಯತ ಅಧಿಕಾರಿಗಳ ಕಡೆಗಣನೆ ಆರೋಪ) ಬಗ್ಗೆ ನಾನು ಆಕ್ಷೇಪ ವ್ಯಕ್ತಪಡಿಸಿದ್ದೆ. ಅವರ ಮಗ ಸಚಿವರಾಗಿದ್ದಾರೆ. ಅವರು ಸಮಾಜಮುಖಿ ಚಿಂತನೆ ಮಾಡಬೇಕು. ಅವರು ಈ ರೀತಿ ಹೇಳಿಕೆ ಕೊಡಬಾರದು ಎಂದು ಹೇಳಿದ್ದೆ. ಆದರೆ ಅವರ ಬಗ್ಗೆ ಅಪಾರ ಗೌರವವಿದೆ ಎಂದು ಹೇಳಿದರು.

ಜಿಲ್ಲಾ ಮಂತ್ರಿಗೆ ಕುಟುಕು: ನೂರಾರು ಕೋಟಿ ನುಂಗಿ ನೀರು ಕುಡಿದು ಅಧಿಕಾರ ಕಳೆದುಕೊಂಡಿದ್ದ ಒಬ್ಬ ವ್ಯಕ್ತಿ ಇಂದು ಒಬ್ಬ ಜಿಲ್ಲಾ ಮಂತ್ರಿಯಾಗಿ ಬಸವಣ್ಣನವರ ಬಗ್ಗೆ ಮಾತನಾಡುತ್ತಾರೆ ಎಂದು ಕುಟುಕಿದರು. ನಿಮಗೆ ಬಸವಣ್ಣನವರ ಹೆಸರಿನಲ್ಲಿ ಪ್ರತಿಜ್ಞೆ ಮಾಡಿಸಬೇಕು. ಬಿಜ್ಜಳನ ಆಸ್ಥಾನದಲ್ಲಿ ರಾಜ್ಯದ ಬೊಕ್ಕಸದಿಂದ ಜನಕ್ಕೆ ಹಣ ಕೊಡುತ್ತಿದ್ದರು. ನೀವು ರಾಜ್ಯದ ಬೊಕ್ಕಸವನ್ನು ಲೂಟಿ ಮಾಡುವವರು ಎಂದು ವಾಗ್ದಾಳಿ ನಡೆಸಿದರಲ್ಲದೆ, ಸ್ವಾಭಿಮಾನದ ನೆನಪುಗಳು ಎಂಬ ಪುಸ್ತಕ ಬರೆಯುತ್ತಿದ್ದು, ಇದಕ್ಕೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರೇ ಪ್ರೇರಣೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿಯ ಇಂದಿನ ದುಸ್ಥಿತಿಗೆ ನಮ್ಮವರೇ ಕಾರಣರು; ವಿ.ಸೋಮಣ್ಣ

ಮೈಸೂರು,ಅ.8(ಪಿಎಂ)– ರಾಜ್ಯದಲ್ಲಿ ನಮ್ಮ ಪಕ್ಷದ ಈಗಿನ ದುಸ್ಥಿತಿಗೆ ನಮ್ಮವರಲ್ಲೇ ಬಹುತೇಕರು ಕಾರಣ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಅದನ್ನು ಸರಿಪಡಿಸಿ, ಮತ್ತೆ ರಾಷ್ಟ್ರದಲ್ಲಿ ನರೇಂದ್ರ ಮೋದಿಯವರ ನಾಯಕತ್ವ ಬರಲು ಬೆಂಬಲವಾಗಿ ನಿಲ್ಲುತ್ತೇವೆ ಎಂದು ಮಾಜಿ ಸಚಿವ ವಿ.ಸೋಮಣ್ಣ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದಲ್ಲಿ ಭಾನುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಜೆಡಿಎಸ್ ಜೊತೆಗಿನ ಮೈತ್ರಿ ಸಂಬಂಧ ಹೈಕಮಾಂಡ್ ತೀರ್ಮಾನ ಒಪ್ಪಿದ್ದೇವೆ, ಅದರಂತೆ ನಡೆದುಕೊಳ್ಳುತ್ತೇವೆ ಎಂದರು.

ಒಂದಂತೂ ಸತ್ಯ ಬಿಜೆಪಿಗೆ ಬಂದ ಮೇಲೆ ಜಾಸ್ತಿ ಸೋತಿದ್ದೇನೆ. ವರಿಷ್ಠರಲ್ಲಿ ನನಗೆ ಒಳ್ಳೆಯ ಕೆಲಸ ಕೊಡಿ ಆ ಕೆಲಸದಿಂದ ಪಕ್ಷ ಸಂಘಟನೆ ಮಾಡಬಹುದು ಎಂದು ಕೇಳಿದ್ದೇನೆ. ಕೊಟ್ಟರೆ ತುಂಬ ಚೆನ್ನಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಈ ಬಗ್ಗೆ ಯಾವುದೇ ಯೋಚನೆ ಮಾಡಿಲ್ಲ. ಹೈಕಮಾಂಡ್ ನಿರ್ಧಾರದಂತೆ ನಡೆಯುತ್ತೇನೆ ಎಂದರು.


ಈ ನಡುವೆ ಕಾಂಗ್ರೆಸ್‌ಗೆ ಹೋಗುತ್ತಾರೆ ಎಂಬ ಚರ್ಚೆ ಆರಂಭವಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಸೋಮಣ್ಣ ತೆರೆದ ಪುಸ್ತಕ. ಕೆಲವು ವಿಚಾರಗಳನ್ನು ಹೈಕಮಾಂಡ್‌ಗೆ ಹೇಳಿದ್ದೇನೆ. ನನಗೆ ಆಗಿರುವ ಅನಾನುಕೂಲ ಎಲ್ಲರಿಗೂ ಗೊತ್ತಿದೆ. ಪಕ್ಷ ನನ್ನನ್ನು ಗೌರವಿಸಿದೆ. ನಾನು ಆ ರೀತಿಯಲ್ಲಿ ಸಣ್ಣದಾಗಿ ನಡೆದುಕೊಳ್ಳುವುದಿಲ್ಲ ಎಂದು ಹೇಳಿದರು.

ಜಾತಿ ಗಣತಿ ವರದಿ ಬಿಡುಗಡೆ ಮಾಡಲಿ, ಬೇಡ ಎನ್ನುವುದಿಲ್ಲ. ಆದರೆ ಹಿಂದುಳಿದ ಸಮಾಜಗಳಿಗೆ ಆದ್ಯತೆ ದೊರೆಯಬೇಕು. ಅದೇ ಬಸವಣ್ಣನವರ ಆಶಯ. ವೀರಶೈವ ಲಿಂಗಾಯತ ಸಮಾಜದ ಸ್ಥಿತಿಗತಿಯನ್ನು ಸರಿಯಾಗಿ ಅರಿಯಬೇಕು ಎಂದರಲ್ಲದೆ, ಶಾಮನೂರು ಶಿವಶಂಕಪ್ಪ ನಮ್ಮ ಸಮಾಜದ ನಾಯಕರು. ಅವರ ನೋವು ಅವರು ಹೇಳಿಕೊಂಡಿದ್ದಾರೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಇಂದಿನಿಂದ ಅಭಿಮನ್ಯುಗೆ ಮರದ ಅಂಬಾರಿ ಹೊರುವ ತಾಲೀಮು

ಮೈಸೂರು, ಅ.8(ಎಂಟಿವೈ)– ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರಬಿಂದು ಜಂಬೂ ಸವಾರಿಗೆ 16 ದಿನ ಮಾತ್ರವಿದ್ದು, ನಾಳೆ (ಅ.9)ಯಿಂದ ಅಂಬಾರಿ ಆನೆ ಅಭಿಮನ್ಯುವಿಗೆ ಮರದ ಅಂಬಾರಿ ಹೊರುವ ತಾಲೀಮು ಆರಂಭಿಸಲಾಗುತ್ತಿದೆ.

ಪ್ರಸಕ್ತ ಸಾಲಿನ ದಸರಾ ಜಂಬೂ ಪಡೆಗೆ ಸೆ.8ರಿಂದ ಜಂಬೂಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಲಾಗಿತ್ತು. ಸೆ.25ರಂದು ಆಗಮಿಸಿದ ಎರಡನೇ ತಂಡದ 5 ಆನೆಗಳು ಸೆ.29 ರಿಂದ ಮೊದಲ ತಂಡದ ಆನೆಗಳೊಂದಿಗೆ ಜಂಬೂಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಿದ್ದವು. ಇದೀಗ ಜಂಬೂಸವಾರಿಗೆ ದಿನಗಣನೆ ಆರಂಭವಾಗಿದ್ದು, ನಾಳೆಯಿಂದ ಅಂಬಾರಿ ಆನೆ ಅಭಿಮನ್ಯು, ಶ್ರೀರಂಗಪಟ್ಟಣದ ದಸರೆಯಲ್ಲಿ ಪಾಲ್ಗೊಳ್ಳುವ ಮಹೇಂದ್ರ ಹಾಗೂ ಪರ್ಯಾಯ ಆನೆಗಳಾದ ಗೋಪಿ, ಧನಂಜಯ, ಭೀಮ ಹಾಗೂ ಕಂಜನ್ ಆನೆಗೂ ಒಂದೊಂದು ದಿನ ಮರದ ಅಂಬಾರಿ ಕಟ್ಟಿ ತಾಲೀಮಿಗೆ ಕರೆದೊಯ್ಯಲಾಗುತ್ತದೆ.



ಮರದ ಅಂಬಾರಿ ಕಟ್ಟಲು ಅರಮನೆಯ ರಾಜವಂಶಸ್ಥರ ನಿವಾಸದ ಬಳಿ ನಾಳೆ ಬೆಳಗ್ಗೆ ಕ್ರೇನ್ ಕಟ್ಟಲಾಗುತ್ತದೆ. ಸಿಂಹಾಸನ ಜೋಡಣೆ ಹಿನ್ನೆಲೆಯಲ್ಲಿ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧವಿರುವ ಕಾರಣ, ನಾಳೆ ಬೆಳಗ್ಗೆ ಕ್ರೇನ್‌ಗೆ ಪೂಜೆ ಮಾಡಿ ಜೋಡಣೆ ಮಾಡಲಾಗುತ್ತದೆ. ಸಂಜೆ ನಡೆಸುವ ತಾಲೀಮಿನ ವೇಳೆ 280 ಕೆಜಿ ತೂಕದ ಮರದ ಅಂಬಾರಿ ಕಟ್ಟಿ ಅದರೊಳಗೆ 500 ಕೆಜಿ ತೂಕದ ಮರಳಿನ ಮೂಟೆ ಇಟ್ಟು ತಾಲೀಮು ನಡೆಸಲಾಗುತ್ತದೆ. ಗಜಪಡೆ ನಾಯಕ ಅಭಿಮನ್ಯುವಿಗೆ ಮೊದಲು ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗುತ್ತದೆ. ಆ ನಂತರ ದಿನಕ್ಕೊಂದು ಪರ್ಯಾಯ ಆನೆಗಳಿಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಿ, ಜಂಬೂ ಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತದೆ.

ಬೆಂಗಳೂರಿನಲ್ಲಿ ಪಟಾಕಿ ದುರಂತ: ಉನ್ನತ ಮಟ್ಟದ ತನಿಖೆಗೆ ಆದೇಶಿಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ; ಎಚ್‌ಡಿ ಕುಮಾರಸ್ವಾಮಿ

ಬೆಂಗಳೂರು, ಅ.8– ಆನೇಕಲ್ ತಾಲೂಕಿನ ಅತ್ತಿಬೆಲೆಯ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 14 ಕಾರ್ಮಿಕರ ಸಾವಿಗೆ ಸಂತಾಪ ವ್ಯಕ್ತಪಡಿಸಿರುವ ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ, ಘಟನೆ ಬಗ್ಗೆ ರಾಜ್ಯ ಸರ್ಕಾರ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.



ಈ ಕುರಿತು ಟ್ವೀಟ್ ಮಾಡಿರುವ ಅವರು, ಬೆಂಕಿ ಅವಘಡದಲ್ಲಿ 14 ಜನರು ಸಾವಿಗೀಡಾಗಿರುವ ಘಟನೆ ಬಗ್ಗೆ ತಿಳಿದು ನನಗೆ ತೀವ್ರ ದಿಗ್ಭ್ರಮೆ ಉಂಟಾಗಿದೆ. ದೀಪಾವಳಿಗೆ ಬದುಕು ಕಟ್ಟಿಕೊಳ್ಳಲು ಹೊರಟಿದ್ದ ಈ ಮುಗ್ಧ ಜೀವಗಳು ಬೆಂಕಿಯ ಕೆನ್ನಾಲಿಗೆಗೆ ಸಿಕ್ಕಿ ಬಲಿಯಾಗಿರುವ ಘಟನೆ ನನ್ನ ಮನವನ್ನು ಕಲಕಿದೆ ಎಂದಿದ್ದಾರೆ.

ಜೀವ ಕಳೆದುಕೊಂಡ ಎಲ್ಲಾ ನತದೃಷ್ಟ ಕಾರ್ಮಿಕರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ಕುಟುಂಬಗಳಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಭವಿಸಿರುವ ಈ ಘಟನೆ ಅನೇಕ ಪ್ರಶ್ನೆಗಳಿಗೆ ದಾರಿ ಮಾಡಿಕೊಟ್ಟಿದೆ. ಸುರಕ್ಷತೆ ಬಗ್ಗೆ ಮುನ್ನೆಚ್ಚರಿಕೆ ವಹಿಸದೆ ಇದ್ದಿದ್ದೇ ದುರಂತಕ್ಕೆ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು. ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಮುಂದೆ ಇಂತಹ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ. ಬದುಕು ಕಳೆದುಕೊಂಡ ಕುಟುಂಬಗಳಿಗೆ ರಾಜ್ಯ ಸರ್ಕಾರ ಆಸರೆಯಾಗಿ ನಿಲ್ಲಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಪಶ್ಚಿಮ ಅಫ್ಘಾನಿಸ್ತಾನದಲ್ಲಿ ಪ್ರಬಲ ಭೂಕಂಪ: 320 ಮಂದಿ ಸಾವು, 12 ಹಳ್ಳಿಗಳು ಸಂಪೂರ್ಣ ನಾಶ

ನವದೆಹಲಿ, ಅ.8– ಪಶ್ಚಿಮ ಅಫ್ಘಾನಿಸ್ತಾನದಲ್ಲಿ ಶನಿವಾರ ಹಲವು ಬಾರಿ ಭೂಮಿ ಕಂಪಿಸಿದ್ದು, ಕನಿಷ್ಠ 320 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಮಾಹಿತಿ ನೀಡಿದೆ. ಭೂಕಂಪದಲ್ಲಿ 78 ಮಂದಿ ಗಾಯಗೊಂಡಿದ್ದಾರೆ. ಕಟ್ಟಡಗಳ ಅವಶೇಷಗಳಡಿ ಹಲವರು ಸಿಲುಕಿರುವುದರಿಂದ ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲಿಗೆ ರಿಕ್ಟರ್ ಮಾಪಕದಲ್ಲಿ 6.3ರಷ್ಟು ತೀವ್ರತೆಯ ಭೂಕಂಪ ಸಂಭವಿಸಿತ್ತು. ಆನಂತರ 5.5, 4.7 ಮತ್ತು 5.9ರಷ್ಟು ತೀವ್ರತೆಯಲ್ಲಿ ಭೂಮಿ ಕಂಪಿಸಿದೆ. ವಾಯವ್ಯ ನಗರ ಹೆರಾತ್‌ನಲ್ಲಿ ಭೂಕಂಪನ ಕೇಂದ್ರಬಿಂದು ಪತ್ತೆಯಾಗಿದೆ.

ಅಧಿಕಾರಿಗಳ ಪ್ರಕಾರ, ಜಿಂದಾ ಜಾನ್ ಮತ್ತು ಘೋರಿಯನ್ ಜಿಲ್ಲೆಗಳ 12 ಹಳ್ಳಿಗಳು ಸಂಪೂರ್ಣವಾಗಿ ನಾಶವಾಗಿವೆ. ಭೂಮಿ ಕಂಪಿಸಿದ ಅನುಭವವಾಗುತ್ತಲೇ ಸಾವಿರಾರು ಜನ ಮನೆಯಿಂದ ಹೊರಗೆ ಬಂದರು. ರಸ್ತೆಗಳ ಮೇಲೆಯೇ ಇಡೀ ದಿನ ಕಳೆದ ಜನ ಅನ್ನ–ನೀರಿಲ್ಲದೆ ಪರದಾಡಿದರು ಎಂದು ತಿಳಿದುಬಂದಿದೆ. ಅದರಲ್ಲೂ, ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟಡದ ಅವಶೇಷಗಳಲ್ಲಿ ಸಿಲುಕಿದವರ ರಕ್ಷಣೆಗೆ ಸಿಬ್ಬಂದಿ ಇಲ್ಲದೆ ಜನ ಪರದಾಡುವಂತಾಯಿತು ಎಂದು ಮೂಲಗಳು ತಿಳಿಸಿವೆ.

ಪ್ರಬಲ ಭೂಕಂಪದಿಂದಾಗಿ ಸಾವಿರಾರು ಕಟ್ಟಡಗಳು ಧರೆಗುರುಳಿದ್ದು, ಸಾವಿರಕ್ಕೂ ಅಧಿಕ ಮಂದಿಗೆ ಆಯಾ ನಗರಗಳ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೆಯೇ, ಇನ್ನೂ ನೂರಾರು ಜನ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದು, ಅವರ ರಕ್ಷಣೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶಿವಮೊಗ್ಗದಲ್ಲಿ ಒಂದೇ ಕುಟುಂಬದ ಮೂವರು ಸಜೀವ ದಹನ

ಶಿವಮೊಗ್ಗ, ಅ.8– ತೀರ್ಥಹಳ್ಳಿ ತಾಲೂಕಿನ ಅರಳಸುರಳಿ ಸಮೀಪದ ಕೆಕೋಡ್ ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ ಒಂದೇ ಕುಟುಂಬದ ಮೂವರು ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದಾರೆ. ಸುಟ್ಟು ಕರಕಲಾದ ಸ್ಥಿತಿಯಲ್ಲಿ ಶವಗಳು ಪತ್ತೆಯಾಗಿವೆ.



ಮನೆಯ ಕೋಣೆಯ ಒಳಗೆ ಕಟ್ಟಿಗೆಯನ್ನು ಕೂಡಿಸಿ ಬೆಂಕಿ ಹಚ್ಚಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆತ್ಮಹತ್ಯೆಯ ಶಂಕೆ ಎದುರಾಗಿದೆ. ಅದೇ ಕುಟುಂಬದ ಮತ್ತೊಬ್ಬ ಸದಸ್ಯನ ಸ್ಥಿತಿ ಗಂಭೀರವಾಗಿದ್ದು, ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕುಟುಂಬದ ಹಿರಿಯರಾದ ಅರ್ಚಕ ಕೆಲಸ ಮಾಡುತ್ತಿದ್ದ ರಾಘವೇಂದ್ರ ಕೆಕೋಡ್ (65), ಪತ್ನಿ ನಾಗರತ್ನ (55), ಹಿರಿಯ ಪುತ್ರ ಶ್ರೀರಾಮ್ (30) ಸಾವಿಗೀಡಾಗಿದ್ದಾರೆ. ಮತ್ತೊಬ್ಬ ಪುತ್ರ ಭರತ್ (28) ಗಂಭೀರವಾಗಿ ಗಾಯಗೊಂಡಿದ್ದಾರೆ.

ಅರಳಸುರಳಿ ಹೊಸನಗರ ಮಾರ್ಗದಲ್ಲಿ ಕೋಕೋಡ್ ಗ್ರಾಮ ಇದೆ. ಗಾಯಾಳುವನ್ನು ಗ್ರಾಮಸ್ಥರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಘಟನೆಯಿಂದ ಗ್ರಾಮದ ನಿವಾಸಿಗಳು ಬೆಚ್ಚಿಬಿದ್ದಿದ್ದಾರೆ. ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬುದು ಗೊತ್ತಾಗಬೇಕಿದೆ.

ಅಕ್ಯೂಪ್ರೆಶರ್, ಸುಜೋಕ್ ಚಿಕಿತ್ಸಾ ಶಿಬಿರ

ಮೈಸೂರು, ಅ.8– ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ಮತ್ತು ಸುಜ್ಞಾನ ಟ್ರಸ್ಟ್ ವತಿಯಿಂದ ಅ. 10 ರಿಂದ 21 ದಿನಗಳ ಕಾಲ ಅಕ್ಯೂಪ್ರೆಶರ್, ಸುಜೋಕ್ ಮತ್ತು ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರವನ್ನು ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿರುವ ಸುಜ್ಞಾನ ಟ್ರಸ್ಟ್‌ನಲ್ಲಿ ಆಯೋಜಿಸಲಾಗಿದೆ.

ಶಿಬಿರದಲ್ಲಿ ಬಿಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಬೆನ್ನು ನೋವು, ಥೈರಾಯಿಡ್ ಇನ್ನಿತರ ರೋಗಗಳಿಗೆ ಚಿಕಿತ್ಸೆ ನೀಡಲಾಗುವುದು. ಶಿಬಿರವು ಬೆಳಗ್ಗೆ 10.30 ರಿಂದ ಸಂಜೆ 6.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9845182716, 7892798768 ಸಂಪರ್ಕಿಸಬಹುದು.

ಸಿಕ್ಕಿಂನಲ್ಲಿ ಪ್ರವಾಹ; ತೆಲುಗಿನ ಹಿರಿಯ ನಟಿ ಸರಳಾ ಕುಮಾರಿ ನಾಪತ್ತೆ!

ಹೈದರಾಬಾದ್, ಅ.8– ಮೇಘ ಸ್ಫೋಟದಿಂದ ಸಿಕ್ಕಿಂನಲ್ಲಿ ಉಂಟಾದ ಹಠಾತ್ ಪ್ರವಾಹದಲ್ಲಿ ಟಾಲಿವುಡ್‌ನ ಹಿರಿಯ ನಟಿ ಸರಳಾ ಕುಮಾರಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಪ್ರವಾಹದಲ್ಲಿ ಸೇನಾ ಸಿಬ್ಬಂದಿ ಸೇರಿದಂತೆ 40ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ನೆಲೆಸಿರುವ ಅವರ ಮಗಳು ನಬಿತಾ ಅವರು ಈಶಾನ್ಯ ರಾಜ್ಯದಲ್ಲಿ ಸಂಭವಿಸಿದ ಪ್ರವಾಹದಿಂದಾಗಿ ನಾಪತ್ತೆಯಾಗಿರುವ ತನ್ನ ತಾಯಿಯನ್ನು ಪತ್ತೆಹಚ್ಚಲು ಸಹಾಯ ಮಾಡುವಂತೆ ತೆಲಂಗಾಣ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಹೈದರಾಬಾದ್‌ನಲ್ಲಿ ನೆಲೆಸಿದ್ದ ನಟಿ ಇತ್ತೀಚೆಗೆ ಸಿಕ್ಕಿಂಗೆ ತನ್ನ ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸದ ಬಗ್ಗೆ ಮಗಳಿಗೆ ಮೊದಲೇ ತಿಳಿಸಿದ್ದರು.

ಮೂಲಗಳ ಪ್ರಕಾರ, ಅಕ್ಟೋಬರ್ 3ರಂದು ಅವರೊಂದಿಗೆ ಕೊನೆಯ ಸಂಭಾಷಣೆಯ ನಂತರ ಸರಳಾ ಅವರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ತನ್ನ ತಾಯಿ ಪತ್ತೆಯಾಗದ ಕಾರಣ ನಬಿತಾ ಆತಂಕ ವ್ಯಕ್ತಪಡಿಸಿದ್ದು, ಚಿಂತಿತರಾಗಿದ್ದಾರೆ.

ಸಿಕ್ಕಿಂನಲ್ಲಿ ಉಂಟಾದ ಹಠಾತ್ ಪ್ರವಾಹದ ನಂತರ, ಅವರು ಸರಳಾ ಅವರು ತಂಗಿದ್ದ ಹೋಟೆಲ್‌ಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರು ಮತ್ತು ಸೇನೆಯ ಹಾಟ್‌ಲೈನ್ ಸಂಖ್ಯೆಗಳಿಗೆ ಕರೆ ಮಾಡಿದರು. ಆದರೆ, ಅವು ಕಾರ್ಯನಿರ್ವಹಿಸದಿರುವುದು ಕಂಡುಬಂದಿದೆ. 1983ರಲ್ಲಿ ಮಿಸ್ ಆಂಧ್ರಪ್ರದೇಶ ಕಿರೀಟವನ್ನು ಮುಡಿಗೇರಿಸಿಕೊಂಡ ನಂತರ ಚಿತ್ರರಂಗ ಪ್ರವೇಶಿಸಿದ ಸರಳಾ ಕುಮಾರಿ ಹಲವು ತೆಲುಗು ಚಿತ್ರಗಳಲ್ಲಿ ನಟಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಬನ್ರೀ ಮನೆಗಿವತ್ತು...
ನಿಮಗಿದೆ ಮಾರಿಹಬ್ಬ!

ಗಂಡ : ಲೇ ಏನೇ ಮಾಡ್ದೆ ನಾನು?
ಫೋನ್‌ನಲ್ಲೇ ಜೀವ ಬೆದರಿಕೆ ಹಾಕ್ತಾ ಇದೀಯಾ?

ಹೆಂಡತಿ : ಎಫ್‌ಬಿಯಲ್ಲಿ 'ಕಾವೇರಿ ನನ್ನವಳು,
ಅವಳನ್ನು ಬಿಡುವ ಪ್ರಶ್ನೆಯೇ ಇಲ್ಲ' ಎಂದು ಹಾಕಿದ್ದೀರಿ!
ಅದನ್ನೋದಿ ನಿಮ್ಮ ಹಳೆಯ ಲವರ್ ಕಾವೇರಿ ನಿಮ್ಮನ್ನು
ಹುಡುಕಿಕೊಂಡು ಮನೆ ಬಾಗಿಲಿಗೆ ಬಂದಿದ್ದಳು...

ಮೈಸೂರು ಮಿತ್ರ

ಸೋಮವಾರ, 9 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಆಸೆ ಕಳೆದುಕೊಂಡರೆ ಬದುಕಬಹುದು. ಆದರೆ,
ಆಸಕ್ತಿ ಕಳೆದುಕೊಂಡರೆ ಬದುಕಿನ ಮಾರ್ಗವೇ ಕಳೆದು ಹೋಗುತ್ತದೆ.

ವೇದ ಸುಳ್ಳಾದರೂ { ತಾಯಿಯಂತೆ ಮಗಳು,
ಗಾದೆ ಸುಳ್ಳಾಗದು { ನೂಲಿನಂತೆ ಸೀರೆ.

ನಿಮ್ಮ ಪತ್ರಗಳು

20 ವರ್ಷದಿಂದ ಟೋಲ್ ಸಂಗ್ರಹಿಸುತ್ತಿರುವ ಏಕೈಕ ಸೇತುವೆ ಬಹುಶಃ ಇದೊಂದೇ ಇರಬಹುದು!

ಮಾನ್ಯರೆ,

ವಿಶ್ವ ವಿಖ್ಯಾತ ಕೆಆರ್‌ಎಸ್ ಅಣೆಕಟ್ಟಿನ ಕೆಳಭಾಗದಲ್ಲಿ ಸಾರ್ವಜನಿಕರು ಮತ್ತು ವಾಹನಗಳ ಓಡಾಟಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಳೆದ 20 ವರ್ಷಗಳ ಹಿಂದೆ ಸುಮಾರು ಒಂದು ಫರ್ಲಾಂಗ್ ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ.

ಕೆಆರ್‌ಎಸ್ ಅಣೆಕಟ್ಟನ್ನು ವೀಕ್ಷಿಸಲು ಬರುವವರಿಗೆ ಮತ್ತು ಕೆಆರ್‌ಎಸ್‌ನಿಂದ ಉತ್ತರ ಭಾಗಕ್ಕೆ ಕಾರು, ಬಸ್ಸು, ಟೆಂಪೋಗಳಲ್ಲಿ ಪ್ರಯಾಣ ಮಾಡುವ ಎಲ್ಲರೂ ಈ ಸೇತುವೆ ಮೇಲೆ ಟೋಲ್ (ವಾಹನಗಳ ಸಂಚಾರ ಶುಲ್ಕ) ಅನ್ನು ಕೊಟ್ಟು ಸಂಚರಿಸಬೇಕು, 20 ವರ್ಷಗಳ ಹಿಂದೆ ಈ ಒಂದು ಫರ್ಲಾಂಗ್ ದೂರದ ಸೇತುವೆ ನಿರ್ಮಾಣ ಕಾರ್ಯಕ್ಕೆ 8ರಿಂದ 10 ಕೋಟಿ ರೂಪಾಯಿ ಖರ್ಚು ಮಾಡಿರಬಹುದು. ಆದರೆ ಪ್ರತಿ ವರ್ಷ ಈ ಟೋಲ್ ಸಂಗ್ರಹದಿಂದ ಕನಿಷ್ಠ ಪಕ್ಷ 4ರಿಂದ 5 ಕೋಟಿ ರೂಪಾಯಿ ಸಂಗ್ರಹವಾಗುತ್ತಿದೆ. ಅಂದರೆ ಸುಮಾರು 20 ವರ್ಷಗಳಿಂದ ಸರಿಸುಮಾರು 100 ಕೋಟಿ ರೂಪಾಯಿ ಟೋಲ್ ಸಂಗ್ರಹಿಸಿದಂತಾಗಿದೆ.

ಸಂಪರ್ಕ ಸೇತುವೆಗಳನ್ನು ನಿರ್ಮಾಣ ಮಾಡುವುದು ಸರ್ಕಾರ ಲಾಭ ಗಳಿಸಲೋ ಅಥವಾ ಸಾರ್ವಜನಿಕರ ಅನುಕೂಲಕ್ಕೋ? ಕಳೆದ ಹತ್ತು ವರ್ಷಗಳಿಂದೀಚೆಗಂತೂ, ಕೆಆರ್‌ಎಸ್‌ನ ಹಿನ್ನೀರಿನ ಭಾಗದಲ್ಲಿ ಹೊಸದಾಗಿ ಕೋಡೇಸ್ ಕಂಪನಿಯವರು ನಿರ್ಮಾಣ ಮಾಡಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ಮತ್ತು ಭೂ ವರಹಾ ಸ್ವಾಮಿ ದೇವಸ್ಥಾನಕ್ಕೆ ಶನಿವಾರ ಮತ್ತು ಭಾನುವಾರ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ, ಇವರುಗಳಿಂದಲೇ ಸಾಕಷ್ಟು ಟೋಲ್ ಸಂಗ್ರಹವಾಗುತ್ತಿದೆ.

ಈ ಸೇತುವೆಯ ಮೇಲೆ ಓಡಾಡುವ ಎಲ್ಲಾ ರೀತಿಯ ವಾಹನಗಳಿಗೂ ಟೋಲ್ ಅನ್ನು ಸರ್ಕಾರ ರದ್ದು ಮಾಡಲಿ. ಪ್ರವಾಸೋದ್ಯಮ ಸಚಿವರು ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಟೋಲ್ ಸಂಗ್ರಹ ರದ್ದು ಪಡಿಸಿ.

– ಬೂಕನಕೆರೆ ವಿಜೇಂದ್ರ, ಲೇಖಕರು,
ಕುವೆಂಪುನಗರ, ಮೈಸೂರು.

ಕೆಆರ್‌ಎಸ್ ಟೋಲ್‌ನಲ್ಲಿ ಸುಲಿಗೆ

ಮಾನ್ಯರೇ,

ಕೆಆರ್‌ಎಸ್ ಸೇತುವೆ ಬಳಿ ಇರುವ ಟೋಲ್‌ಗೇಟ್‌ನಲ್ಲಿ ಅವ್ಯವಹಾರ ನಡೆಯುತ್ತಿದೆ



ಎಂದು ಅನಿಸುತ್ತಿದೆ. ಇಂದು ನಾವು ಡಿಂಕ ದೇವಸ್ಥಾನಕ್ಕೆ ಹೊರಟಿದ್ದೆವು. ಮಾರ್ಗಮಧ್ಯೆ ಕೆಆರ್‌ಎಸ್ ಸೇತುವೆ ಬಳಿ ಬರುವ ಟೋಲ್‌ನಲ್ಲಿ ಬೃಂದಾವನಕ್ಕೆ ಎಂದು ಟಿಕೆಟ್ ಕೊಡುತ್ತಾರೆ. ಆದರೆ ನಾವು ಕೆಆರ್‌ಎಸ್‌ಗೆ ಹೋಗುತ್ತಿಲ್ಲ ಡಿಂಕ ದೇವಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದರೇ, ಅವರು ಸೇತುವೆ ಮೇಲೆ ಹೋಗಲು 50 ರೂ. ಹಾಗೂ ಬೃಂದಾವನಕ್ಕೆ ಹೋಗಲು 100 ರೂ. ಶುಲ್ಕ ಎಂದರು. ಇದು ಜನಗಳನ್ನು ಸುಲಿಗೆ ಮಾಡುತ್ತಿರುವುದೇ ಸರಿ. ಈ ಅನ್ಯಾಯವನ್ನು ಸಂಬಂಧಪಟ್ಟವರು ಸರಿಪಡಿಸುವರೇ?

– ರವಿನಂದನ್, ಕೆ.ಜಿ.ಕೊಪ್ಪಲು, ಮೈಸೂರು.

ಪಡಿತರ ಚೀಟಿಯ ಸರ್ವರ್‌ಗೆ ದೋಷ ಬಾರದಿರಲಿ

ಮಾನ್ಯರೆ,

ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು ಈಗ ಮತ್ತೆ ಆಹಾರ ಪಡಿತರ ಚೀಟಿಗೆ ಸಂಬಂಧಿಸಿದಂತೆ ಹೊಸ ಸದಸ್ಯರ ಸೇರ್ಪಡೆ ಮತ್ತು ತಿದ್ದುಪಡಿಗೆ ದಿನಾಂಕ ಘೋಷಣೆ ಮಾಡಿದ್ದಾರೆ. ಇದು ಸ್ವಾಗತಾರ್ಹ ಕ್ರಮ. ಈ ಬಗ್ಗೆ ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ವರದಿ ಜೊತೆಗೆ ಸಾಮಾಜಿಕ ಕಳಕಳಿಯ ಪತ್ರ ಬರೆದು ವಿಸ್ತರಣೆಗೆ ಕೋರಲಾಗಿತ್ತು. ಪತ್ರಿಕೆಗಳು ಸಹ ಈ ಸಾರ್ವಜನಿಕ ಹಿತಾಸಕ್ತಿ ಮನವಿಯನ್ನು ಪುರಸ್ಕರಿಸಿ ಪ್ರಕಟಣೆ ಮಾಡಿದ್ದವು. ಈ ಕೋರಿಕೆಗೆ ಅತ್ಯುತ್ತಮವಾದ ಪ್ರತಿಕ್ರಿಯೆ ನೀಡಿ ಅದರಂತೆ ರಾಜ್ಯದಲ್ಲಿ ಹಂತ ಹಂತವಾಗಿ ಪಡಿತರ ಚೀಟಿಗೆ ಹೆಸರು ಸೇರ್ಪಡೆ ಮತ್ತು ತಿದ್ದುಪಡಿಗೆ ಅಕ್ಟೋಬರ್ 5 ರಿಂದ 13ರವರೆಗೆ ದಿನಾಂಕ ವಿಸ್ತರಿಸಲಾಗಿದೆ. ಆದರೆ ಈ ವಿಷಯದಲ್ಲಿ ನಮ್ಮ ಬಲವಾದ ನಂಬಿಕೆ ಏನೆಂದರೆ ಸರ್ವರ್ ದೋಷ ಇರುವುದಿಲ್ಲ ಎಂಬುದು. ಈ ನಂಬಿಕೆಗೆ ಚ್ಯುತಿ ಬಾರದಂತೆ ಆಹಾರ ಪಡಿತರ ಇಲಾಖೆಯವರು ಸರ್ವರ್ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಇಲ್ಲವಾದಲ್ಲಿ ಜನರು ನಿಮ್ಮ ಮೇಲೆ ನಂಬಿಕೆ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚೇ ಇರುತ್ತದೆ. ಈ ಕಾರ್ಯ ಸಾಧ್ಯವಾದಲ್ಲಿ ಎಷ್ಟೋ ಮಂದಿ ಬಡವರಿಗೆ ತುಂಬಾ ಅನುಕೂಲವಾಗುತ್ತದೆ. ನಾ ಸತ್ತಾಂಗ್ ಮಾಡ್ತೀನಿ, ನೀ ಅತ್ತಾಂಗ್ ಮಾಡು ಎನ್ನುವಂತಾಗಬಾರದು.

ಈ ನಿಟ್ಟಿನಲ್ಲಿ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರ್ವಜನಿಕರ ಪರವಾಗಿ ಮನವಿ ಮಾಡುತ್ತಿದ್ದೇವೆ.

– ಎ.ಎಸ್.ಗೋವಿಂದೇಗೌಡ ಕನ್ನಡ ಉಪನ್ಯಾಸಕರು,
ರೂಪಾನಗರ, ಮೈಸೂರು.

ಕೊಳ್ಳೆ(ಳ್ಳಿ)

ಮಾನ್ಯರೆ,

ಇದುವರೆಗೆ ಭೂಮಿಯನ್ನು ಎಡೆಬಿಡದೆ ಕೊಳ್ಳೆ ಹೊಡೆದ ಖಳ ಮಾನವ ಈಗ ಆಕಾಶಕ್ಕೆ ಕೊಳ್ಳಿಯಿಡಲು ಹೊರಟಿದ್ದಾನೆ!

ಚುಂಬನ

ಈಗ 'ಚಂದ್ರಚುಂಬನ'
ಆಕಾಶದಲ್ಲಿ;
ಹಾಗಿರಲಿ
ಅನಾದಿ ಕಾಲದಿಂದ
ಚಂದ್ರಮುಖಿಯರ
ಚುಂಬನ–ಭೂಮಿಯಲ್ಲಿ!

– ಸಿಪಿಕೆ,
ಹಿರಿಯ ಸಾಹಿತಿ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ದೇವರ ಪೂಜೆ; ಬೇಡಿಕೆಗೋ... ಕೃತಜ್ಞತೆಗೋ...?

> ಪ್ರತಿದಿನ ಬೆಳಗ್ಗೆ ಹಾಸಿಗೆಯಿಂದ ಎದ್ದಾಗ ಪ್ರತಿಯೊಬ್ಬರು ದೇವರಿಗೆ ಬೇಡಿಕೆ ಬದಲು ಕೃತಜ್ಞತೆ ಸಲ್ಲಿಸಬೇಕು. ಏಕೆಂದರೆ ನಮಗೆ ಬದುಕಲು ಮತ್ತೊಂದು ದಿನವನ್ನು ಕರುಣಿಸಿದ್ದಾನೆ ಎಂದು. ಎಷ್ಟೋ ಜನರು ನಿದ್ರೆ ಮಾಡಲು ರಾತ್ರಿ ಹಾಸಿಗೆ ಸೇರಿದವರು ಬೆಳಗ್ಗೆವರೆಗೆ ಅದೇ ಹಾಸಿಗೆಯಲ್ಲಿ ಚಿರನಿದ್ರೆಗೆ ಜಾರಿರುತ್ತಾರೆ. ನಮ್ಮ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡುವಷ್ಟು ಕಣ್ಣಿನ ದೃಷ್ಟಿಯನ್ನು ದೇವರು ನೀಡಿದ್ದಾನೆ ಎಂದು ದೇವರನ್ನು ಭಕ್ತಿಯಿಂದ ನೆನೆಯಬೇಕು, ನಮಿಸಬೇಕು. ಏಕೆಂದರೆ ಎಷ್ಟೋ ಜನರಿಗೆ ತಮ್ಮ ದೇಹದ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡಿಕೊಳ್ಳಲು ಕಣ್ಣುಗಳೇ ಇರುವುದಿಲ್ಲ. ದೇವರು ಮನುಷ್ಯರಿಗೆ ಬೇರಾವುದೇ ಪ್ರಾಣಿಗಳಿಗೆ ನೀಡದೇ ಇರುವ ಬೆಲೆ ಕಟ್ಟಲಾಗದ ಅನೇಕ ಸಂಗತಿಗಳನ್ನು ವರವಾಗಿ ಕರುಣಿಸಿರುತ್ತಾನೆ. ಆದರೆ ಜನ ಕ್ಷುಲ್ಲಕ ವಸ್ತುಗಳಿಗೆ ಬೇಡಿಕೆ ಇಡುತ್ತಲೇ ಇರುತ್ತಾರೆ. ದೇವರು ಏನು ಕೊಟ್ಟ ? ಎಂದು ಪ್ರಶ್ನಿಸಿ ದೇವರನ್ನು ಮತ್ತೆ ಹಿಂಸಿಸಿ ಮತ್ತಷ್ಟು ಕೊಡುವಂತೆ ಕಾಡುತ್ತಾರೆ. ಹೇಗೆ ಮಗುವೊಂದು ತನಗಿಷ್ಟವಾದುದ್ದನ್ನು ಜಾತ್ರೆಯಲ್ಲಿ ಕೊಡಿಸು ಎಂದು ಹೆತ್ತವರಿಗೆ ಪೀಡಿಸುತ್ತದೆಯೋ ಹಾಗೆ ದೇವರನ್ನು ಪೀಡಿಸದೇ ಇರುವ ಆಸ್ತಿಕ ಮನುಜರಿಲ್ಲ.

'ದೇವರು' ಎಂಬುದು ಅನಾದಿ ಕಾಲದಿಂದಲೂ ಬಹು ಚರ್ಚಿತ ವಿಷಯ. ದೇವರ ಅಸ್ತಿತ್ವದ ಬಗ್ಗೆ ಆಸ್ತಿಕರಿಗೆ ಎಳ್ಳಷ್ಟೂ ಸಂಶಯವಿಲ್ಲ, ನಾಸ್ತಿಕರಿಗೆ ಎಳ್ಳಷ್ಟೂ ನಂಬಿಕೆ ಇಲ್ಲ. ಭೂಮಿ ಮೇಲಿನ ಸಕಲ ಜೀವರಾಶಿಗಳೂ ದೇವರ ಸೃಷ್ಟಿ ಎಂದು ಆಸ್ತಿಕರು ದೇವರನ್ನು ಆರಾಧಿಸಿದರೆ, ದೇವರೇ ಮನುಷ್ಯನ ಸೃಷ್ಟಿ ಎಂದು ನಾಸ್ತಿಕರು ಗೇಲಿ ಮಾಡುತ್ತಾರೆ. ಕಲ್ಲಿನ ಮೂರ್ತಿಯನ್ನು ಆರಾಧ್ಯ ದೈವವಾಗಿಸಿಕೊಂಡು ದೇವನೊಬ್ಬ ನಾಮ ಹಲವು ಎಂದು ಭಾವಿಸಿ ಗುಡಿಗೋಪುರಗಳಲ್ಲಿ ವಿವಿಧ ರೀತಿಯ ಪೂಜೆ ಹಾಗೂ ಅಭಿಷೇಕವನ್ನು ಮಾಡಿ ಆಸ್ತಿಕರು ಸಂಪ್ರೀತರಾದರೆ ಕಲ್ಲಿಗೆ ಹಾಲೆರೆಯುವುದು, ಅಭಿಷೇಕ ಮಾಡುವುದು ವ್ಯರ್ಥವೆಂದೂ, ಮೂರ್ಖತನದ ಪರಮಾವಧಿ ಎಂದೂ, ಅದರ ಬದಲಿಗೆ ಹಸಿದವರಿಗೆ ಹಾಲು–ಹಣ್ಣು ನೀಡುವುದು ಕಲ್ಲು ದೇವರಿಗೆ ಅರ್ಪಿಸುವುದಕ್ಕಿಂತ ಮೇಲು ಎಂದು ನಾಸ್ತಿಕರು ವಾದಿಸುತ್ತಾರೆ. ಏನೇ ಆದರೂ ಪ್ರಪಂಚದಲ್ಲಿ ನಾಸ್ತಿಕರಿಗಿಂತ ಆಸ್ತಿಕರ ಸಂಖ್ಯೆ ಇಂದು ಹೆಚ್ಚಾಗಿದ್ದು. ವೈಚಾರಿಕತೆಯಿಂದ ದೇವರ ಅಸ್ತಿತ್ವದ ಕುರಿತು ವಿರುದ್ಧವಾಗಿ ಎಷ್ಟೇ ವಾದಿಸಿದರೂ ಒಳಗೊಳಗೆ ಒಂದು ಅಳುಕನ್ನು ಕೆಲವರು ಸಹ ಹೊಂದಿರುತ್ತಾರೆ. ಎಷ್ಟೇ ವಿಚಾರವಾದಿಗಳು ಎನಿಸಿಕೊಂಡರೂ ವ್ಯಾಧಿ ಆಚಾರಕ್ಕೆ ಮೊರೆ ಹೋದ ಅನೇಕ ಉದಾಹರಣೆಗಳಿವೆ. ತನ್ನ ಜಾತಿ, ಧರ್ಮ, ಆಚಾರವನ್ನು ವಿರೋಧಿಸುವ ವಿಷಯವನ್ನೇ ತನ್ನ ಸಾಹಿತ್ಯದ ವಸ್ತುಗಳಾಗಿ ಮಾಡಿ ಹೀಯಾಳಿಸಿದ ವಿಚಾರವಾದಿಗಳು ಕೊನೆಗೆ ತಮ್ಮ ಅಂತ್ಯ ಸಂಸ್ಕಾರ ತಮ್ಮ ಜಾತಿಯ ರೀತ್ಯ ಆಗಬೇಕೆಂದು ಅಲವತ್ತುಕೊಂಡಿದ್ದಿದೆ. ಒಟ್ಟಿನಲ್ಲಿ ದೇವರು ವಿವಾದ ಮಾಡದಿದ್ದರೂ, ದೇವರನ್ನು ಮನುಷ್ಯರು ಮಾತ್ರ ತಮಗೆ ತೋಚಿದಂತೆ ವಿವಾದ ಮಾಡಿ ಸಮಾಧಾನ ಹೊಂದುತ್ತಿದ್ದಾರೆ.



ದೇವರು ಮನುಷ್ಯನಿಂದ ಏನನ್ನೂ ಕೇಳಿ ಪಡೆಯುವುದಿಲ್ಲ. ಕೇಳುವುದೇನಿದ್ದರೂ ಮನುಷ್ಯನದೆ. ಮನುಷ್ಯ ತನ್ನ ಸಮಾಧಾನಕ್ಕೆ ದೇವರಿಗೆ ವಿವಿಧ ರೀತಿಯ ಪೂಜೆ, ಅಭಿಷೇಕ, ಅಲಂಕಾರ, ಉತ್ಸವ ಮಾಡಿ ತೃಪ್ತಿ ಹೊಂದುತ್ತಾನೆ. ದೇವರ ಹೆಸರಿನಲ್ಲಿ ಅನ್ನಸಂತರ್ಪಣೆ ಮಾಡಿ, ದೇವರ ಹುಂಡಿಗೆ ಕೈತುಂಬಾ ಕಾಣಿಕೆ ಹಾಕಿ, ದೇವರಿಗೆ ವಿವಿಧ ರೀತಿಯ ಒಡವೆ, ಕಿರೀಟ, ಖಡ್ಗ, ವಾಹನ, ಬೆಳ್ಳಿ ಕವಚ, ಚಿನ್ನದ ಕವಚ... ಹೀಗೆ ತನ್ನ ಇಷ್ಟಾನುಸಾರ, ಶಕ್ತಿಯಾನುಸಾರ ದೇವರು ಸಂಪ್ರೀತಿಗೊಳ್ಳುತ್ತಾನೆ ಎಂದು ನಂಬಿ ತನ್ನ ಹರಕೆಗಳನ್ನು ತೀರಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ದೇವರ ಪೂಜೆ ಮಾಡುವ ವೃತ್ತಿಯವರು ಭಕ್ತರ ಭಕ್ತಿಯನ್ನು ಬಂಡವಾಳ ಮಾಡಿಕೊಂಡು ತಮಗಿಷ್ಟವಾದುದ್ದನ್ನು ದೇವರಿಗೆ ಇಷ್ಟ ಎಂದು ಹೇಳಿ ಭಕ್ತರಿಂದ ತಮ್ಮ ಇಷ್ಟಾನುಸಾರಗಳನ್ನು ಈಡೇರಿಸಿಕೊಳ್ಳುತ್ತಿರುವ ಪ್ರಸಂಗಗಳು ಎಗ್ಗಿಲ್ಲದೇ ನಡೆಯುತ್ತಿದೆ.

ದೇವರು ಎಂದರೆ ಕಷ್ಟಕ್ಕೆ ನೆರವಾಗುವವ, ದಾರಿ ತೋರುವವ, ಇಷ್ಟಾರ್ಥಗಳನ್ನು ಈಡೇರಿಸುವವ, ಸಕಲ ಸಿದ್ಧಿಯನ್ನು ಕರುಣಿಸುವವ... ಹೀಗೆ ದೇವರನ್ನು ವಿವಿಧ ಬಗೆಯಲ್ಲಿ ಪರಿಕಲ್ಪಿಸುವವರೇ ಹೆಚ್ಚು. ದೇವಸ್ಥಾನಕ್ಕೆ ಪೂಜೆ, ಅರ್ಚನೆ, ಅಭಿಷೇಕ ಮಾಡಿಸಲು ಹೊರಟಿದ್ದಾರೆ ಎಂದರೆ ಅಲ್ಲಿ ಒಂದು ದೊಡ್ಡ ಬೇಡಿಕೆ ಪಟ್ಟಿಯೇ ಇದೆ ಎಂದರ್ಥ. ವಾಸ್ತವದಲ್ಲಿ ದೇವರ ಪೂಜೆಯನ್ನು ಕೃತಜ್ಞತೆ ಸಲ್ಲಿಸಲು ಮಾಡಬೇಕು. ಆದರೆ ಇಂದು ಕೃತಜ್ಞತೆಗಿಂತ ಹೆಚ್ಚಾಗಿ ಬೇಡಿಕೆ ಸಲ್ಲಿಸಲು ಪೂಜೆ ಮಾಡುತ್ತಿರುವವರೇ ಹೆಚ್ಚು. ಮನುಷ್ಯನ ಬೇಡಿಕೆ ಪಟ್ಟಿ ನೋಡಿದರೆ ದೇವರು ದಂಗಾಗದೇ ಇರುವುದಿಲ್ಲ. ಮನುಷ್ಯನ ಒಂದಷ್ಟು ಆಸೆಗಳಿಗೆ ಅಸ್ತು ಎಂದು ಈಡೇರಿಸಿದ ಮೇಲೂ ಮತ್ತಷ್ಟು ಬೇಡಿಕೆಗಳ ಪಟ್ಟಿ ಸಿದ್ಧವಾಗುತ್ತದೆ. ಮನುಷ್ಯ ಪೂಜೆ ಸಲ್ಲಿಸುವುದರ ಜೊತೆಗೆ ಬೇಡಿಕೆಗಳ ಪಟ್ಟಿ ಸಲ್ಲಿಸುತ್ತಲೇ ಇರುತ್ತಾನೆ. ಒಮ್ಮೊಮ್ಮೆ ತನ್ನ ಇಷ್ಟಾರ್ಥಗಳು ಈಡೇರದೇ ಇದ್ದರೆ ಮತ್ತಷ್ಟು ಪೂಜೆ ಸಲ್ಲಿಸಿ ದೇವರು ಮರೆತಿರಬಹುದು ಎಂದು ಭಾವಿಸಿ ಮತ್ತೆ ನೆನಪಿಸುವ ಕಾರ್ಯವನ್ನು ಮಾಡುತ್ತಾನೆ. ಅಥವಾ ಇಷ್ಟೆಲ್ಲಾ ಪೂಜೆ ಮಾಡಿದ್ದು ವ್ಯರ್ಥವಾಯಿತಲ್ಲಾ ಎಂದು ಮನಸ್ಸಿನಲ್ಲಿಯೇ ದೇವರನ್ನು ಶಪಿಸುವುದು ದೇವರಿಗೆ ಕೇಳದೇ ಇರುವುದಿಲ್ಲ. ಈ ಮಾತನ್ನು ಕೇಳುವ ಶಿಕ್ಷೆಯನ್ನೂ ದೇವರು ಅನುಭವಿಸಬೇಕು.

ಮನೆ ದೇವರಿಗೆ ಪೂಜೆ ಸಲ್ಲಿಸುವುದರ ಜೊತೆಗೆ ಇಂತಿಂತ ಇಷ್ಟಕ್ಕೆ ಇಂತಿಂತ ದೇವಸ್ಥಾನಕ್ಕೆ ಭೇಟಿ ಮಾಡಿ ಎಂಬುದು ಈಗಿನ ಪ್ರಚಲಿತ ಸಂಗತಿ. ಟಿ.ವಿ.ಯಲ್ಲಿ ಬರುವ ಜ್ಯೋತಿಷಿ ಮಹಾನುಭಾವರು ದೇವರ ಏಜೆಂಟರಂತೆ ವರ್ತಿಸುತ್ತಿರುವುದನ್ನು ಕಾಣಬಹುದು. ವೈಜ್ಞಾನಿಕವಾಗಿ ಜ್ಯೋತಿಷ್ಯವನ್ನು ಅಧ್ಯಯನ ಮಾಡದೇ ದುರ್ಬಲ ಮನಸ್ಸಿನ ಜನರನ್ನು ಹೆದರಿಸಿ, ಯಾಮಾರಿಸಿ ಹಣ ಮಾಡುವ ದಂಧೆಗೆ ಇಳಿದಿದ್ದಾರೆ. ಇವರಿಂದ ಪ್ರಾಮಾಣಿಕ ಜ್ಯೋತಿಷಿಗಳನ್ನು ಅನುಮಾನಿಸುವಂತಾಗಿದೆ. ಜ್ಯೋತಿಷಿಗಳು ರೋಗಿಗಳಿಗೆ ವೈದ್ಯರು ಔಷಧಗಳ ಪಟ್ಟಿ ನೀಡುವಂತೆ ಇಂತಿಂತ ಆಸೆಗಳಿಗೆ ಇಂತಿಂತ ದೇವಸ್ಥಾನಕ್ಕೆ ಹೋಗಿ ಹರಕೆ ಕಟ್ಟಿ ತೀರಿಸಿ ಎಂದು ಪರಿಹಾರ ಹೇಳುತ್ತಾರೆ. ಮನೆ ಕಟ್ಟುವ ಆಸೆ ಇದ್ದರೆ ಈ ದೇವಸ್ಥಾನ, ಮದುವೆಯಾಗುವ ಇಷ್ಟವಿದ್ದಲ್ಲಿ ಈ ದೇವಸ್ಥಾನ, ಆರೋಗ್ಯ ಸುಧಾರಣೆಗೆ ಈ ದೇವಸ್ಥಾನ... ಹೀಗೆ ಒಂದೊಂದು ವಿಷಯಕ್ಕೂ ಒಂದೊಂದು ದೇವಸ್ಥಾನಗಳು ಇವೆ. ಹೇಗೆ ವೈದ್ಯಕೀಯ ಕ್ಷೇತ್ರದಲ್ಲಿ ಸ್ಪೆಷಲಿಷ್ಟ್ ಎಂಬುವವರು ಇರುತ್ತಾರೋ ಹಾಗೆಯೇ ಒಂದೊಂದು ವಿಷಯಕ್ಕೆ ಒಂದೊಂದು ದೇವಾಲಯ ಹೆಸರುವಾಸಿಯಾಗಿರುತ್ತದೆ. ಒಂದು ವೈಚಿತ್ರ್ಯವೇನೆಂದರೆ ಆಸ್ಪತ್ರೆಯಲ್ಲಿ ಗುಣವಾಗದ ಕೆಲವು ಚರ್ಮದ ಖಾಯಿಲೆಗಳು ಅನೇಕ ದೇವಾಲಯಗಳಲ್ಲಿ ವಾಸಿಯಾಗುತ್ತಿರುವುದು ಪವಾಡವೋ ಕಾಕತಾಳಿಯವೋ ತಿಳಿಯದು.

ಮನುಷ್ಯ ದೇವರ ಇಷ್ಟಗಳನ್ನು ಹೇಗಾದರೂ ಮಾಡಿ ತಿಳಿದು ಅವನ ಇಷ್ಟಾರ್ಥಗಳನ್ನು ಈಡೇರಿಸಬಹುದೇನೋ? ಆದರೆ ದೇವರು ಮಾತ್ರ ಮನುಷ್ಯನ ಇಷ್ಟಾರ್ಥಗಳನ್ನು ಸುಲಭವಾಗಿ ಈಡೇರಿಸಲು ಸಾಧ್ಯವಿಲ್ಲ. ಏಕೆಂದರೆ ಅವನ ಇಷ್ಟಗಳಿಗೆ ಇತಿಮಿತಿ ಎಂಬುದಿಲ್ಲ. ಒಂದು ಇಷ್ಟ ಈಡೇರಿದರೆ ಮತ್ತೆ ಬರುವಾಗ ಮತ್ತಷ್ಟು ಇಷ್ಟಗಳೊಂದಿಗೆ ಬಂದಿರುತ್ತಾನೆ. ಈಡೇರಿದ ಇಷ್ಟಕ್ಕೆ ಕೃತಜ್ಞತೆ ಸಲ್ಲಿಸುತ್ತಾನೋ ಇಲ್ಲವೋ ಆದರೆ ಬೇಡಿಕೆ ಈಡೇರಿಕೆಗೆ ಮಾತ್ರ ಪೂಜೆಯನ್ನು ಬಹಳ ಶ್ರದ್ಧಾಭಕ್ತಿಯಿಂದ ಸಲ್ಲಿಸುತ್ತಾನೆ. ದೇವರು ಕೊಡುವುದು ಇನ್ನೂ ಬಹಳ ಇದೆ ಎಂಬ ಪಟ್ಟಿಯೇ ಅಧಿಕವಾಗಿರುತ್ತದೆ. ಆದರೆ ದೇವರು ಕೊಟ್ಟಿರುವ ಪಟ್ಟಿಯನ್ನು ಮಾಡುವುದೇ ಇಲ್ಲ, ಅದಕ್ಕಾಗಿ ಕೃತಜ್ಞತೆ ಸಲ್ಲಿಸುವವರು ವಿರಳ.

ಪ್ರತಿದಿನ ಬೆಳಗ್ಗೆ ಹಾಸಿಗೆಯಿಂದ ಎದ್ದಾಗ ಪ್ರತಿಯೊಬ್ಬರು ದೇವರಿಗೆ ಬೇಡಿಕೆ ಬದಲು ಕೃತಜ್ಞತೆ ಸಲ್ಲಿಸಬೇಕು. ಏಕೆಂದರೆ ನಮಗೆ ಬದುಕಲು ಮತ್ತೊಂದು ದಿನವನ್ನು ಕರುಣಿಸಿದ್ದಾನೆ ಎಂದು. ಎಷ್ಟೋ ಜನರು ನಿದ್ರೆ ಮಾಡಲು ರಾತ್ರಿ ಹಾಸಿಗೆ ಸೇರಿದವರು ಬೆಳಗ್ಗೆವರೆಗೆ ಅದೇ ಹಾಸಿಗೆಯಲ್ಲಿ ಚಿರನಿದ್ರೆಗೆ ಜಾರಿರುತ್ತಾರೆ. ನಮ್ಮ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡುವಷ್ಟು ಕಣ್ಣಿನ ದೃಷ್ಟಿಯನ್ನು ದೇವರು ನೀಡಿದ್ದಾನೆ ಎಂದು ದೇವರನ್ನು ಭಕ್ತಿಯಿಂದ ನೆನೆಯಬೇಕು, ನಮಿಸಬೇಕು. ಏಕೆಂದರೆ ಎಷ್ಟೋ ಜನರಿಗೆ ತಮ್ಮ ದೇಹದ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡಿಕೊಳ್ಳಲು ಕಣ್ಣುಗಳೇ ಇರುವುದಿಲ್ಲ. ದೇವರು ಮನುಷ್ಯರಿಗೆ ಬೇರಾವುದೇ ಪ್ರಾಣಿಗಳಿಗೆ ನೀಡದೇ ಇರುವ ಬೆಲೆ ಕಟ್ಟಲಾಗದ ಅನೇಕ ಸಂಗತಿಗಳನ್ನು ವರವಾಗಿ ಕರುಣಿಸಿರುತ್ತಾನೆ. ಆದರೆ ಜನ ಕ್ಷುಲ್ಲಕ ವಸ್ತುಗಳಿಗೆ ಬೇಡಿಕೆ ಇಡುತ್ತಲೇ ಇರುತ್ತಾರೆ. ದೇವರು ಏನು ಕೊಟ್ಟ? ಎಂದು ಪ್ರಶ್ನಿಸಿ ದೇವರನ್ನು ಮತ್ತೆ ಹಿಂಸಿಸಿ ಮತ್ತಷ್ಟು ಕೊಡುವಂತೆ ಕಾಡುತ್ತಾರೆ. ಹೇಗೆ ಮಗುವೊಂದು ತನಗಿಷ್ಟವಾದುದ್ದನ್ನು ಜಾತ್ರೆಯಲ್ಲಿ ಕೊಡಿಸು ಎಂದು ಹೆತ್ತವರಿಗೆ ಪೀಡಿಸುತ್ತದೆಯೋ ಹಾಗೆ ದೇವರನ್ನು ಪೀಡಿಸದೇ ಇರುವ ಆಸ್ತಿಕ ಮನುಜರಿಲ್ಲ.

ಮನುಷ್ಯ ಪರಮಸ್ವಾರ್ಥಿ ಎಂಬುದನ್ನು ನಿತ್ಯವೂ ಒಂದಿಲ್ಲೊಂದು ರೀತಿ ಪ್ರಕಟಿಸುತ್ತಲೇ ಇರುತ್ತಾನೆ. ದೇವರ ಪೂಜೆಯು ಶಾಂತಿ, ಸಮಾಧಾನ, ಧ್ಯಾನಕ್ಕಾಗಿ ಮಾಡಬೇಕು ಎಂದು ಭಾವಿಸದೇ ಬೇಡಿಕೆ ಸಲ್ಲಿಸಲು ಇರುವ ಸುಸಮಯ ಎಂದು ಭಾವಿಸಿರುವುದು ವಿಷಾದಕರ. ಹೇಗೆ ಮುಖ್ಯಮಂತ್ರಿಗಳಿಗೆ ಜನತಾ ದರ್ಶನದಲ್ಲಿ ತಮ್ಮ ಕೆಲಸ ಕೋರಿ ಬೇಡಿಕೆ ಪತ್ರ ಸಲ್ಲಿಸುವರೋ, ಹಾಗೆ ದೇವರ ದರ್ಶನ ಮಾಡುವಾಗ ಬೇಡಿಕೆ ಪಟ್ಟಿ ಸಲ್ಲಿಸುವ ವಾಡಿಕೆಯನ್ನು ಹಲವರು ಇಟ್ಟುಕೊಂಡಿರುತ್ತಾರೆ.

ಸರ್ಕಾರಿ ಕಚೇರಿಗಳಲ್ಲಿ ತಮ್ಮ ಕೆಲಸ ಮಾಡಿಸಿಕೊಳ್ಳಲು ಲಂಚದ ಆಮಿಷ ಒಡ್ಡುವಂತೆ ದೇವಸ್ಥಾನಗಳಲ್ಲಿಯೂ ಅನೇಕರು ದೇವರಿಗೆ ಹಲವು ಕೊಡುಗೆಗಳನ್ನು ನೀಡುವ ಮೂಲಕ ಲಂಚದ ಆಮಿಷ ಒಡ್ಡುವ ಪರಿಪಾಠ ಹೊಂದಿರುತ್ತಾರೆ. ಫ್ಯಾನ್, ಟ್ಯೂಬ್‌ಲೈಟ್, ಮೈಕ್ ಸೆಟ್, ಅಲ್ಮೆರಾ, ಬೋರ್ಡ್ ಇತ್ಯಾದಿಗಳನ್ನು ಕೊಡುಗೆ ಕೊಟ್ಟು, ಅವುಗಳ ಮೇಲೆ ಸೇವಾರ್ಥದಾರರು ಎಂದು ದಪ್ಪ ದಪ್ಪ ಅಕ್ಷರಗಳಲ್ಲಿ ಬರೆಯಿಸಿ ದೇವರು ತಮ್ಮ ಹೆಸರನ್ನು ನಿತ್ಯ ನೋಡಿ ಜಪಿಸಬೇಕು ಎಂದು ಭಾವಿಸುವ ಮೂರ್ಖರೂ ಅನೇಕರಿದ್ದಾರೆ. ದೇವರಿಗೆ ಇಟ್ಟ ನೈವೇದ್ಯ, ಕೊಟ್ಟ ವಸ್ತ್ರ, ಒಡವೆ ಏನಾದರೂ ದೇವರು ಸ್ವೀಕರಿಸಿ ಕೊಂಡೊಯ್ಯುತ್ತಿದ್ದರೆ ಮನುಷ್ಯ ಅವುಗಳನ್ನು ಇಡುತ್ತಲೇ ಇರಲಿಲ್ಲವೇನೋ? ಇಂದು ವರಮಹಾಲಕ್ಷ್ಮಿಗೆ ಇಷ್ಟವಾದ ಸೀರೆ ತರುವ ಬದಲು ಮನೆಲಕ್ಷ್ಮಿಗೆ ಇಷ್ಟವಾದ ಸೀರೆಯನ್ನೇ ತರುವ ವಾಡಿಕೆ ಇದೆ. ಇದೊಂದು ರೀತಿಯ ಬೂಟಾಟಿಕೆ ಅಲ್ಲವೇ?

ಕಣ್ಣಿಗೆ ಕಾಣುವ ದೇವರು ಎನಿಸಿಕೊಂಡ, ಸಕಲವನ್ನು ಮಕ್ಕಳಿಗೆ ಧಾರೆ ಎರೆದು ಬಿಡುವ ಹೆತ್ತವರನ್ನೇ ಕೃತಜ್ಞತಾಪೂರ್ವಕವಾಗಿ ನಡೆಸಿಕೊಳ್ಳದೆ, ಅವರ ಇಳಿವಯಸ್ಸಿನಲ್ಲಿ ಭದ್ರತಾ ಭಾವ ಮೂಡಿಸದೆ, ಗೌರವದಿಂದ ಬಾಳುವಂತೆ ಬಿಡದೆ ಕಾಡುವ ಮನುಜ ಕಣ್ಣಿಗೆ ಕಾಣದ ದೇವರಿಗೆ ಅವನು ಕೊಟ್ಟದ್ದಕ್ಕೆ ಕೃತಜ್ಞತೆ ಸಲ್ಲಿಸುವುದುಂಟೇ? ಮನುಷ್ಯ ತನ್ನ ಕಷ್ಟವಿದ್ದಾಗ ದೇವರನ್ನು ಸ್ಮರಿಸುವಷ್ಟು ಸುಖದ ಸುಪ್ಪತ್ತಿಗೆಯಲ್ಲಿ ಇದ್ದಾಗ ನೆನೆಯುವುದೇ ಇಲ್ಲ. ಹೆತ್ತು, ಹೊತ್ತು, ಬೆಳೆಸಿದ ಅಪ್ಪಅಮ್ಮನನ್ನೇ ಕೆಲಸವಾದ ಮೇಲೆ ಕಡೆಗಣಿಸುವ ಸ್ವಾರ್ಥಿಗೆ ಕಾಣದ ದೇವರು ಯಾವ ಲೆಕ್ಕ? ಎಷ್ಟೋ ಜನ ಹೆತ್ತವರಿಗೆ ಕೃತಜ್ಞತೆ ಸಲ್ಲಿಸುವ ಹಾಗೆ ದೇವರಿಗೂ ಕೃತಜ್ಞತೆ ಸಲ್ಲಿಸುವುದುಂಟು. ಅದರಲ್ಲಿ ಯಾವುದೇ ಕಪಟತನವಾಗಲಿ, ಪ್ರಚಾರವಾಗಲಿ ಇರುವುದಿಲ್ಲ. ಸರ್ವವನ್ನೂ ಕೊಟ್ಟಿರುವ ದೇವರಿಗೆ ಧನ್ಯವಾದ ಹೇಳುವ ಅವಕಾಶಗಳನ್ನು ಕಳೆದುಕೊಳ್ಳಬಾರದು. ಅಂದಹಾಗೆ ದೇವರು ವರ ನೀಡುವ ಮೆಷಿನ್ ಅಲ್ಲ. ದೇವರಿಗೆ ಪೂಜೆ ಸಲ್ಲಿಸದಿದ್ದರೂ ಒಬ್ಬರಿಗೆ ಅನ್ಯಾಯ ಮಾಡದೆ, ಕಷ್ಟದಲ್ಲಿರುವವರಿಗೆ ನೆರವು ನೀಡಿ, ಹಸಿದವರಿಗೆ ಅನ್ನ ನೀಡಿದರೆ ಅದಕ್ಕಿಂತ ದೇವರ ಪೂಜೆ ಮತ್ತೊಂದಿಲ್ಲ. ಅದನ್ನೇ ದೇವರಿಗೆ ಸಲ್ಲಿಸುವ ಕೃತಜ್ಞತೆ ಎಂದು ಭಾವಿಸಿದರೆ ಕೃತಾರ್ಥರಾಗಬಹುದು. ಏನಂತೀರಿ?

ಪದ ತಾಂಬೂಲ :

ಕಷ್ಟ ಬಂದಾಗ ದೇವರ
ನೆನೆಯುವವ ಸಹಜಾತ್ಮ
ಸುಖ ಕಂಡಾಗ ದೇವರಿಗೆ
ನಮಿಸುವವ ಮಹಾತ್ಮ

ಜಾನಪದ ಝೇಂಕಾರದೊಂದಿಗೆ ಪರಿಸರ ಸಂರಕ್ಷಣೆ ಅರಿವು ಮೂಡಿಸಿದ ಯುವ ಸಂಭ್ರಮ



ಗುಂಡ್ಲುಪೇಟೆ ಹಂಗಳದ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಜನಪದ ನೃತ್ಯ.



ಮೈಸೂರಿನ ವಿಕಲಚೇತನರ ಅಭ್ಯುದಯ ಸೇವಾ ಸಂಸ್ಥೆಯ ವಿಶೇಷಚೇತನ ಮಕ್ಕಳಿಂದ ಪರಿಸರ ಸಂರಕ್ಷಣೆ ಜಾಗೃತಿ ನೃತ್ಯ ಪ್ರದರ್ಶನ.

ಒಂದನೇ ಪುಟದಿಂದ

ವಿದ್ಯಾವಾರಿಧಿ ಸಂಯುಕ್ತ ಪದವಿ ಪೂರ್ವ ಕಾಲೇಜು ಕಾಲೇಜು ವಿದ್ಯಾರ್ಥಿಗಳು ಭಕ್ತಿಯ ಸುಧೆ ಹರಿಸಿದರಲ್ಲದೆ ಮೈಸೂರು ದಸರಾ ವೈಭವ ಸಾರಿದರು.

ಅಂಬೇಡ್ಕರ್ ಸ್ಮರಣೆ: ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಕುರಿತ ಆಕರ್ಷಕ ನೃತ್ಯ ಸಂಯೋಜನೆ ಪ್ರಸ್ತುತ ಪಡಿಸಿದ ಚಾಮರಾಜನಗರ ಭೋಗಾಪುರದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ಹೋರಾಟ, ಕೊಡುಗೆ ಹಾಗೂ ಸಂದೇಶಗಳನ್ನು ತಿಳಿಸುವುದರ ಜೊತೆಗೆ ಜೈಭೀಮ್ ಜೈಕಾರ ಮೊಳಗಿಸಿದರು.

ರಿದಂ ಡ್ಯಾನ್ಸ್: ಮೈಸೂರು ಕ್ಯಾತಮಾರನಹಳ್ಳಿಯ ಕೆ.ಎನ್.ಪುರದ ಶ್ರೀಕಂಠೇಶ್ವರ ಕಾಂಪೋಸಿಟ್ ಪದವಿ ಪೂರ್ವ ಕಾಲೇಜು ಕಲಾ ತಂಡದ ರಿದಂ ಡ್ಯಾನ್ಸ್‌ಗೆ ನೆರೆದಿದ್ದ ಯುವ ಸಮೂಹವೇ ಹುಚ್ಚೆದ್ದು ಕುಣಿಯಿತು. ಕನ್ನಡ ಭಾಷೆ ಕುರಿತ ಜನಪ್ರಿಯ ಹಾಡುಗಳಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಸಭಿಕರು ಶಿಳ್ಳೆ–ಚಪ್ಪಾಳೆ ಸುರಿಮಳೆಗೈದರು. ಹಾಗೆಯೇ ಶಂಕರಮಠ ಬಡಾವಣೆಯ ಶ್ರೀಕಾಂತ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರು ಖಡಕ್ ನೃತ್ಯದ ಮೂಲಕ ರಾಜ್ಯ ಪೊಲೀಸರ ಸಾಹಸ, ಶೌರ್ಯ ಹಾಗೂ ಹುದ್ದೆಯ ಜವಾಬ್ದಾರಿಯನ್ನು ತಿಳಿಸಿಕೊಟ್ಟರು. ಅದೇ ರೀತಿ ಪಾಂಡವಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು ಸೇರಿದಂತೆ ಕೆಲ ಕಾಲೇಜು ತಂಡಗಳು ದೇಶ ರಕ್ಷಣೆ ಮಾಡುವ ಸೈನಿಕರ ತ್ಯಾಗ ಬಲಿದಾನದ ಹಾಗೂ ಅವರ ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿದರು. ತಂಡೋಪ ತಂಡವಾಗಿ ಬಂದ ಯುವಕ–ಯುವತಿಯರಿಂದ ಕಿಕ್ಕಿರಿದು ತುಂಬಿದ್ದ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಯುವಸಮೂಹವೇ ಎದ್ದು ಕಾಣುತ್ತಿತ್ತು. ಹಾಡು, ನೃತ್ಯಕ್ಕೆ ತಕ್ಕಂತೆ ನಿಂತಲ್ಲೇ ಕುಣಿದು ಕುಪ್ಪಳಿಸಿದರಲ್ಲದೆ ಕನ್ನಡ ಬಾವುಟಗಳನ್ನು ಹಿಡಿದು ಸಂಭ್ರಮಿಸಿದರು.



ಡಾ.ಅಂಬೇಡ್ಕರ್ ಕುರಿತು ನೃತ್ಯ ಪ್ರದರ್ಶನ ನೀಡಿದ ಚಾ.ನಗರ ಭೋಗಾಪುರದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ



ದಸರಾ ಯುವ ಸಂಭ್ರಮದಲ್ಲಿ ಕಿಕ್ಕಿರಿದು ತುಂಬಿರುವ ಯುವ ಸಮೂಹ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಣ್ಣ ಬಳಿಯಲು ಮಹಿಷಾಸುರನ ಪ್ರತಿಮೆಗೆ ಬಟ್ಟೆ ಸುತ್ತಿರುವ ಜಿಲ್ಲಾಡಳಿತ



ಮೈಸೂರು, ಅ.8(ಎಸ್‌ಪಿಎನ್)– ಮೈಸೂರು ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆಗೆ ಬಣ್ಣ ಬಳಿಯಲು ಪ್ರತಿಮೆ ಸುತ್ತ ಬಟ್ಟೆ ಸುತ್ತಿ ಮುಚ್ಚಿರುವುದಾಗಿ ಜಿಲ್ಲಾಡಳಿತ ಮೂಲಗಳು ತಿಳಿಸಿವೆ.

ಒಂಬತ್ತು ದಿನಗಳ ವಿವಿಧ ಪೂಜೆಗಳು ಚಾಮುಂಡೇಶ್ವರಿ ದೇವಿಗೆ ನೆರವೇರುವುದರಿಂದ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಸುತ್ತಮುತ್ತ ಸೇರಿದಂತೆ ಮಹಿಷಾ ಪ್ರತಿಮೆಗೂ ಬಣ್ಣ ಬಳಿಯಲಾಗುವುದು. ಪ್ರತಿ ವರ್ಷದಂತೆ ಈ ವರ್ಷವೂ ಬಣ್ಣ ಬಳಿಯಲು ಪ್ರತಿಮೆಗೆ ಬಟ್ಟೆಯಿಂದ ಮುಚ್ಚಲಾಗಿದೆ ಎಂದು ಪೊಲೀಸರೂ 'ಮೈಸೂರು ಮಿತ್ರ'ನಿಗೆ ಸ್ಪಷ್ಟಪಡಿಸಿದ್ದಾರೆ.



ಲಯನ್ಸ್ ಕ್ಲಬ್ ಆಫ್ ಮೈಸೂರು ದಕ್ಷಿಣ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಜಿ.ಬಿ. ಸರಗೂರು ಪ್ರೌಢಶಾಲೆಯ ಕಲಾ ಶಿಕ್ಷಕಿ ಕೆ. ಸಂಗೀತಾ ಅವರಿಗೆ ದಕ್ಷಿಣ ಕೇಸರಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಂಸ್ಥೆಯ ಪದಾಧಿಕಾರಿಗಳಾದ ಲಯನ್ ವಿನೋದ್ ರಾಜಶೇಖರ, ಲಯನ್ ಭಾನುಪ್ರಕಾಶ್, ಲಯನ್ ಪ್ರಭಾಕರ್, ಲಯನ್ ವಿಠಲ್, ಲಯನ್ ಸತೀಶ್ ಮತ್ತಿತರರು ಹಾಜರಿದ್ದರು.



ಶಾಸಕ ತನ್ವೀರ್ ಸೇಠ್ ಅವರ ಹುಟ್ಟುಹಬ್ಬವನ್ನು ಮುಸ್ಲಿಂ ಬಾಲಕಿಯರ ಅನಾಥಾಲಯದಲ್ಲಿ ಆಚರಿಸಲಾಯಿತು. ಈ ವೇಳೆ ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಮೊಹಮ್ಮದ್ ರಫಿ, ಮುಸ್ಲಿಂ ಬಾಲಕಿಯರ ಅನಾಥಾಲಯದ ವ್ಯವಸ್ಥಾಪಕ ಸಮಿತಿ ಜಂಟಿ ಕಾರ್ಯದರ್ಶಿ ಮೊಹಮ್ಮದ್ ಮುಮ್ತಾಜ್ ಅಹಮದ್, ವಾರ್ಡನ್ ಸಾದಿಕಾ ಸಾಹೇಬ್, ಕೆಪಿಸಿಸಿ ಸಂಯೋಜಕ ಶೌಕತ್ ಅಲಿಖಾನ್, ಕೆಪಿಸಿಸಿ ಸೋಷಿಯಲ್ ಮೀಡಿಯಾ ಪ್ರಧಾನ ಕಾರ್ಯದರ್ಶಿ ಫಸೀಲ್ ಖಾನ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯದ್ ಫಾರೂಖ್, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಕೈಸರ್ ಅಹಮದ್, ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಸಾಹುಕಾರ್ ಚನ್ನಯ್ಯ ಬ್ಲಾಕ್ ಕಾಂಗ್ರೆಸ್ ಸಮಿತಿ ಬ್ಲಾಕ್ ಅಧ್ಯಕ್ಷೆ ರುಕ್ಮಿಣಿ, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ರೋಸ್ ಲೀಲಾ, ಜಂಟಿ ಕಾರ್ಯದರ್ಶಿ ಸಲ್ಮಾ ಬಾನು, ಸಂಘಟನಾ ಕಾರ್ಯದರ್ಶಿ ನೂರ್ ಸುಲ್ತಾನಾ, ಮೆಹರ್ ಸುಲ್ತಾನಾ ಇತರರು ಉಪಸ್ಥಿತರಿದ್ದರು.

ರಕ್ತದಾನ ಮಾಡಿ ಅಮೂಲ್ಯ ಜೀವಗಳನ್ನು ಉಳಿಸಿ: ಡಾ.ಬಿ.ಎಸ್.ಮಂಜುನಾಥ್



ಮೈಸೂರು, ಅ.8– ಬಾಸುದೇವ ಸೋಮಾನಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಮಯೂರಿ ಮತ್ತು ನಿಸರ್ಗ ಲಯನ್ಸ್ ಕ್ಲಬ್ ಸಹಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಕೆ.ಆರ್. ಆಸ್ಪತ್ರೆಯ ರಕ್ತನಿಧಿ ಅಧಿಕಾರಿ ಡಾ.ಬಿ.ಎಸ್.ಮಂಜುನಾಥ್ ಶಿಬಿರ ಉದ್ಘಾಟಿಸಿ ಮಾತನಾಡಿ, ರಕ್ತದಾನ ಮಾಡುವುದರಿಂದ ಬಡರೋಗಿಗಳಿಗೆ ಅನುಕೂಲವಾಗುತ್ತದೆ. ಜೊತೆಗೆ ಅಪಘಾತಕ್ಕೀಡಾದ ಸಂದರ್ಭದಲ್ಲಿ ರಕ್ತದ ಅನಿವಾರ್ಯತೆ ಇರುತ್ತದೆ. ಆ ಸಂದರ್ಭದಲ್ಲಿ ದಾನಿಗಳ ರಕ್ತವನ್ನು ಶೇಖರಿಸಿ ಅಪಘಾತಕ್ಕೀಡಾದ ವ್ಯಕ್ತಿಯ ಜೀವವನ್ನು ಉಳಿಸಲು ಅನುಕೂಲವಾಗುತ್ತದೆ. ರಕ್ತ ಎನ್ನುವಂತದ್ದು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ಅದು ಮಾನವನ ಶರೀರದಿಂದ ಸಿಗುವ ಅಮೂಲ್ಯವಾದ ಜೀವರಕ್ಷಕ ನಿಧಿ. ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನ ಮಾಡಿ, ಇತರರ ಜೀವ ಉಳಿಸಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಪುಟ್ಟಸ್ವಾಮಿ, ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಟ್ರಸ್ಟ್ ಕಾರ್ಯದರ್ಶಿ ಕುಬೇರ. ಪಿ.ಗೌಡ, ನಿಸರ್ಗ ಲಯನ್ಸ್ ಕ್ಲಬ್ ಅಧ್ಯಕ್ಷ ಜಯಕುಮಾರ್, ವಾಣಿಶ್ರೀ, ಬಸವೇಗೌಡ, ಕೆ.ಎಲ್. ರಾಜಶೇಖರ್, ಕಾರ್ಯಕ್ರಮದ ಸಂಯೋಜಕರಾದ ಡಾ.ಟಿ.ರಮೇಶ್, ಕಚೇರಿ ಅಧೀಕ್ಷಕ ಡಾ.ಎಂ.ಪಿ.ಬಸವರಾಜು ಉಪಸ್ಥಿತರಿದ್ದರು.

ಸೆಸ್ಕ್ ನೌಕರ ರಾಜೇಂದ್ರ ಪ್ರಸಾದ್ ನಿಧನ



ಮೈಸೂರು: ಹೆಚ್.ಡಿ.ಕೋಟೆ ಸೆಸ್ಕ್ ನೌಕರ ರಾಜೇಂದ್ರ ಪ್ರಸಾದ್(43) ಹೃದಯಾಘಾತದಿಂದ ಶನಿವಾರ ನಿಧನರಾದರು.

ಇವರು ತುರುವೇಕೆರೆ ತಾಲೂಕು, ಚಿಕ್ಕಪುರ ಗ್ರಾಮದ ದಿವಂಗತ ನಂಜುಂಡಪ್ಪ(ಛೇರ್ಮನ್)ನವರ ಪುತ್ರ. ಇವರು ತಾಯಿ, ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಎಸ್.ಟಿ.ಸೋಮಶೇಖರ್ ಪಕ್ಷ ಬಿಡುವುದಾದರೆ ಸ್ವಾಗತ'



ಸೋಮಶೇಖರ್



ಯೋಗೇಶ್ವರ್

ರಾಮನಗರ: ಎಸ್.ಟಿ ಸೋಮಶೇಖರ್ ಅವರು ಬಿಜೆಪಿಯಿಂದ ಹೊರಹೋಗುವ ತೀರ್ಮಾನ ಮಾಡಿದ್ದರೇ ನಮ್ಮ ವಿರೋಧವಿಲ್ಲ, ಸ್ವಾಗತಿಸುತ್ತೇವೆ ಎಂದು ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿಗೆ ಮಾಜಿ ಸಚಿವ ಎಸ್.ಟಿ.ಸೋಮಶೇಖರ್ ವಿರೋಧ ವ್ಯಕ್ತಪಡಿಸಿದ ವಿಚಾರ ಕುರಿತು ಚನ್ನಪಟ್ಟಣದಲ್ಲಿ ಯೋಗೇಶ್ವರ್ ಪ್ರತಿಕ್ರಿಯೆ ನೀಡಿದ್ದಾರೆ.

ಎಸ್.ಟಿ.ಸೋಮಶೇಖರ್ ಬಿಜೆಪಿಯಲ್ಲಿ ದೊಡ್ಡ ಫಲಾನುಭವಿ. ಬಿಜೆಪಿಗೆ ಬಂದ ಮೇಲೆ ಮಂತ್ರಿಯಾಗಿ ಪ್ರಬಲ ಖಾತೆ ಪಡೆದರು, ಅಧಿಕಾರ ಅನುಭವಿಸಿದರು. ಇವತ್ತು ಅಧಿಕಾರ ವಿಲ್ಲವೆಂದು ಹೀಗೆ ಮಾತನಾಡುತ್ತಾರೆ. ಡಿಕೆಶಿ ಜೊತೆಗಿನ ಸಂಬಂಧ ಇಟ್ಕೊಂಡು ನಮ್ಮ ಪಕ್ಷವನ್ನು ಟೀಕಿಸುತ್ತಿದ್ದಾರೆ. ಮೈತ್ರಿ ವಿಚಾರ ಚರ್ಚೆಗೂ ಮೊದಲೂ ಟೀಕೆ ಮಾಡುತ್ತಿದ್ದರು, ಈಗಲೂ ಟೀಕೆ ಮಾಡ್ತಿದ್ದಾರೆ. ಬಹುಶಃ ಅವರು ಎಂಎಲ್ಎ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಮಾಜಿ ಶಾಸಕ ಆಗಬಹುದು. ಇನ್ನೇನು ಆಗಲು ಸಾಧ್ಯವಿಲ್ಲ. ಒಂದು ವೇಳೆ ಹೊರಹೋಗುವ ತೀರ್ಮಾನ ಮಾಡಿದ್ದರೆ ನಮ್ಮ ವಿರೋಧವಿಲ್ಲ, ಸ್ವಾಗತಿಸುತ್ತೇವೆ. ಅಧಿಕಾರವಿದ್ದಾಗ ಅನುಭವಿಸಿ ಈಗ ಪಕ್ಷದ ವಿರುದ್ಧ ಮಾತನಾಡುವುದು ಶೋಭೆಯಲ್ಲ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ನಾಯಕರು ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ಬಹಳ ವಿರೋಧವಿದ್ದ ಕ್ಷೇತ್ರ ಚನ್ನಪಟ್ಟಣ. ನಾವು, ಕುಮಾರಸ್ವಾಮಿ ವಿರುದ್ಧ ರಾಜಕೀಯ ಮಾಡಿಕೊಂಡು ಬಂದೆವು. ಆದರೆ ಹೊಂದಾಣಿಕೆ ಅನ್ನೋದು ತಾಳ್ಮೆಯಿಂದ ಪರಸ್ಪರ ಒಂದಾಗಿ ಎಲ್ಲರ ಮನಸ್ಸನ್ನು ಒಗ್ಗೂಡಿಸುವುದು. ಹಾಗಾಗಿ ಮೈತ್ರಿಯ ಅನಿವಾರ್ಯತೆ ಏನೆಂಬುದನ್ನು ಕಾರ್ಯಕರ್ತರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ. ಬೂತ್ ಮಟ್ಟದಲ್ಲಿ ಎರಡೂ ಪಕ್ಷದವರನ್ನು ಒಗ್ಗೂಡಿಸಿ ಒಂದಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳಿದ್ದಾರೆ.

ಶಾಲೆಗಳ ಮಾನ್ಯತೆ ನವೀಕರಣಕ್ಕೆ ಅರ್ಜಿ ಆಹ್ವಾನ

ಮೈಸೂರು, ಅ.8– 2011–22, 2022–23ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ, ಮಾನ್ಯತೆ ನವೀಕರಣವಾಗದಿರುವಂತಹ ಶಾಲೆಗಳು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು, 2023–24ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ಸಂಬಂಧ ಶಾಲಾ ಆಡಳಿತ ಮಂಡಳಿಗಳು ಇಲಾಖೆಯ ವೆಬ್‌ಸೈಟ್‌ನಲ್ಲಿ ಸೃಜಿಸಿರುವ ತಂತ್ರಾಂಶದ ಮೂಲಕ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ತಮ್ಮ ಶಾಲೆಯ ಮಾನ್ಯತೆ ನವೀಕರಿಸಿಕೊಳ್ಳಲು ಸೂಚನೆ ನೀಡಲಾಗಿದೆ.

ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆಯುವ ಸಂಬಂಧ ಅರ್ಜಿ ಸಲ್ಲಿಸಲು ಅಕ್ಟೋಬರ್ 25 ದಿನಾಂಕವಾಗಿರುತ್ತದೆ. ಒಂದು ವೇಳೆ ನಿಗಧಿತ ಅವಧಿಯೊಳಗೆ ಮಾನ್ಯತೆ ಪಡೆಯದ ಆಡಳಿತ ಮಂಡಳಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ತಮ್ಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಹಾಗೂ ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಸರ್ಕಾರಿ, ಮಾನ್ಯತೆ ಹೊಂದಿರುವ ಹತ್ತಿರದ ಶಾಲೆಗಳಿಗೆ ಟ್ಯಾಗ್ ಮಾಡಲಾಗುವುದು ಹಾಗೂ ಆರ್‌ಟಿಇ ಶುಲ್ಕ ಮರುಪಾವತಿ ಸಂಬಂಧದ ಎಲ್ಲಾ ಪರಿಣಾಮಗಳಿಗೂ ಸಂಬಂಧಿಸಿದ ಆಡಳಿತ ಮಂಡಳಿಯವರನ್ನೇ ಹೊಣೆಗಾರರನ್ನಾಗಿಸುವುದಲ್ಲದೇ, ಮಾನ್ಯತೆ ನವೀಕರಣ ಮಾಡಿಕೊಳ್ಳದ ಪ್ರಾಥಮಿಕ, ಪ್ರೌಢಶಾಲೆಗಳ ಕುರಿತಂತೆ ಇಲಾಖಾ ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಹೆಚ್.ಕೆ.ಪಾಂಡು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸನಾತನ ಧರ್ಮದ ಸಂಸ್ಕೃತಿ ಉಳಿಸಬೇಕಿದೆ

● ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ● ಸಾಹಿತಿ ಗಣಂಗೂರು ನಂಜೇಗೌಡ ರಚಿತ 'ಶ್ರೀರಂಗಪಟ್ಟಣದ ಪ್ರಾಚೀನ ದೇಗುಲಗಳು' ಪುಸ್ತಕ ಲೋಕಾರ್ಪಣೆ



ಮಂಡ್ಯ, ಅ.8– ಪರಂಪರೆಯ ಪ್ರತೀಕವಾಗಿರುವ ಸನಾತನ ಧರ್ಮ ವಿನೂತನ ಹಾಗೂ ನೂತನ ಧರ್ಮವಾಗಿದೆ. ಇದರ ವಿಭಿನ್ನ ಸಂಸ್ಕೃತಿ ಉಳಿಸಬೇಕಿದೆ ಎಂದು ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ತಿಳಿಸಿದರು.

ಭಾನುವಾರ ನಗರದ ಹರ್ಡಿಕರ್ ಭವನದಲ್ಲಿ ಪತ್ರಕರ್ತ, ಸಾಹಿತಿ ಗಣಂಗೂರು ನಂಜೇಗೌಡರ 'ಶ್ರೀರಂಗಪಟ್ಟಣದ ಪ್ರಾಚೀನ ದೇಗುಲಗಳು' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸನಾತನ ಧರ್ಮ ಉಳಿಸಿ ಬೆಳೆಸಬೇಕಾಗಿರುವುದು ಎಲ್ಲರ ಕರ್ತವ್ಯ ಎಂದ ಅವರು ಸನಾತನ ಧರ್ಮ ಮತ್ತು ಜಾತಿ ನಿರ್ಮೂಲನೆ ಆಂದೋಲನ ನಡೆಸುವುದಾಗಿ ಸಾಹಿತಿ ಭಗವಾನ್ ಹೇಳಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸ್ವಾಮಿ ವಿವೇಕಾನಂದರು ಚಿಕಾಗೋಗೆ ತೆರಳಲು ಧನ ಸಂಗ್ರಹಿಸಿ ಸಹಾಯ ಮಾಡಿದ ಚಿಕ್ಕಮಗಳೂರಿನ ಅರಸಿಂಗ ಪೆರುಮಾಳ್ ಪತ್ನಿ ಶ್ರೀರಂಗಮ್ಮ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದವರಾಗಿದ್ದು, ಇವರು ವಿವೇಕಾನಂದರಿಗೆ ಆರೈಕೆ ಮಾಡಿದ್ದಾರೆ. ಇವರ ಕುರಿತು ಕೃತಿ ರಚನೆಯಾಗುತ್ತಿದ್ದು, ಶೀಘ್ರದಲ್ಲೇ ಲೋಕಾರ್ಪಣೆಯಾಗಲಿದೆ ಎಂದರು.

ದೇವಾಲಯಗಳು ಸಾಂಸ್ಕೃತಿಕ ಕೇಂದ್ರ, ಹಾಗಾಗಿ ಇವುಗಳನ್ನು ಪುರಾಣ ಮಾಡಬೇಡಿ. ಬದಲಾಗಿ ಇತಿಹಾಸವನ್ನಾಗಿಸಿ, ಜನಸಾಮಾನ್ಯರಿಗೆ ದೇವಾಲಯಗಳನ್ನು ಪರಿಚಯಿಸಿ ಸುಮಧುರ ತಾಣವನ್ನಾಗಿ ಮಾಡಬೇಕಾಗಿದೆ ರಾಜ್ಯದ ಪ್ರತಿ ದೇವಾಲಯಗಳ ಎದುರು ದೇವಾಲಯದ ಮಾಹಿತಿ ಫಲಕಗಳನ್ನು ಹಾಕಿ ಅದರ ಸುತ್ತಳತೆ, ವಿನ್ಯಾಸ, ನಿರ್ಮಾಣದ ಮಾಹಿತಿ, ಪೂಜೆ ಪುನಸ್ಕಾರ ಜೊತೆಗೆ ದೇವಾಲಯದ ಸಮಗ್ರ ಇತಿಹಾಸವುಳ್ಳ ಕೈಪಿಡಿ ನೀಡಬೇಕು. ವಿಶೇಷವಾಗಿ ದೇವಾಲಯದ ಸುತ್ತಲೂ ಏನಿರಬೇಕು, ಏನಿರಬಾರದು ಎಂಬುದನ್ನು ತಿಳಿಯಬೇಕಾಗಿದೆ ಎಂದರು.

ದೇವಾಲಯಗಳಿಗೆ ಚಿನ್ನಾಭರಣ ನೀಡಿದರೆ ಸಾಲದು. ಬದಲಿಗೆ ಆವರಣದಲ್ಲಿ ಸುಂದರ ಉದ್ಯಾನವನ, ವೈದ್ಯಕೀಯ ಕೇಂದ್ರ, ಮಕ್ಕಳಿಗೆ ಶಿಕ್ಷಣ ಕೊಡಿಸುವುದು, ಸೇವಕನನ್ನು ನೇಮಿಸಿ ಉದ್ಯೋಗ ನೀಡುವ ಕೆಲಸ ಆಗಬೇಕು. ತಮಿಳುನಾಡಿನ ಪ್ರಾಚೀನ ದೇಗುಲಗಳ ಕುರಿತು ಬೆಂಗಳೂರು ವಿಶ್ವವಿದ್ಯಾನಿಲಯ ಸಮಗ್ರ ಮಾಹಿತಿಯುಳ್ಳ ಪುಸ್ತಕ ಪ್ರಕಟಿಸಿದೆ. ಆದರೆ ಕರ್ನಾಟಕದ ದೇವಾಲಯಗಳ ಕುರಿತು ಮಾಹಿತಿ ಪ್ರಕಟಿಸಿಲ್ಲ. ದೇವಾಲಯಗಳು ಸಂಸ್ಕೃತಿಯನ್ನು ಬಿಂಬಿಸಲಿದ್ದು, ಕೆಲವೆಡೆ ದೇವಾಲಯದ ಪಳೆಯುಳಿಕೆ ಮಾತ್ರ ಉಳಿದಿವೆ. ಹಾಗಾಗಿ ದೇವಾಲಯಗಳ ಕುರಿತ ಮಾಹಿತಿ ಪುಸ್ತಕಗಳು ಹೆಚ್ಚಿನದಾಗಿ ಹೊರ ಹೊಮ್ಮಬೇಕೆಂದರು.

ಗಣಂಗೂರು ನಂಜೇಗೌಡ ಪ್ರಾಚೀನ ದೇಗುಲಗಳ ಕುರಿತ ಮಾಹಿತಿಯನ್ನು ಕೃತಿ ರೂಪಕ್ಕೆ ತಂದಿರುವುದು ಸಂತಸದ ವಿಚಾರ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೇಗುಲಗಳ ಕೃತಿಗಳು ಹೆಚ್ಚಾಗಿ ಬರಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮಾತನಾಡಿ, ಶ್ರೀರಂಗಪಟ್ಟಣ ಪಾರಂಪರಿಕ ನಗರಿ. ಇಲ್ಲಿನ ಪ್ರಾಚೀನ ದೇಗುಲಗಳ ಬಗ್ಗೆ ಪರಿಚಯ ಮಾಡಿಕೊಡುವ ಕೆಲಸ ಮಾಡಿರುವುದು ಒಳ್ಳೆಯ ಬೆಳವಣಿಗೆ. ವಿಷಯ ಸಂಗ್ರಹಿಸಿ ಪುಸ್ತಕ ಬರೆಯುವುದು ಸುಲಭವಲ್ಲ. ಸತತ ಪರಿಶ್ರಮ ಬೇಕು. ಮುಂದಿನ ದಿನಗಳಲ್ಲಿ ಶ್ರೀರಂಗಪಟ್ಟಣದ ಇತಿಹಾಸ ಹೊರ ತೆಗೆಯುವ ಕೆಲಸ ಮಾಡಬೇಕಾಗಿದೆ ಎಂದರು.

ವೇದಿಕೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಇತಿಹಾಸ ಸಂಶೋಧಕ ತೈಲೂರು ವೆಂಕಟಕೃಷ್ಣ, ಸಾಹಿತ್ಯ ಚಿಂತಕಿ ನಾಗಶ್ರೀ ತ್ಯಾಗರಾಜು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ್, ಪತ್ರಕರ್ತ, ಸಾಹಿತಿ ಗಣಂಗೂರು ನಂಜೇಗೌಡ ಉಪಸ್ಥಿತರಿದ್ದರು.

ಜಮೀನಿಗೆ ಅತಿಕ್ರಮ ಪ್ರವೇಶ: 70 ಮರಗಳ ಹನನ

ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ವಿರುದ್ಧ ಮಹಿಳೆ ಆರೋಪ



ಸರ್ವೇ ಅಧಿಕಾರಿಗಳು ಶಾಮೀಲು

" ಈಗಾಗಲೇ 8 ಬಾರಿ ಅಳತೆ ಮಾಡಲಾಗಿದೆ. ಯಾವ ಸರ್ವೇ ಅಧಿಕಾರಿಗಳು ಅಳತೆಗೆ ಬಂದರೂ ಮೂಲ ಕಲ್ಲಿನಿಂದ ಅಳತೆ ಮಾಡುವುದಿಲ್ಲ. ಪಂಚಲಿಂಗೇಗೌಡರಿಗೆ ಅನುಕೂಲ ಮಾಡಲು ಅಗತ್ಯವಾದ ಸ್ಥಳದಿಂದ ಅಳತೆ ಮಾಡುತ್ತಾ ನನಗೆ ಮೋಸ ಮಾಡುತ್ತಿದ್ದಾರೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರೂ ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

- ಬಿಂದು ಪಟೇಲ್, ನೊಂದ ಮಹಿಳೆ

ಪಾಂಡವಪುರ, ಅ.8– ತಮ್ಮ ಜಮೀನಿಗೆ ಖಾಸಗಿ ಶಿಕ್ಷಣ ಸಂಸ್ಥೆಯವರು ಅತಿಕ್ರಮ ಪ್ರವೇಶ ಮಾಡಿ ಲಕ್ಷಾಂತರ ರೂ. ಬೆಲೆಬಾಳುವ 70 ಮರಗಳನ್ನು ಅಕ್ರಮವಾಗಿ ಕಡಿದು ಹಾಕಿದ್ದಾರೆ ಎಂದು ಮಹಿಳೆಯೊಬ್ಬರು ಪಾಂಡವಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತಾಲೂಕಿನ ಜಯಂತಿನಗರ ಗ್ರಾಮದ ಬಳಿಯ ಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಮುಖ್ಯಸ್ಥರಾದ ಪಂಚಲಿಂಗೇಗೌಡ ಎಂಬುವರು ತಮ್ಮ ಜಮೀನು ಕಬಳಿಸಲು ಹಲವು ಬಾರಿ ಪ್ರಯತ್ನ ನಡೆಸಿದ್ದು, ಅವರಿಗೆ ತಾವು ಜಮೀನು ನೀಡದಿದ್ದ ಕಾರಣ ಪಾಂಡವಪುರ ಸರ್ವೇ ಅಧಿಕಾರಿಗಳಿಗೆ ಹಣ ನೀಡಿ ತಮ್ಮ ಬಾಬ್ತು 7 ಕುಂಟೆ ಜಮೀನು ಒತ್ತುವರಿ ಮಾಡಿಕೊಂಡು ಅದರಲ್ಲಿ ಬೆಳೆದಿದ್ದ 2 ಲಕ್ಷ ರೂ ಮೌಲ್ಯದ 70 ಸಿಲ್ವರ್, ಹೆಬ್ಬೇವು, ಅಡಿಕೆ ಮತ್ತು ಅದರ ಮೇಲೆ ಬೆಳೆಸಿದ್ದ ಮೆಣಸು ಗಿಡಗಳನ್ನು ಕಡಿದು ಹಾಕಿದ್ದಾರೆ ಎಂದು ಜಮೀನಿನ ಮಾಲೀಕರಾದ ಬಿಂದು ಪಟೇಲ್ ಎಂಬಾಕೆ ದೂರು ನೀಡಿದ್ದಾರೆ. ತಾಲೂಕಿನ ಕೆನ್ನಾಳು ಗ್ರಾಮದ ಸರ್ವೇ ನಂ. 192/2 ರಲ್ಲಿ 2 ಎಕರೆ 26 ಕುಂಟೆ ಮತ್ತು 3 ಕುಂಟೆ ಖರಾಬು ಜಮೀನನ್ನು 2006 ರಲ್ಲಿ ಖರೀದಿಸಿ ಅನುಭವದಲ್ಲಿದ್ದೇವೆ. ನಮ್ಮ ಜಮೀನು ಕಬಳಿಸಲು ಬಾಜುದಾರರಾದ ಪಂಚಲಿಂಗೇಗೌಡರು ಹವಣಿಸುತ್ತಿದ್ದರು. ಜಮೀನು ಮಾರುವಂತೆ ಹಲವು ಬಾರಿ ಒತ್ತಡ ತಂದಿದ್ದರು. ತಾವು ಜಮೀನು ಮಾರಾಟ ಮಾಡುವುದಿಲ್ಲ ಎಂದಾಗ ನಿಮ್ಮ ಜಮೀನಿನಲ್ಲಿ ನಮಗೆ ಸೇರಿದ ಜಮೀನು ಇದೆ ಎಂದು ಪದೇ ಪದೆ ಅಳತೆ ಮಾಡಿಸಿ ಅಳತೆಗೆ ಬರುವ ಸರ್ವೇ ಅಧಿಕಾರಿಗಳಿಗೆ ಹಣದ ಆಮಿಷವೊಡ್ಡಿ ನಮ್ಮ ಜಮೀನು ಕಬಳಿಸಿದ್ದಾರೆ. ಶನಿವಾರ ಅಳತೆ ಮಾಡುವ ನೆಪ ಮಾಡಿಕೊಂಡು ನಮ್ಮ ಜಮೀನಿನಲ್ಲಿ ಅಕ್ರಮವಾಗಿ ಕಲ್ಲು ನೆಟ್ಟು ನಮ್ಮ ಜಮೀನಿನ ತಂತಿಬೇಲಿ ಕಿತ್ತು ಬೆಲೆಬಾಳುವ ಮರಗಳನ್ನು ಕಡಿದಿದ್ದಾರೆ. ನಮ್ಮ ಬಾಜುದಾರರಾದ ಶಂಭುಲಿಂಗೇಶ್ವರ ಟ್ರಸ್ಟ್‌ಗೆ ಇದೇ ಗ್ರಾಮದ ಸರ್ವೇ ನಂ.191/1 ರಲ್ಲಿ 2 ಎಕರೆ 24 ಕುಂಟೆ ಜಮೀನು ಇದೆ. ಇದಕ್ಕೆ 24 ಕುಂಟೆ ಖರಾಬು ಸೇರಿದೆ. ಆದರೆ ಅವರು ಹಾಲಿ 4 ಎಕರೆ 13 ಕುಂಟೆ ಜಮೀನು ಅನುಭವದಲ್ಲಿದ್ದಾರೆ. ಜತೆಗೆ ನಮ್ಮ ಜಮೀನನ್ನೂ ಕಬಳಿಸಲು ಸಂಚು ಮಾಡುತ್ತಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆಗೆ ದೂರು ನೀಡಿದರೆ ಅವರು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುತ್ತಾರೆ. ಪೊಲೀಸರಿಗೆ ಹೇಳಿದರೆ ಇದು ಸಿವಿಲ್ ಮ್ಯಾಟರ್ ಎಂದು ಕಳಿಸುತ್ತಾರೆ. ನಾನು ಒಬ್ಬ ಮಹಿಳೆಯಾಗಿದ್ದು, ನಮ್ಮ ಜಮೀನು ಕಬಳಿಸಲು ಹೊಂಚು ಹಾಕಿರುವ ವ್ಯಕ್ತಿಗೆ ಎಲ್ಲರೂ ಸಹಕಾರ ನೀಡುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಾವು ದೂರು ನೀಡುವುದಾಗಿ ಬಿಂದು ಪಟೇಲ್ ಹೇಳಿದರು.

ಬಾಲಕಿಯರ ಖೋಖೋ ಪಂದ್ಯಾವಳಿ ಕರ್ನಾಟಕ ರನ್ನರ್‌ಅಪ್

ಆಲ್ ಇಂಡಿಯಾ ಖೋಖೋ ಪಂದ್ಯಾವಳಿಗೆ ಅರ್ಹತೆ



ಶ್ರೀರಂಗಪಟ್ಟಣ, ಅ.8– ತಮಿಳುನಾಡಿನ ಹೊಸೂರಿನಲ್ಲಿ ನಡೆದ ರಾಷ್ಟ್ರ ಮಟ್ಟದ ಅಸ್ಮಿತ ಖೇಲೋ ಇಂಡಿಯಾ ಬಾಲಕಿಯರ ಖೋಖೋ ಪಂದ್ಯಾವಳಿಯಲ್ಲಿ ಕರ್ನಾಟಕ ಜೂನಿಯರ್ ಹಾಗೂ ಸಬ್ ಜೂನಿಯರ್ ತಂಡಗಳು ದ್ವಿತೀಯ (ರನ್ನರ್) ಸ್ಥಾನ ಪಡೆದು ನವೆಂಬರ್‌ನಲ್ಲಿ ನಡೆಯಲಿರುವ ಆಲ್ ಇಂಡಿಯಾ ಖೋಖೋ ಪಂದ್ಯಾವಳಿಗೆ ಅರ್ಹತೆ ಪಡೆದುಕೊಂಡಿವೆ.

ಹೊಸೂರಿನ ಸೆಂಟ್ ಜಾನ್ ಬೋಸ್ಕೋ ಶಾಲಾವರಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ತಮಿಳುನಾಡು ಜೂನಿಯರ್ ಹಾಗೂ ಸಬ್ ಜೂನಿಯರ್ ತಂಡಗಳ ವಿರುದ್ಧ ಕರ್ನಾಟಕದ ಎರಡೂ ತಂಡಗಳು ಸೋಲನುಭವಿಸಿ ದ್ವಿತೀಯ ಸ್ಥಾನ ಪಡೆದುಕೊಂಡವು.

ಉಳಿದಂತೆ ಜೂನಿಯರ್ ವಿಭಾಗದಲ್ಲಿ ತಮಿಳುನಾಡು ಪ್ರಥಮ, ಕರ್ನಾಟಕ ದ್ವಿತೀಯ, ಕೇರಳ ತೃತೀಯ, ಆಂಧ್ರ ಪ್ರದೇಶ ನಾಲ್ಕನೇ ಸ್ಥಾನ ಪಡೆದರೆ, ಸಬ್ ಜೂನಿಯರ್ ವಿಭಾಗದಲ್ಲಿ ತಮಿಳುನಾಡು ಪ್ರಥಮ, ಕರ್ನಾಟಕ ದ್ವಿತೀಯ, ಪುದುಚೇರಿ ತೃತೀಯ ಹಾಗೂ ಕೇರಳ ನಾಲ್ಕನೇ ಸ್ಥಾನ ಪಡೆದುಕೊಂಡವು. ಇದೇ ವೇಳೆ ರಾಷ್ಟ್ರ ಮತ್ತು ರಾಜ್ಯ ಖೋಖೋ ಅಸೋಷಿಯೇಷನ್ ಪ್ರಮುಖರು ಬಹುಮಾನ ವಿತರಿಸಿದರು.

ಶ್ರೀರಂಗಪಟ್ಟಣದ ಲೇಖನ ಭಾಗಿ: ಕರ್ನಾಟಕ ಸಬ್ ಜೂನಿಯರ್ ತಂಡದಲ್ಲಿ ಶ್ರೀರಂಗಪಟ್ಟಣ ತಾಲೂಕು ಸಂಯುಕ್ತ ಕರ್ನಾಟಕ ಪತ್ರಿಕೆ ವರದಿಗಾರ ಅಲ್ಲಾಪಟ್ಟಣ ಸತೀಶ್ ಅವರ ಪುತ್ರಿ ಪಟ್ಟಣದ ನ್ಯೂ ಆಕ್ಸ್‌ಫರ್ಡ್ ಶಾಲಾ ವಿದ್ಯಾರ್ಥಿನಿ ಲೇಖನ.ಎಸ್ ಭಾಗವಹಿಸಿ ಗಮನ ಸೆಳೆದರು.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ



ಮಂಡ್ಯ, ಅ.8– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕರುನಾಡ ವಿಜಯ ಸೇನೆ ಕಾರ್ಯಕರ್ತರು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ವಿವಿಧೆಡೆಯಿಂದ ಆಗಮಿಸಿದ್ದ ಸೇನೆಯ ಕಾರ್ಯಕರ್ತರು ನಗರದ ಸಿಲ್ವರ್ ಜ್ಯೂಬಿಲಿ ಉದ್ಯಾನವನದಿಂದ ಮೆರವಣಿಗೆ ಹೊರಟು ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಸ್ಥಳಕ್ಕೆ ತೆರಳಿ ಧರಣಿ ಬೆಂಬಲಿಸಿ ಕಾವೇರಿ ನದಿ ನೀರಿನ ವಿಚಾರದಲ್ಲಿ ಕನ್ನಡಿಗರಿಗೆ ನ್ಯಾಯ ದೊರಕಿಸಿ ಕೊಡುವಂತೆ ಒತ್ತಾಯಿಸಿದರು.

ನೆರೆ ರಾಜ್ಯಕ್ಕೆ ನೀರು ಹರಿಸುತ್ತಿರುವ ಸರ್ಕಾರ ರಾಜ್ಯದ ಹಿತ ಮರೆತಿದೆ. ಈಗಾಗಲೇ ರೈತರ ಬೆಳೆಗಳಿಗೆ ನೀರು ನೀಡದೆ ಅವರ ಭವಿಷ್ಯ ಹಾಳು ಮಾಡಿದ್ದಲ್ಲದೆ, ಬೆಂಗಳೂರು ಸೇರಿದಂತೆ ಇತರೆ ನಗರಗಳಿಗೆ ಕುಡಿಯಲು ನೀರು ಇಲ್ಲದಂತೆ ಮಾಡಲು ಹೊರಟಿದೆ. ತಕ್ಷಣ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸುವಂತೆ ಒತ್ತಾಯಿಸಿದರು.

ಸಂಕಷ್ಟ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಧ್ಯ ಪ್ರವೇಶಿಸಬೇಕು. ಕಾವೇರಿ ವಿಚಾರದಲ್ಲಿ ಸಂಕಷ್ಟ ಸೂತ್ರ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಬೇಕು. ಮೇಕೆದಾಟು ಯೋಜನೆಗೆ ಶೀಘ್ರ ಅನುಮತಿ ನೀಡಿ ಯೋಜನೆ ಸಾಕಾರಕ್ಕೆ ಸಹಕಾರ ನೀಡಬೇಕೆಂದು ಒತ್ತಾಯಿಸಿದರು. ಚಿತ್ರದುರ್ಗದಿಂದ ಟ್ಯಾಂಕರ್‌ನಲ್ಲಿ ತಂದಿದ್ದ ನೀರನ್ನು ಜಿಲ್ಲಾಡಳಿತ ಮೂಲಕ ತಮಿಳುನಾಡಿಗೆ ರವಾನಿಸಲು ಮುಂದಾಗಿದ್ದ ಪ್ರತಿಭಟನಾಕಾರರಿಂದ ಅಧಿಕಾರಿಗಳು ಹಾಗೂ ಪೊಲೀಸರು ನೀರು ಸ್ವೀಕರಿಸದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ರೈತ ಹಿತರಕ್ಷಣಾ ಸಮಿತಿ ಮುಖಂಡರು ನೀರನ್ನು ಸ್ವೀಕರಿಸಿದರು.

ಸೇನೆ ರಾಜ್ಯಾಧ್ಯಕ್ಷ ಹೆಚ್.ಎನ್.ದೀಪಕ್ ಮಾತನಾಡಿ, ಕಾವೇರಿ ವಿಚಾರದಲ್ಲಿ ಆಳುವ ಸರ್ಕಾರ ಮತ್ತು ರಾಜಕಾರಣಿಗಳು ನಾಟಕ ಮಾಡುತ್ತಿದ್ದಾರೆ. ಜನರ ಹೋರಾಟದ ಕಿಚ್ಚು ಇದ್ದರೂ ಸಹ ಇವರ ನಾಟಕೀಯ ವರ್ತನೆ ನಿಂತಿಲ್ಲ. ಧೀಮಂತ ರಾಜಕಾರಣಿ ಬಂಗಾರಪ್ಪ ದಿಟ್ಟ ನಿಲುವು ಕೈಗೊಂಡ ಏಕೈಕ ನಾಯಕರಾಗಿದ್ದಾರೆ. ಎಂತಹದೇ ಪರಿಸ್ಥಿತಿ ಇದ್ದರೂ ನೋಡಬೇಕಾಗಿದೆ ಎಂದರು.

ನಾವು ಇಲ್ಲಿ ಕುಡಿಯುವ ನೀರಿಗೆ ಹೋರಾಟ ಮಾಡುತ್ತಿದ್ದರೆ, ತಮಿಳುನಾಡಿನಲ್ಲಿ ಮೂರನೇ ಬೆಳೆಗೆ ನೀರು ಕೇಳುತ್ತಿದ್ದಾರೆ. ಕರ್ನಾಟಕ ಸರ್ಕಾರ ನಿರಂತರವಾಗಿ ನೀರು ಹರಿಸುತ್ತಿದೆ. ಕೂಡಲೇ ನೀರು ನಿಲ್ಲಿಸಬೇಕು. ರೈತರ ಹಿತವೇ ಮುಖ್ಯವಾಗಬೇಕು. ರೈತರ ಸಂಕಷ್ಟಕ್ಕೆ ಸ್ಪಂದಿಸದಿದ್ದ ಮೇಲೆ ಯಾವ ನಿರ್ಧಾರ ಕೈಗೊಂಡರೆ ಏನು, ಕಾವೇರಿ ಹೋರಾಟಕ್ಕೆ ನಿರಂತರ ಬೆಂಬಲ ನೀಡುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಸೇನೆಯ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ರಾಂಪ್ರಸಾದ್, ರಾಜ್ಯ ಕಾರ್ಯದರ್ಶಿ ಗಿರಿಜೇಶ್, ಯುವ ಘಟಕದ ರಾಜ್ಯಾಧ್ಯಕ್ಷ ಆರ್.ಎಸ್.ಮಹೇಶ್, ನವೀನ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ.ವೆಂಕಟೇಶ್, ಬೋರ್‌ವೆಲ್ ನಾರಾಯಣ್ ಸೇರಿದಂತೆ ಹಲವರಿದ್ದರು.

ಅಹಿಂಸೆ, ಸತ್ಯವೆಂಬ ಅಮೂಲ್ಯ ರತ್ನ ಕೊಟ್ಟ ಮಹನೀಯ ಗಾಂಧೀಜಿ

ಮಂಡ್ಯ, ಅ.8– ದಾಸ್ಯ, ಅನ್ಯೆರ್ಮಲ್ಯ, ಲಿಂಗ ಸಮಾನತೆ, ಅಸ್ಪೃಶ್ಯತೆ, ಅಂಧಕಾರ, ಮೌಢ್ಯದಿಂದ ಮುಕ್ತವಾಗಿ ಸ್ವಾವಲಂಬಿಯಾಗಿರಲು ಆಸೆಪಟ್ಟವರು ಮಹಾತ್ಮ ಗಾಂಧೀಜಿ. ಯಾವುದು ಮುಕ್ತಗೊಳಿಸುತ್ತದೋ ಅದು ಶಿಕ್ಷಣ ಎನ್ನುತ್ತಾ ಅಹಿಂಸೆ ಮತ್ತು ಸತ್ಯ ಎಂಬ ಅಮೂಲ್ಯ ರತ್ನಗಳನ್ನು ಕೊಟ್ಟ ಮಹನೀಯರು ಹೌದು ಎಂದು ಚಿಂತಕ ತುಕಾರಾಂ ಶ್ಲಾಘಿಸಿದರು.



ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಮಂಡ್ಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಶನಿವಾರ ಮುಕ್ತಾಯಗೊಂಡ ಗಾಂಧೀಜಿ: ಯುವಜನತೆಗಾಗಿ 2 ದಿನದ ವಿಚಾರ ಸಂಕಿರಣ ಗೋಷ್ಠಿಯಲ್ಲಿ 'ಗಾಂಧೀಜಿ ಜೊತೆಗಿನ ವಾಗ್ವಾದಗಳು' (ನೆಹರು–ಅಂಬೇಡ್ಕರ್ ಚಿಂತನೆಗಳನ್ನು ಅನುಸಂಧಾನಿಸಿ) ವಿಷಯ ಮಂಡಿಸಿದರು.

ಮಾತುಗಳು ಸೋತು ಹೋಗುವ ಕಾಲದಲ್ಲಿದ್ದೇವೆ. ನುಡಿದಂತೆ ನಡೆಯೋಕ್ಕಾಗುತ್ತಿಲ್ಲ ನಡೆಯದಂತೆ ನುಡಿಯೊಕ್ಕಾಗುತ್ತಿಲ್ಲ. ಇದರ ನಡುವೆ ಮಾತು ಗೆಲ್ಲುವ ಅಹಂಕಾರದಲ್ಲಿದ್ದೇವೆ. ಮಾತು ಸೋಲುದಂತೆ ನೋಡಿಕೊಳ್ಳುತ್ತಿದ್ದ ಹಿರಿಯ ಜೀವಗಳು ಕಣ್ಮುಂದೆ ಇಲ್ಲ. ಹೀಗೆ ಬದುಕಿದರೆ ಜಗತ್ತು ಉಳಿಯುತ್ತದೆ ಎನ್ನುತ್ತಿದ್ದ ಜೀವಗಳು ಒಬ್ಬೊಬ್ಬರೆ ಕಾಲು ಕೀಳುತ್ತಿದ್ದಾರೆ. ನೀವು ಒಳ್ಳೆಯವರಾಗಿ ಅಥವಾ ಮನುಷ್ಯರಾಗಿ ಎಂದು ಹೇಳಿಕೊಳ್ಳುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ಸ್ವಾತಂತ್ರ್ಯ ಪಡೆದು 76 ವರ್ಷ ಕಳೆದಿದೆ. ಆದರೆ ಅಂಬೇಡ್ಕರ್ ಅವರನ್ನು ವೈಭವೀಕರಿಸಿ ಅವರ ವಿಚಾರಗಳನ್ನು ಅರಿಯದೇ ಹಿಂದುಳಿದಿದ್ದೀವಿ. ನೆಹರೂ ಬಯಸಿದ ಆಧುನಿಕ ಭಾರತದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರಿಗೆ ಉಳಿಗಾಲವಿಲ್ಲ. ಅವರಿಬ್ಬರನ್ನು ಸೃಷ್ಟಿಸಿರುವ ಜಗತ್ತಿನಲ್ಲಿ ಉಳಿಗಾಲ ಇದೆ ಎಂಬುದನ್ನು ನಂಬಿ ಬದುಕುವ ಉಳಿಗಾಲ ನನಗೂ ಇಲ್ಲ ಇದನ್ನು ಯಾರ ಬಳಿ ಕೇಳಬೇಕು. ಮರ್ಯಾದೆ ಹೆಸರಿನಲ್ಲಿ ಕೊಲ್ಲಲಾಗುತ್ತಿದೆ. ಜಾತಿಯ ಹೆಸರಿನಲ್ಲಿ ಅವಮಾನ ಮಾಡುತ್ತಿದ್ದೇವೆ. ಇದನ್ನೂ ಸಹ ಯಾರ ಹತ್ತಿರ ವಾಗ್ವಾದ ಮಾಡಿ ಕೇಳಲಿ ಎಂದು ಪ್ರಶ್ನಿಸಿದರು.

ಗಾಂಧೀಜಿ ನಂತರದ ಭಾರತವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಗಾಂಧೀಜಿ ಅವರ ಪೂರ್ವ ಆಳ ಅಗಲವನ್ನು ತಿಳಿದುಕೊಳ್ಳಬೇಕಿದೆ. ಗಾಂಧೀಜಿ ಅವರು ಸರಳವಾಗಿದ್ದರು ಎನ್ನುವುದೇ ಒಂದು ವಿಶೇಷವಾಗಿದೆ. ನೂರಾರು ವರ್ಷಗಳ ದಾಸ್ಯದಿಂದ ನಮ್ಮನ್ನ ಆಳಿದ ಬ್ರಿಟಿಷರು ಹೋಗುವಾಗ, ಗಾಂಧೀಜಿ ಅವರು ಹೇಳುತ್ತಾರೆ ನೀವು ನಮಗೆ ಸ್ವಾತಂತ್ರ್ಯವನ್ನು ನೀಡಿದ ಮೇಲೆ ಇಲ್ಲೇ ನಮ್ಮ ಸ್ನೇಹಿತರಾಗಿ ಬಾಳಬಹುದು ಎನ್ನುತ್ತಾರೆ! ಎಲ್ಲಾ ರೀತಿಯಲ್ಲೂ ಶೋಷಣೆ ಮಾಡಿದ ಒಂದು ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಯಾವುದೇ ಶಸ್ತ್ರಗಳಿಲ್ಲದೇ ಪ್ರೀತಿಯ ಮಾತುಗಳಿಂದ ಅಹಿಂಸೆಯ ಮಾಧ್ಯಮದಿಂದ ತಿಳಿಸಿದ ವ್ಯಕ್ತಿ ಯಾರಾದರೂ ಇದ್ದರೆ ಅದು ಮಹಾತ್ಮ ಗಾಂಧೀಜಿ ಎಂದು ಶ್ಲಾಘಿಸಿದರು.

'ಗಾಂಧಿ ಪ್ರಣೀತ ಮಹಿಳೆ ಮತ್ತು ಆಧುನಿಕ ಸಂದರ್ಭ' ವಿಷಯ ಮಂಡಿಸಿದ ನಿವೃತ್ತ ಪ್ರಾಂಶುಪಾಲರಾದ ಲೀಲಾ ಅಪ್ಪಾಜಿ, ಯಾವುದೇ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಿಗುವ ಅಥವಾ ಸಮಾನ ಗೌರವ ಸಿಕ್ಕಿಲ್ಲ. ಎಲ್ಲಿ ಮಹಿಳೆಯರು ಮೇಲುಗೈ ಸಾಧಿಸುವ ವೇಳೆ ಕೌಟುಂಬಿಕವಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ಸಾಧನೆಯ ಅವಕಾಶವಿದ್ದರೂ ಕೂಡ ಸರಳತೆಯ ಕೆಲಸವನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಹಾಗಾಗಿ ಮನೆಯಲ್ಲಿಯೇ ಹೆಚ್ಚು ಕಾಲ ಕಳೆಯುವುದು ಉಂಟು ಎಂದರು.

ಆಧುನಿಕ ಚಿಂತನೆಯಲ್ಲಿ ಗಾಂಧೀಜಿಯವರ ಚಿಂತನೆಗಳು ಪ್ರಸ್ತುತವಾಗುತ್ತವೆ. ಗಾಂಧೀಜಿ ಎಲ್ಲಾ ಚಿಂತನೆಗಳಲ್ಲಿಯೂ ಕೂಡ ಕೆಲವು ಮಿತಿಗಳು ಇರುತ್ತವೆ. 100 ವರ್ಷ ಹಿಂದೆ ಇದ್ದ ಆಗಿನ ಸಂಪ್ರದಾಯದ ಹುರುಳಿನ ಕಾಲದಲ್ಲಿಯೂ ಇಷ್ಟೊಂದು ಚಿಂತನೆಗಳನ್ನು ಮಾಡಿದ್ದು, ಅದನ್ನು ಅನುಸರಣೆಗೆ ತರುವ ಪ್ರಯತ್ನ ಮಾಡಿದ್ದ ಅವರ ಕಾಲವನ್ನು ದಾಟಿದ ವ್ಯಕ್ತಿತ್ವ ಗಾಂಧೀಜಿಯವರದ್ದಾಗಿತ್ತು. ಇವು ನಮ್ಮ ಆಧುನಿಕ ಕಾಲದ ಜೀವನಕ್ಕೆ ರೂಢಿಸಿಕೊಳ್ಳಲು ಗಾಂಧಿ ಚಿಂತನೆಗಳು ಅವಶ್ಯಕವಾಗಿವೆ ಎಂದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಂ.ಕೆಂಪಮ್ಮ ಭಾಗವಹಿಸಿದ್ದರು.

ಫುಟ್ಬಾಲ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು, ಅ.8(ಎಂಕೆ)– ಮೈಸೂರಿನ ಹಾರ್ಡ್ವಿಕ್ ಶಾಲೆ ಆವರಣದಲ್ಲಿ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಹಾಗೂ ಅಶೋಕ ಫುಟ್ಬಾಲ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಸೆವೆನ್ ಎ ಸೈಡ್ ಫುಟ್ಬಾಲ್ ಪಂದ್ಯಾವಳಿ ವಿಜೇತರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಬಹುಮಾನ ವಿತರಿಸಿದರು.

17 ವರ್ಷದ ಬಾಲಕರ ವಿಭಾಗದಲ್ಲಿ ಕಿಶೋರ್ ಫುಟ್ಬಾಲ್ ಕ್ಲಬ್ ಪ್ರಥಮ ಸ್ಥಾನ ಪಡೆದರೆ, ಅಶೋಕ ಫುಟ್ಬಾಲ್ ಕ್ಲಬ್ ದ್ವಿತೀಯ ಬಹುಮಾನ ಪಡೆಯಿತು. 19 ವರ್ಷದ ಬಾಲಕರ ವಿಭಾಗದಲ್ಲಿ ಲಾ ಗ್ಯಾಲಕ್ಸಿ ಕ್ಲಬ್ ಪ್ರಥಮ ಸ್ಥಾನ, ಗಾಂಧಿನಗರದ ಅಂಬೇಡ್ಕರ್ ಫುಟ್ಬಾಲ್ ಅಸೋಸಿಯೇಷನ್ ದ್ವಿತೀಯ ಬಹುಮಾನ ಪಡೆದುಕೊಂಡಿತು.

ಈ ವೇಳೆ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ಮೈಸೂರು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಅಶೋಕಪುರಂ ಫುಟ್ಬಾಲ್ ಕ್ಲಬ್‌ನ ಅಧ್ಯಕ್ಷ ಎಂ.ಎಸ್.ಮಧುಸೂದನ್, ಎಂ.ಎಸ್.ಪ್ರಮೋದ್, ಅನಂತ್ ಕುಮಾರ್, ಗಿರೀಶ್ ಕುಮಾರ್ ಮತ್ತಿತರರಿದ್ದರು.

ಇಸ್ರೇಲ್ ಮೇಲೆ ಹಮಾಸ್ ಉಗ್ರರ ದಾಳಿ: ಸಾವಿನ ಸಂಖ್ಯೆ 400ಕ್ಕೆ ಏರಿಕೆ



ಟೆಲ್ ಅವಿವ್(ಇಸ್ರೇಲ್), ಅ.8– ಗಾಜಾ ಪಟ್ಟಿಯ ಬಳಿ ಇಸ್ರೇಲ್ ಮೇಲೆ ಹಮಾಸ್ ಉಗ್ರರು ನಡೆಸಿದ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 400ಕ್ಕೆ ಏರಿಕೆಯಾಗಿದೆ ಮತ್ತು ಸಾವಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎಂದು ಟೈಮ್ಸ್ ಆಫ್ ಇಸ್ರೇಲ್ ಭಾನುವಾರ ವರದಿ ಮಾಡಿದೆ.

ಉಗ್ರರ ದಾಳಿಯಲ್ಲಿ ಹಲವು ಸೈನಿಕರು ಮತ್ತು ಪೊಲೀಸರು ಸೇರಿದಂತೆ 400ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ ಮತ್ತು 2,048ಕ್ಕೂ ಹೆಚ್ಚು ಜನ ಗಾಯಗೊಂಡಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಇಸ್ರೇಲ್ ಮೂಲದ ಮಾಧ್ಯಮ ವರದಿ ಮಾಡಿದೆ.

ಹಮಾಸ್ ರಾಕೆಟ್ ದಾಳಿ ಪ್ರಾರಂಭಿಸಿದ 24 ಗಂಟೆಗಳ ನಂತರ, ಗಾಜಾ ಗಡಿಯಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆಯುತ್ತಿದ್ದು, IDF ಎಲ್ಲಾ ಭಯೋತ್ಪಾದಕರನ್ನು ತಟಸ್ಥಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಪ್ಯಾಲೆಸ್ತೀನ್‌ನ ಭಯೋತ್ಪಾದಕ ಸಂಘಟನೆ ಹಮಾಸ್ ಕೇವಲ 20 ನಿಮಿಷಗಳಲ್ಲಿ ಇಸ್ರೇಲ್ ಮೇಲೆ 5 ಸಾವಿರ ರಾಕೆಟ್‌ಗಳನ್ನು ಹಾರಿಸಿದ್ದು, ಈ ಸಂಘರ್ಷದಲ್ಲಿ ಸಾವಿನ ಸಂಖ್ಯೆ ನಿರಂತರವಾಗಿ ಹೆಚ್ಚಾಗತೊಡಗಿದೆ. ಇನ್ನು ಪ್ರತೀಕಾರದ ದಾಳಿಯಲ್ಲಿ ಇದುವರೆಗೆ 300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಗಾಜಾದಲ್ಲಿ 230 ಮಂದಿ ಸಾವನ್ನಪ್ಪಿದ್ದಾರೆ. ಇದಕ್ಕೂ ಮುನ್ನ ಹಮಾಸ್ ಹಲವು ಇಸ್ರೇಲಿ ಸೈನಿಕರು ಹಾಗೂ ಇಸ್ರೇಲಿ ಪ್ರಜೆಗಳನ್ನು ಒತ್ತೆಯಾಳಾಗಿರಿಸಿಕೊಂಡಿತ್ತು.

ವಚನಸಾಹಿತ್ಯ ರಸಪ್ರಶ್ನೆ: ಧಾರವಾಡದ ಅನುಪಮ ಶಿವಶೆಟ್ಟರ್‌ಗೆ ಬಹುಮಾನ

ಮೈಸೂರು, ಅ. 8– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 71ನೇ ವಚನ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಧಾರವಾಡದ ಅನುಪಮ ಶಿವಶೆಟ್ಟರ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.



ಗೋಕುಲಂನಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ




ಮೈಸೂರು, ಅ.8(ಬಿಎಲ್‌ಯು)– ಟೀಂ ಮೈಸೂರು ಹಾಗೂ ಗೋಕುಲಂ ಸ್ನೇಹಿತರು ಜೊತೆಗೂಡಿ ಮೈಸೂರಿನ ಗೋಕುಲಂ ಮೂರನೆ ಹಂತದ ಆಟದ ಮೈದಾನದಲ್ಲಿ ವಿವಿಧ ರೀತಿಯ ಗಿಡಗಳನ್ನು ನೆಟ್ಟು ಮರ ಬೆಳೆಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಖ್ಯಾತ ಮಕ್ಕಳ ತಜ್ಞ ಡಾ.ವಾಮನ್ ರಾವ್ ಬಾಪಟ್ ಸಸಿ ನೆಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಹೆಚ್ಚು ಮರಗಳನ್ನು ಬೆಳೆಸುವುದರಿಂದ ಆಗುವ ಉಪಯೋಗದ ಮಹತ್ವವನ್ನು ಈ ವೇಳೆ ಡಾ.ವಾಮನ್ ರಾವ್ ಬಾಪಟ್ ತಿಳಿಸಿದರು.

ಪುಟಾಣಿ ಮಕ್ಕಳು ಹಸಿರು ಮೈಸೂರು ಅಭಿಯಾನದಲ್ಲಿ ಕೈಜೋಡಿಸಿ ಪ್ರಕೃತಿ ಮೇಲಿನ ಪ್ರೀತಿ ಪ್ರದರ್ಶಿಸಿದರು. ಆರ್‌ಎಸ್‌ಎಸ್‌ನ ಜೈಪ್ರಕಾಶ್, ಜಿಲ್ಲಾ ಪತ್ರಿಕಾ ಪ್ರತಿನಿಧಿಗಳ ಸಂಘದ ಪ್ರಧಾನ ಕಾರ್ಯದರ್ಶಿ ರವಿ, ಖಜಾಂಚಿ ಪ್ರಕಾಶ್ ಈ ವೇಳೆ ಉಪಸ್ಥಿತರಿದ್ದರು.

ಟೀಂ ಮೈಸೂರ್‌ನ ಗೋಕುಲ್ ಗೋವರ್ಧನ್, ಕಿರಣ್ ಜೈರಾಮ್ ಗೌಡ, ಯಶ್ವಂತ್, ಅನಿಲ್ ಜೈನ್, ಹಿರಿಯಣ್ಣ, ಮನೋಹರ್, ಹರೀಶ್ ಬಾಬು, ಪ್ರಸನ್ನ ರಾಜ್ಗುರು, ಆನಂದ್, ಮುರುಳಿ, ಹರೀಶ್ ಶೆಟ್ಟಿ, ಮಂಜು ಫಾರ್ಮಾ, ಸುರೇಶ್ ಸುಮಂತ್, ಗಣೇಶ್, ಹೇಮಂತ್, ಮಂಜು, ಬಾಲು, ಸಹನ, ಗೌರವ್ ಸುಧಾ ಮುರುಳಿ, ಕುಮಾರಿ ಸುಕೃತ, ಹರ್ಷಿತ ಈ ಸಂದರ್ಭದಲ್ಲಿ ಹಾಜರಿದ್ದರು. ಗೋಕುಲಂ ಸ್ನೇಹಿತರಾದ ದಿನೇಶ್ ಗೌಡ, ಅಶೋಕ್, ಜಯಣ್ಣ, ಭರತ್, ಕೃಷ್ಣಪ್ಪ, ರವಿಚಂದ್ರ, ಕೂಡ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅ.11, ಕೆ.ಆರ್.ಪೇಟೆಯಲ್ಲಿ ವಿಶ್ವಕರ್ಮ ಜಯಂತಿ



ಕೆ.ಆರ್.ಪೇಟೆ, ಅ.8– ತಾಲೂಕು ವಿಶ್ವಕರ್ಮ ಸಂಘಟನೆಗಳ ಒಕ್ಕೂಟದಿಂದ ಅ.11ರಂದು ಪಟ್ಟಣದ ಜಯಮ್ಮ–ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ವಿಶ್ವಕರ್ಮ ಜಯಂತಿ ಆಯೋಜಿಸಲಾಗಿದೆ ಎಂದು ತಾಲೂಕು ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ವಿಶ್ವಕರ್ಮ ಸಮಾಜದ ಕಚೇರಿಯಲ್ಲಿ ವಿಶ್ವಕರ್ಮ ಮಹೋತ್ಸವದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಅರಕಲಗೂಡು ಅರೆಮಾದನಹಳ್ಳಿ ವಿಶ್ವಕರ್ಮ ಮಠದ ಪೀಠಾಧ್ಯಕ್ಷ ಶ್ರೀಗುರುಶಿವ ಸುಜ್ಞಾನತೀರ್ಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸುವರು. ಶಾಸಕ ಹೆಚ್.ಟಿ. ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ವಿಶ್ವಕರ್ಮ ಭಾವಚಿತ್ರವನ್ನು ಸಂಸದೆ ಸುಮಲತಾ ಅಂಬರೀಶ್ ಅನಾವರಣಗೊಳಿಸುವರು.

ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ, ವಿಧಾನಪರಿಷತ್ ಸದಸ್ಯ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಸಂಸ್ಥಾಪಕ ಅಧ್ಯಕ್ಷ ಕೆ.ಪಿ.ನಂಜುಂಡಿ ಪ್ರಾಸ್ತಾವಿಕ ನುಡಿಗಳನ್ನಾಡುವರು. ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕೇಶವ್ ಪ್ರಸಾದ್, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್ ಸೇರಿದಂತೆ ವಿವಿಧ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕಾರ್ಯಕ್ರಮಕ್ಕೂ ಮುನ್ನಾ ವಿಶ್ವಕರ್ಮರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ತಾಲೂಕು ವಿಶ್ವಕರ್ಮ ಮಹಾಸಭಾ ಉಪಾಧ್ಯಕ್ಷ ರೂಪೇಶ್, ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಸೋಮಾಚಾರ್, ಮುಖಂಡರಾದ ಟಿಎಪಿಸಿಎಂಎಸ್ ರವಿಕುಮಾರ್, ಎನ್.ಜೆ.ಮಂಜು, ಎಸ್.ಅಶೋಕ್ , ಶ್ರೀನಿವಾಸಾಚಾರ್, ಶಿಕ್ಷಕರಾದ ರಮೇಶ್, ಶಶಿಧರ್, ಪ್ರಕಾಶಾಚಾರ್ ಮತ್ತಿತರರಿದ್ದರು.

ಮೈಸೂರು ಮಿತ್ರ ಸೋಮವಾರ 9 ಅಕ್ಟೋಬರ್ 2023

ಸ್ಟವ್ ರಿಪೇರಿ ಮಾಡುತ್ತಿದ್ದ ವೇಳೆ ಗ್ಯಾಸ್ ಸೋರಿಕೆ

ಸುಟ್ಟ ಗಾಯಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಅನಾಥಾಶ್ರಮದ ಮಾಲೀಕ ಸಾವು

ಮಡಿಕೇರಿ,ಅ.8– ಕೆಲ ದಿನಗಳ ಹಿಂದೆ ಗ್ಯಾಸ್ ಸ್ಟವ್ ರಿಪೇರಿ ಮಾಡುತ್ತಿದ್ದ ಸಂದರ್ಭ ಗ್ಯಾಸ್ ಸೋರಿಕೆಯಾಗಿ ಸುಟ್ಟ ಗಾಯಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಮೇಶ್ ಅವರು ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ನಿಧನರಾಗಿದ್ದಾರೆ.



ಗ್ಯಾಸ್ ಸೋರಿಕೆಯ ಘಟನೆಯಲ್ಲಿ ಮೃತರ ಪತ್ನಿ ಮತ್ತು ತಂದೆಗೂ ಸುಟ್ಟಗಾಯಗಳಾಗಿದ್ದು, ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ರಮೇಶ್ ಮೂವರು ಪುತ್ರಿಯರನ್ನು ಅಗಲಿದ್ದಾರೆ. ನಗರದ ರಾಣಿಪೇಟೆ ನಿವಾಸಿಯಾಗಿದ್ದ ರಮೇಶ್ ಅವರು ಸುಂಟಿಕೊಪ್ಪ ಸಮೀಪದ 7ನೇ ಹೊಸಕೋಟೆಯ ತೊಂಡೂರಿನಲ್ಲಿ ಅನಾಥಾಶ್ರಮ ನಡೆಸುವ ಮೂಲಕ ಹತ್ತಾರು ಅನಾಥ ಜೀವಗಳಿಗೆ ಆಸರೆಯಾಗಿದ್ದರು. ಅವರ 'ವಿಕಾಸ್ ಜನಸೇವಾ ಟ್ರಸ್ಟ್' ಎಂಬ ಅನಾಥಾಶ್ರಮದಲ್ಲಿ ಪ್ರಸ್ತುತ 30ಕ್ಕೂ ಅಧಿಕ ಅನಾಥ ವಯೋವೃದ್ಧರು ಆಶ್ರಯ ಪಡೆದಿದ್ದಾರೆ. ರಮೇಶ್ ಅವರ ಅಕಾಲಿಕ ನಿಧನಕ್ಕೆ ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಸಂತಾಪ ವ್ಯಕ್ತವಾಗಿದೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಡಿಕೇರಿಯ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

ಶಾಸಕರ ಸಂತಾಪ: ಸಮಾಜ ಸೇವಕ ರಮೇಶ್ ಅವರ ನಿಧನಕ್ಕೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ತೀವ್ರ ಸಂತಾಪ ಸೂಚಿಸಿದರು. ಕುಶಾಲನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಕಾಸ್ ಜನಸೇವಾ ಟ್ರಸ್ಟ್ ಆಶ್ರಮ ಮುಚ್ಚದಂತೆ ಕ್ರಮವಹಿಸುವ ಬಗ್ಗೆ ಭರವಸೆ ನೀಡಿದರು. ಆಶ್ರಮ ವಾಸಿಗಳಿಗೆ ಅನಾನುಕೂಲ ಉಂಟಾಗದಂತೆ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಲಾಗುವುದು. ಮತ್ತೊಮ್ಮೆ ಆಶ್ರಮಕ್ಕೆ ಭೇಟಿ ನೀಡಿ ಆಗಬೇಕಾದ ಕಾರ್ಯಗಳ ಬಗ್ಗೆ ಗಮನ ಹರಿಸಲಾಗುವುದು. ಆಶ್ರಮ ವಾಸಿಗಳ ಕ್ಷೇಮಕ್ಕಾಗಿ ಸಾರ್ವಜನಿಕರು, ದಾನಿಗಳು ಮುಂದೆ ಬಂದಲ್ಲಿ ಸಹಕಾರವಾಗಲಿದೆ ಎಂದು ಹೇಳಿದರು. ಮೃತರಿಗೆ ಹಾಗೂ ಅವರ ಕುಟುಂಬಕ್ಕೆ ದೊರೆಯಬಹುದಾದ ಎಲ್ಲಾ ರೀತಿಯ ಆರ್ಥಿಕ ನೆರವು ಕಲ್ಪಿಸುವ ಭರವಸೆ ವ್ಯಕ್ತಪಡಿಸಿದರು. ಮೃತರ ಮರಣೋತ್ತರ ವರದಿ ದೊರೆತ ನಂತರ ಸಾವಿಗೆ ಕಾರಣವಾದ ಅಂಶದ ಅನುಗುಣವಾಗಿ ಕಾನೂನು ರೀತಿಯ ಅವಕಾಶವಿದ್ದಲ್ಲಿ ಸರಕಾರದಿಂದ ಅಗತ್ಯ ನೆರವು ಕಲ್ಪಿಸಲು ಕ್ರಮವಹಿಸಲಾಗುವುದು ಎಂದು ಶಾಸಕ ಡಾ.ಮಂಥರ್ ಗೌಡ ಭರವಸೆ ನೀಡಿದರು.

ಕರವೇ ಜಿಲ್ಲಾಧ್ಯಕ್ಷ ವೆಂಕಟೇಶ್ ಪೂಜಾರಿ ನಿಧನ

ಕುಶಾಲನಗರ : ಕರ್ನಾಟಕ ರಕ್ಷಣಾ ವೇದಿಕೆ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟೇಶ್ ಪೂಜಾರಿ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನ ಹೊಂದಿದರು. ಅವರಿಗೆ 51 ವರ್ಷ ವಯಸ್ಸಾಗಿತ್ತು. ಪಟ್ಟಣದ ಕರಿಯಪ್ಪ ಬಡಾವಣೆ ನಿವಾಸಿಯಾದ ವೆಂಕಟೇಶ್ ಪೂಜಾರಿ ಅವರು ಪತ್ನಿ ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಕನ್ನಡ ನಾಡು, ನುಡಿ, ನೆಲ, ಜಲ ಸಂರಕ್ಷಣೆಗಾಗಿ ಟೊಂಕಕಟ್ಟಿ ನಿಂತಿದ್ದ ಇವರು ಅನೇಕ ಜನಪರ ಹೋರಾಟದ ಮೂಲಕ ಜಿಲ್ಲೆಯಲ್ಲಿ ಮನೆಮಾತಾಗಿದ್ದರು. ರಕ್ಷಣಾ ವೇದಿಕೆ ಸಾವಿರಾರು ಕಾರ್ಯಕರ್ತರ ಬಳಗವನ್ನು ಹೊಂದಿದ್ದ ಇವರ ನಿಧನ ಸುದ್ದಿ ಅಭಿಮಾನಿಗಳಿಗೆ ತೀವ್ರ ನೋವು ತಂದಿದೆ. ಕರಿಯಪ್ಪ ಬಡಾವಣೆಯ ಅವರ ನಿವಾಸದ ಮುಂದೆ ಸಂಜೆ ಪೂಜಾರಿ ಅವರ ಪಾರ್ಥಿವ ಶರೀರವನ್ನು ಇಟ್ಟು ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಭಾನುವಾರ ರಾತ್ರಿ ಸ್ವಗ್ರಾಮ ಗೋಣಿಕೊಪ್ಪದಲ್ಲಿ ಆಯೋಜಿಸಿದ್ದ ಅಂತ್ಯಸಂಸ್ಕಾರದಲ್ಲಿ ವೆಂಕಟೇಶ್ ಪೂಜಾರಿ ಪಂಚಭೂತಗಳಲ್ಲಿ ಲೀನರಾದರು.



ನಿವೃತ್ತ ಅರಣ್ಯಾಧಿಕಾರಿ ಎಚ್.ರಾಜಪ್ಪ

ಕುಶಾಲನಗರ : ಪಟ್ಟಣದ ಶಿವರಾಮ್ ಕಾರಂತ್ ಬಡಾವಣೆ(ಗೌಡ ಸಮಾಜದ ಎದುರಿನ ಬಡಾವಣೆ ಬಲಮುರಿ ದೇವಸ್ಥಾನದ ಸಮೀಪ)ಯ ನಿವಾಸಿ ನಿವೃತ್ತ ಅರಣ್ಯಾಧಿಕಾರಿ ಎಚ್.ರಾಜಪ್ಪ (62), ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ಮಧ್ಯಾಹ್ನ ನಿಧನರಾದರು. ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ರಾಜಪ್ಪ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮೃತರು ಪತ್ನಿ ಕೆ.ಆರ್.ರಾಣಿ(ಮುಖ್ಯ ಶಿಕ್ಷಕಿ, ಕುಶಾಲನಗರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ) ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವು ಸೋಮವಾರ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ರಾಜಪ್ಪ ಅವರ ನಿಧನಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಶಿಕ್ಷಕ ವೃಂದ ಸಂತಾಪ ಸೂಚಿಸಿದೆ.



ಮಗುಚಿ ಬಿದ್ದ ಕಲ್ಲಂಗಡಿ ತುಂಬಿದ ಲಾರಿ

ಚಾಲಕನಿಗೆ ಗಾಯ, ಚೆಲ್ಲಾಪಿಲ್ಲಿಯಾಗಿ ಬಿದ್ದ ಕಲ್ಲಂಗಡಿ

ಸುಂಟಿಕೊಪ್ಪ,ಅ.8– ಚಾಲಕನ ನಿಯಂತ್ರಣ ತಪ್ಪಿ ಕಲ್ಲಂಗಡಿ ಹಣ್ಣು ಸಾಗಿಸುತ್ತಿದ್ದ ಲಾರಿಯೊಂದು ಕೊಡಗರಹಳ್ಳಿ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಮಗುಚಿಕೊಂಡಿದ್ದು, ಅದೃಷ್ಟವಶಾತ್ ಯಾವುದೇ ರೀತಿಯ ಪ್ರಾಣ ಹಾನಿ ಸಂಭವಿಸಿಲ್ಲ. ರಾಷ್ಟ್ರೀಯ ಹೆದ್ದಾರಿಯ ಕೊಡಗರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾರುತಿ ನಗರದ ತಿರುವಿನಲ್ಲಿ ಮೈಸೂರು ಕಡೆಯಿಂದ ಮಡಿಕೇರಿ ಕಡೆಗೆ ಕಲ್ಲಂಗಡಿ ಹಣ್ಣುಗಳನ್ನು ಹೊತ್ತೊಯ್ಯುತ್ತಿದ್ದ ಲಾರಿ ಮಗುಚಿ ಬಿದ್ದಿದೆ. ಪರಿಣಾಮ ಲಾರಿಯಲ್ಲಿದ್ದ ಕಲ್ಲಂಗಡಿ ಹಣ್ಣು ಚೆಲ್ಲಾಪಿಲ್ಲಿಯಾಗಿದ್ದು ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಉದ್ಯಮಿ ವಿದ್ಯಾಧರ್

ಕುಶಾಲನಗರ : ಪಟ್ಟಣದ ಮಂಜುನಾಥ್ ಮೆಡಿಕಲ್ ಸ್ಟೋರ್ ಮಾಲೀಕ ಉದ್ಯಮಿ ಟಿ.ಎಸ್. ವಿದ್ಯಾದರ್ (62) ಭಾನುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ವಿದ್ಯಾದರ್ ನಿಧನಕ್ಕೆ ಪಟ್ಟಣದ ಗಣ್ಯರು ಹಾಗೂ ವಾಣಿಜ್ಯೋದ್ಯಮಿ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದರು. ಮೃತರ ಅಂತ್ಯಸಂಸ್ಕಾರವನ್ನು ಮೈಸೂರಿನ ಚಿತಾಗಾರದಲ್ಲಿ ನಡೆಸಲಾಯಿತು.



ಸರ್ಕಾರಿ ಗಿರಿಜನ ಆಶ್ರಮ ಶಾಲೆಗೆ ಹುಳು ತುಂಬಿದ ಆಹಾರ ಧಾನ್ಯ ವಿತರಣೆ

ಕಳಪೆ ಆಹಾರದಿಂದ ಶಾಲೆಗೆ ಬರಲು ಹಿಂದೇಟು ಹಾಕುತ್ತಿರುವ ಮಕ್ಕಳು



ಗೋಡೆಗಳು, ಆಹಾರ ಪದಾರ್ಥಗಳಲ್ಲಿ ಹರಿಯುತ್ತಿರುವ ಹುಳುಗಳ ರಾಶಿ



ಸಿದ್ದಾಪುರ, ಅ.8(ಮುಬಾರಕ್)– ಕಾಡಂಚಿನಲ್ಲಿ ವಾಸವಾಗಿರುವ ಆದಿವಾಸಿ ಕುಟುಂಬಗಳ ಮಕ್ಕಳನ್ನು ಶಿಕ್ಷಣದ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಸರಕಾರ ಮುಂದಾಗಿದ್ದರೂ ಅಧಿಕಾರಿಗಳ ಬೇಜವಾಬ್ದಾರಿಯಿಂದ ಮಕ್ಕಳು ಶಾಲೆಗೆ ತೆರಳದೆ ಮನೆಯಲ್ಲೇ ಉಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಗೆಡ್ಡೆ–ಗೆಣಸು ತಿಂದರೂ ಬದುಕಬಹುದು. ಆದರೆ ಶಾಲೆಯಲ್ಲಿ ಸಿಗುವ ರಾಶಿ ರಾಶಿ ಹುಳಗಳಿಂದ ಕೂಡಿರುವ ಆಹಾರ ಪದಾರ್ಥಗಳಿಂದ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಳ್ಳುತ್ತದೆ ಎಂಬ ಭಯದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಆಶ್ರಮ ಶಾಲೆಗೆ ಕಳಿಸಲು ಹಿಂದೇಟು ಹಾಕುತ್ತಿದ್ದಾರೆ.

ವಿರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಿಡಳ್ಳಿ ಬಸವನಹಳ್ಳಿ ಆಶ್ರಮ ಶಾಲೆ ಇದ್ದು ಸುತ್ತಮುತ್ತಲ ಆದಿವಾಸಿಗಳ ಮಕ್ಕಳೇ ಹೆಚ್ಚಾಗಿ ಆಶ್ರಮ ಶಾಲೆಯಲ್ಲಿ ಶಿಕ್ಷಣ ಕಲಿಯುತ್ತಿದ್ದಾರೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಆಹಾರ ಇಲಾಖೆ ಮೂಲಕ ಹುಳುಗಳೇ ತುಂಬಿರುವ ಅಕ್ಕಿ ಹಾಗೂ ಗೋಧಿ ಹಾಗೂ ಇತರೆ ಅಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಜಾಣಕುರುಡರಂತೆ ವರ್ತಿಸುತ್ತಿರುವುದೇ ಇದಕ್ಕೆ ಕಾರಣವಾಗಿದೆ.

ಕೆಲ ದಿನಗಳಿಂದ ಶಾಲೆಗೆ ತೆರಳಲೂ ಹಿಂದೇಟಾಕುತ್ತಿದ್ದ ವಿದ್ಯಾರ್ಥಿಗಳನ್ನು ವಿಚಾರಿಸಿದ ಸಂದರ್ಭದಲ್ಲಿ ಈ ಅಂಶ ಬೆಳಕಿಗೆ ಬಂದಿದ್ದು, ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ಆದಿವಾಸಿ ಮುಖಂಡ ಜೆ.ಕೆ.ಅಪ್ಪಾಜಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಧಾನ್ಯ ಸಂಗ್ರಹ ಕೊಠಡಿಯಲ್ಲಿ ಹುಳಗಳ ಸಾಮ್ರಾಜ್ಯ ಕಂಡು ಬಂದಿತು. ಗೋಡೆಗಳ ಮೇಲು ರಾಶಿ ರಾಶಿ ಹುಳಗಳು ಹರಿಯುತ್ತಿದ್ದುದು ಕಂಡು ಬಂದಿತು. ಶಿಕ್ಷಕರಲ್ಲಿ ಮಾಹಿತಿ ಬಯಸಿದಾಗ ಗುತ್ತಿಗೆದಾರರು ನಾಲ್ಕು ಅಥವಾ ಆರು ತಿಂಗಳಿಗೊಮ್ಮೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡಿ ಹೋಗುತ್ತಿದ್ದಾರೆ. ಈ ಬಗ್ಗೆ ಇಲಾಖೆಗೆ ಮಾಹಿತಿ ನೀಡಲಾಗಿದೆ ಎಂದು ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

ಜೆ.ಕೆ ಅಪ್ಪಾಜಿ ಮಾತನಾಡಿ, ಆದಿವಾಸಿ ಮಕ್ಕಳಿಗೆ ಗುತ್ತಿಗೆದಾರರು ಗುಣಮಟ್ಟದ ಆಹಾರ ವಿತರಿಸದೆ ಹುಳಗಳಿಂದ ಕೂಡಿರುವ ಕಳಪೆ ಆಹಾರವನ್ನು ನೀಡುತ್ತಿರುವುದರಿಂದ ಮಕ್ಕಳ ಆರೋಗ್ಯದಲ್ಲಿ ಏರುಪೇರು ಕಂಡು ಬರುತ್ತಿದೆ. ಇದರಿಂದ ಮಕ್ಕಳು ಶಾಲೆಗೆ ಬರಲು ಭಯಪಡುತ್ತಿದ್ದಾರೆ ಎಂದರು.

ಕೂಡಲೇ ಅಧಿಕಾರಿಗಳು ಕಳಪೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವ ಗುತ್ತಿಗೆದಾರನ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಿಸದಿದ್ದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ವಿಷಯ ತಿಳಿದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯ ಅಧಿಕಾರಿ ಹೊನ್ನೇಗೌಡ ಹಾಗೂ ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನವೀನ್ ಶಾಲೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭ ಪೂರೈಕೆಯಾದ ಆಹಾರ ಧಾನ್ಯಗಳಲ್ಲಿ ಹುಳುಗಳು ಕಂಡು ಬಂದಿದ್ದು ತಕ್ಷಣ ಆಹಾರ ಪದಾರ್ಥಗಳನ್ನು ಹಿಂತಿರುಗಿಸಿ ಗುಣಮಟ್ಟದ ಆಹಾರ ಧಾನ್ಯಗಳನ್ನು ವಿತರಣೆ ಮಾಡಬೇಕೆಂದು ಗುತ್ತಿಗೆದಾರರಿಗೆ ಸೂಚಿಸಿದರು.

ಮಾಲ್ದಾರೆ ಗ್ರಾಪಂ ಮಾಜಿ ಸದಸ್ಯೆ ಹಾಗೂ ಆದಿವಾಸಿ ಮುಖಂಡರಾದ ಇಂದಿರಾ ಮಾತನಾಡಿ, ಆದಿವಾಸಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆಶ್ರಮ ಶಾಲೆ ತೆರೆಯಲಾಗಿದೆ. ಶಾಲೆಯಲ್ಲಿ ಕಲಿಕೆಯಲ್ಲಿರುವ ಮಕ್ಕಳಿಗೆ ಗುಣಮಟ್ಟದ ಆಹಾರ ವಿತರಿಸದೆ ಹುಳಗಳಿಂದ ಕೂಡಿರುವ ಆಹಾರಗಳನ್ನು ನೀಡುತ್ತಿರುವುದು ಸರಿಯಾದ ಕ್ರಮವಲ್ಲ. ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಆರೋಗ್ಯ ಇಲಾಖೆಯವರು ತಿಂಗಳಿಗೊಮ್ಮೆ ಶಾಲೆಗೆ ಭೇಟಿ ನೀಡಿ ಆಹಾರ ಪದಾರ್ಥಗಳನ್ನು ಪರಿಶೀಲನೆ ಮಾಡಬೇಕೆಂದು ಒತ್ತಾಯಿಸಿದರು.

ಶಾಲಾ ಬಸ್ಸಿಗೆ ಕಿಡಿಗೇಡಿಗಳಿಂದ ಬೆಂಕಿ



ಮಡಿಕೇರಿ,ಅ.8– ಖಾಸಗಿ ಶಾಲೆಯ ಆವರಣದಲ್ಲಿ ನಿಲ್ಲಿಸಲಾಗಿದ್ದ ಮಕ್ಕಳನ್ನು ಕರೆದೊಯ್ಯುವ ಶಾಲಾ ಬಸ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಘಟನೆ ಗೋಣಿಕೊಪ್ಪದಲ್ಲಿ ನಡೆದಿದೆ. ಗೋಣಿಕೊಪ್ಪವಿನ ಅತ್ತೂರಿನ ನ್ಯಾಷನಲ್ ಅಕಾಡೆಮಿ ಶಾಲೆಯ ಬಸ್ ಬೆಂಕಿಗೆ ಆಹುತಿಯಾಗಿದ್ದು, ಅ.7ರ ತಡರಾತ್ರಿ ದುಷ್ಕರ್ಮಿಗಳು ಬಸ್‌ಗೆ ಬೆಂಕಿ ಹಚ್ಚಿರುವ ಅನುಮಾನ ವ್ಯಕ್ತವಾಗಿದೆ. ಪರಿಣಾಮ ಬಸ್ ಬಹುತೇಕ ಸುಟ್ಟು ಹೋಗಿದ್ದು, ತೀವ್ರ ಹಾನಿಯಾಗಿದೆ.

ಭಾನುವಾರ ಬೆಳಗಿನ ಜಾವ ಈ ಘಟನೆ ಬೆಳಕಿಗೆ ಬಂದಿದ್ದು, ಶಾಲಾ ಆಡಳಿತ ಮಂಡಳಿ ಪೊಲೀಸರಿಗೆ ದೂರು ನೀಡಿದೆ. ಘಟನಾ ಸ್ಥಳಕ್ಕೆ ಗೋಣಿಕೊಪ್ಪ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಶಾಲೆಯ ಮುಖ್ಯಸ್ಥರಿಂದ ಮಾಹಿತಿ ಪಡೆದ ವಿರಾಜಪೇಟೆ ಕ್ಷೇತ್ರ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್ ಪೊನ್ನಣ್ಣ, ಕಿಡಿಗೇಡಿಗಳ ವಿರುದ್ಧ ಕೂಡಲೇ ಕ್ರಮಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಶಾಲಾ ಬಸ್‌ಗೆ ಬೆಂಕಿ ಹಚ್ಚಿರುವ ಈ ಘಟನೆ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಗೋಣಿಕೊಪ್ಪ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದು, ಆರೋಪಿಗಳ ಪತ್ತೆಗಾಗಿ ಕ್ರಮ ಕೈಗೊಂಡಿದ್ದಾರೆ.

ಕೊಡಗಲ್ಲಿ ಧಾರಾಕಾರ ಮಳೆ

ಮಡಿಕೇರಿ,ಅ.8– ಮಡಿಕೇರಿ ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಾನುವಾರ ಮಧ್ಯಾಹ್ನ ವೇಳೆ ಕೆಲ ಕಾಲ ಧಾರಾಕಾರ ಮಳೆಯಾಗಿದೆ. ಭಾರಿ ಗುಡುಗು ಸಹಿತ ಮಡಿಕೇರಿ, ಮಕ್ಕಂದೂರು, ಗಾಳಿಬೀಡು, ಕಾಲೂರು, ವಣಚಲು, ಮುಕ್ಕೋಡ್ಲು, ಮೇಕೇರಿ, ಕಗ್ಗೋಡ್ಲು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮಳೆಯಾದ ಬಗ್ಗೆ ವರದಿಯಾಗಿದೆ. ಕಳೆದ 2 ದಿನಗಳಿಂದ ಈ ಗ್ರಾಮಗಳ ವ್ಯಾಪ್ತಿಯಲ್ಲಿ ಮೋಡ ಕವಿದ ವಾತಾವರಣ ಕಂಡು ಬಂದಿತ್ತಾದರೂ, ನಿರೀಕ್ಷಿತ ಮಳೆಯಾಗಿರಲಿಲ್ಲ. ಜಿಲ್ಲೆಯಲ್ಲಿ ಈ ಬಾರಿ ಮಾನ್ಸೂನ್ ಕೈಕೊಟ್ಟ ಹಿನ್ನೆಲೆಯಲ್ಲಿ ಮಳೆಯನ್ನೇ ನಂಬಿ ಭತ್ತದ ಕೃಷಿ ನಡೆಸಿದವರಿಗೆ ನಿರಾಸೆ ಮೂಡಿದೆ. ಕೆಲವು ಕಡೆಗಳಲ್ಲಿ ಭತ್ತದ ಗದ್ದೆಗಳು ಒಣಗುತ್ತಿದ್ದು, ಬೆಳೆ ಉಳಿಸಿಕೊಳ್ಳಬೇಕಾಗಿರುವ ಕಾರಣ ರೈತ ವರ್ಗ ಆತಂಕದಲ್ಲಿದೆ. ಭಾರತೀಯ ಹವಾಮಾನ ಇಲಾಖೆ ಜಿಲ್ಲೆಯ ವಿವಿಧೆಡೆ ಅ.14ರವರೆಗೆ ಚದುರಿದಂತೆ ಹಗುರದಿಂದ ಧಾರಾಕಾರ ಮಳೆ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದೆ.

ಅ.12, ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆ

ಚಾಮರಾಜನಗರ, ಅ.8– ಜಿಲ್ಲಾಡಳಿತದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಚರ್ಚಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಅ.12ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಸಿದ್ಧತಾ ಸಭೆಯನ್ನು ಏರ್ಪಡಿಸಲಾಗಿದೆ.

ಸಭೆಗೆ ಪರಿಶಿಷ್ಟ ವರ್ಗದ, ಇತರೆ ಜನಾಂಗದ ಮುಖಂಡರು, ಎಲ್ಲಾ ಸಂಘಸಂಸ್ಥೆಗಳ ಪದಾಧಿಕಾರಿಗಳು, ಮುಖ್ಯಸ್ಥರು, ಜನಪ್ರತಿನಿಧಿಗಳು, ಸಾರ್ವಜನಿಕರು ಭಾಗವಹಿಸಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಸಲಹೆ, ಸೂಚನೆ ನೀಡುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಾದ ಮಂಜುಳ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾದಪ್ಪನ ಬೆಟ್ಟದಲ್ಲಿ ಮದ್ಯ ಮಾರಾಟ ನಿಷೇಧ

ಅಧಿಕಾರಿಗಳಿಗೆ ಹನೂರು ಶಾಸಕ ಎಂ.ಆರ್. ಮಂಜುನಾಥ್ ಸೂಚನೆ



ಹನೂರು, ಅ.8– ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಸ್ವಾಮಿ ಬೆಟ್ಟದಲ್ಲಿ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಗೊಳಿಸಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹನೂರು ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಸೂಚಿಸಿದ್ದಾರೆ.

ತಾಲೂಕಿನ ಮಹದೇಶ್ವರಸ್ವಾಮಿ ಬೆಟ್ಟದಲ್ಲಿರುವ ಶ್ರೀಮಲೆ ಮಹದೇಶ್ವರಸ್ವಾಮಿ ಅಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಶಾಸಕರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಬೆಟ್ಟದಲ್ಲಿ ಮದ್ಯ, ಗಾಂಜಾ ಮಾರಾಟ ನಡೆಯುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು, ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಬೇಕು. ಅಲ್ಲದೇ ತಾಳು ಬೆಟ್ಟದಲ್ಲಿ ಮದ್ಯ ಕಳ್ಳ ಸಾಗಣೆ ನಡೆಯುತ್ತಿದೆ ಎಂಬ ದೂರು ಸಹ ಬಂದಿದ್ದು, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಖಾಸಗಿ ವಸತಿ ಗೃಹಗಳಲ್ಲಿ ಯಾವುದೇ ರೀತಿಯ ಅಕ್ರಮಗಳು ನಡೆಯದಂತೆ ಮುಂಜಾಗ್ರತೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಹನೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅರಣ್ಯ ಪ್ರದೇಶದಲ್ಲಿ ಸಫಾರಿ ಪ್ರಾರಂಭಿಸಲು ಹಾಗೂ ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಸಂಪೂರ್ಣ ನಿಷೇಧಕ್ಕೆ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಬೆಟ್ಟದ ಸುತ್ತಮುತ್ತ ಶಾಲೆ ಮತ್ತು ಅಂಗನವಾಡಿಗಳಿಗೆ ಅಧಿಕಾರಿಗಳ ತಂಡ ರಚನೆ ಮಾಡಿ, ಆಗಾಗ ಭೇಟಿ ನೀಡುವ ಮೂಲಕ ಅಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಲಭ್ಯವಾಗುತ್ತಿವೆ ಅಥವಾ ಇಲ್ಲವೇ ಎಂಬುದನ್ನು ಗಮನಿಸಬೇಕು ಎಂದು ತಿಳಿಸಿದರು.

ಮಹದೇಶ್ವರ ಬೆಟ್ಟ ರಾಜ್ಯದಲ್ಲಿ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದರೂ ಕೂಡ, ಈ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದ ಜನರಿದ್ದಾರೆ. ಅವರನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡಬೇಕು ಎಂದ ಅವರು, ದೇವಸ್ಥಾನ ಬಳಿ ಹೆಚ್ಚು ಸ್ಥಳಾವಕಾಶ ಕಲ್ಪಿಸಬೇಕು. ಬೆಟ್ಟದ ಸುತ್ತಮುತ್ತವಿರುವ ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತವಾದ ಸ್ಥಳ ಕಲ್ಪಿಸಬೇಕು ಹಾಗೂ ಹಂದಿಗಳ ಹಾವಳಿಗೆ ಕಡಿವಾಣ ಹಾಕಿ ಬೆಟ್ಟದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು. ಕಾಡುಪ್ರಾಣಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕು. ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಅಳವಡಿಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದ ಅವರು, ಸಭೆಗೆ ಆಗಮಿಸಿದ್ದ ಅಧಿಕಾರಿಗಳನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ಆಗಿರುವ ಹಾಗೂ ಆಗಬೇಕಾಗಿರುವ ಕೆಲಸಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ಸಭೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಉಪ ಕಾರ್ಯದರ್ಶಿ ಚಂದ್ರಶೇಖರ್, ಬೆಟ್ಟದ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನಂಜುಂಡಸ್ವಾಮಿ, ಇಓ ಉಮೇಶ್, ಜಿಲ್ಲಾ ಪಂಚಾಯತ್ ಇಂಜಿನಿಯರ್ ಮಂಜು, ಗ್ರಾಮ ಪಂಚಾಯಿತಿ ಅಧಿಕಾರಿ ಕಿರಣ್ ಉಪಸ್ಥಿತರಿದ್ದರು.

ಕಪ್ಪು ಬಾವುಟ ಹಿಡಿದು ಪ್ರತಿಭಟನೆ



ಚಾಮರಾಜನಗರ, ಅ.8– ರಾಜ್ಯ ಸರ್ಕಾರವು ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ನಗರದಲ್ಲಿ ಕಪ್ಪು ಬಾವುಟ ಹಿಡಿದು ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾ ನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಸ್ತೆತಡೆ ನಡೆಸಿ ಕಪ್ಪು ಬಾವುಟ ಹಿಡಿದು ಕೇಂದ್ರ, ರಾಜ್ಯ ಹಾಗೂ ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ನೀರು ಹಂಚಿಕೆಯಲ್ಲಿ ಕಾವೇರಿ ನೀರು ನಿರ್ವಹಣಾ ಮಂಡಳಿ, ಕೇಂದ್ರ ಸರ್ಕಾರ, ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ಆರೋಪಿಸಿ, ಕಪ್ಪು ಬಾವುಟ ಹಿಡಿದು ಪ್ರತಿಭಟನೆ ಮಾಡಲಾಗಿದೆ. ರಾಜ್ಯ ಸರ್ಕಾರ ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಶಾ. ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ಸೋಮವಾರಪೇಟೆ ಮಂಜು, ವರದನಾಯಕ, ವೀರಭದ್ರ, ರವಿಚಂದ್ರ ಪ್ರಸಾದ್ ಕಹಳೆ, ಚಾ.ಹ. ರಾಮು, ಲಿಂಗರಾಜು, ಗು. ಪುರುಷೋತ್ತಮ್, ತಾಂಡವಮೂರ್ತಿ ಇದ್ದರು.

ಕೆ.ಗುಡಿಯಲ್ಲಿ 69ನೇ ವನ್ಯಜೀವಿ ಸಪ್ತಾಹ ಸಮಾರೋಪ



ಚಾಮರಾಜನಗರ, ಅ.8– ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವಲಯ ವ್ಯಾಪ್ತಿಯಿಂದ ಹಮ್ಮಿಕೊಂಡಿದ್ದ 69ನೇ ವನ್ಯಜೀವಿ ಸಪ್ತಾಹ ದಿನದ ಸಮಾರೋಪ ಸಮಾರಂಭ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಕೆ.ಗುಡಿಯಲ್ಲಿ ಇಂದು ಅರ್ಥಪೂರ್ಣವಾಗಿ ನಡೆಯಿತು.

ಆರೋಗ್ಯ ತಪಾಸಣೆ, ರಕ್ತದಾನದಂತಹ ವಿಭಿನ್ನ ಕಾರ್ಯಕ್ರಮಗಳ ಮೂಲಕ 69ನೇ ವನ್ಯಜೀವಿ ಸಪ್ತಾಹ ದಿನದ ಸಮಾರೋಪ ಸಮಾರಂಭವನ್ನು ತುಂಬಾ ಅಚ್ಚುಕಟ್ಟಾಗಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರಾದ ಮಲ್ಲೇಶಪ್ಪ ಅವರು ಮಾತನಾಡಿ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜನರಿಗೆ ವನ್ಯಜೀವಿಗಳ ಮಹತ್ವವನ್ನು ತಿಳಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಈ ವರ್ಷದ ವನ್ಯಜೀವಿ ಸಪ್ತಾಹ ದಿನವನ್ನು ಆಚರಿಸಿದೆ. ಈ ರೀತಿಯ ಕಾರ್ಯಕ್ರಮಗಳಿಂದ ಸಾರ್ವಜನಿಕರಿಗೆ ಅರಣ್ಯ ಜೀವಸಂಕುಲಗಳ ಬಗ್ಗೆ ಅರಿವು ಹೆಚ್ಚಾಗುತ್ತದೆ. ಗಿರಿಜನ ಬಂಧುಗಳು ಹಾಗೂ ಕಾಡಂಚಿನ ಭಾಗದ ಜನರಿಗೆ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಿದಾಗ ಮಾತ್ರ ಕಾಡಿನ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಬಿ.ಆರ್.ಟಿ ಹುಲಿ ಸಂರಕ್ಷಿತಾ ವಲಯ ಅರಣ್ಯಾಧಿಕಾರಿಯಾದ ದೀಪಾ ಜೆ ಕಂಟ್ರಾಕ್ಟರ್ ಮಾತನಾಡಿ, ಚಾಮರಾಜನಗರ ಜಿಲ್ಲೆಯು ಹುಲಿ, ಆನೆ ಗಣತಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಇದು ಕೇವಲ ಯಾವುದೇ ಒಬ್ಬರಿಂದ ಸಾಧ್ಯವಾಗದು. ಇದು ಸ್ಥಳೀಯ ಹಾಗೂ ಸಿಬ್ಬಂದಿಗಳ ಕಾರ್ಯ ವೈಖರಿಯಿಂದ ಸಾಧ್ಯವಾಗಿದೆ. ರೈತರು, ಗಿರಿಜನರು ಹಾಗೂ ಮಾಧ್ಯಮಮಿತ್ರರ ಸಂಪೂರ್ಣ ಬೆಂಬಲದಿಂದ ಉತ್ತಮ ಕಾರ್ಯಕ್ರಮಗಳ ನಡೆಸಲು ಸಾಧ್ಯವಾಗುತ್ತದೆ. 69ನೇ ವನ್ಯಜೀವಿ ಸಪ್ತಾಹ ದಿನವು ಸುಮಾರು 7 ದಿನಗಳಿಂದ ಜನರಿಗೆ ಅರಣ್ಯ ಹಾಗೂ ಜೀವ ವೈವಿಧ್ಯತೆ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ನೀಡಿ ಯಶಸ್ಸು ಕಂಡಿದೆ ಎಂದರು.

ಬಸವರಾಜೇಂದ್ರ ಆಸ್ಪತ್ರೆಯ ವೈದ್ಯಾಧಿಕಾರಿಯಾದ ಶ್ವೇತಾ ಅವರು ಮಾತನಾಡಿ, ಪ್ರಕೃತಿಯನ್ನ ಎಲ್ಲರೂ ಗೌರವಿಸಬೇಕು. ಪ್ರಕೃತಿ ಜೊತೆಗೆ ಬೆಳೆಯುವಂತಾಗಬೇಕು. ಯಾರಿಗೂ ತೊಂದರೆ ನೀಡದಂತೆ ಬದುಕಬೇಕು. ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿರುವುದು ತುಂಬಾ ಒಳ್ಳೆಯ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಸ್ಪಂದಿಸಿದ ಸರ್ವರಿಗೂ ಒಳ್ಳೆಯದಾಗಲಿ ಎಂದು ನುಡಿದರು.

69ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಏರ್ಪಡಿಸಲಾಗಿದ್ದ ಚಿತ್ರಕಲೆ, ಮ್ಯಾರಥಾನ್, ಆನ್‌ಲೈನ್ ಕ್ವಿಜ್, ಫೋಟೋಗ್ರಫಿ ವಿಜೇತರಿಗೆ ಬಹುಮಾನ ಪ್ರಮಾಣ ಪತ್ರ ಮತ್ತು ಸ್ಮರಣಿಕೆ ನೀಡಲಾಯಿತು. ನಂತರ ಗೊರುಕನ ನೃತ್ಯದ ಮೂಲಕ ಸ್ಥಳೀಯರು ಎಲ್ಲರ ಗಮನ ಸೆಳೆದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಹಾಗೂ ವಲಯ ಅರಣ್ಯ ಅಧಿಕಾರಿಗಳು, ಸಿಬ್ಬಂದಿ ಇತರರು ಭಾಗವಹಿಸಿದ್ದರು.



ಉಪ್ಪಾರ ಸಮುದಾಯ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದರೆ ಮಾತ್ರ ಅಭಿವೃದ್ಧಿ ಸಾಧ್ಯ

ಉಪ್ಪಾರ ಸಮಾಜದ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ



ಚಾಮರಾಜನಗರ, ಅ.8– ಉಪ್ಪಾರ ಸಮುದಾಯ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣ ಜಿಲ್ಲಾ ಉಪ್ಪಾರ ಸಂಘ, ಜಿಲ್ಲಾ ವ್ಯಾಪ್ತಿಯ ಎಲ್ಲಾ ಗಡಿಮನೆ, ಕಟ್ಟೆಮನೆ ಹಾಗೂ ಎಲ್ಲಾ ಗ್ರಾಮಗಳ ಯಜಮಾನರುಗಳ ಹಾಗೂ ಕುಲಸ್ಥರು, ಎಲ್ಲಾ ತಾಲೂಕು ಉಪ್ಪಾರ ಸಂಘಗಳು, ಜಿಲ್ಲೆಯ ಎಲ್ಲಾ ಉಪ್ಪಾರ ನೌಕರರ ಸಂಘಗಳ, ಜಿಲ್ಲಾ ವ್ಯಾಪ್ತಿಯ ಎಲ್ಲಾ ಉಪ್ಪಾರ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 2022–23 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಳೆದ 20 ವರ್ಷಗಳಿಗೆ ಹೋಲಿಸಿದರೆ ಸಮುದಾಯದಲ್ಲಿ ಶೈಕ್ಷಣಿಕ ಕ್ರಾಂತಿ ನಡೆಯುತ್ತಿದೆ. ಪ್ರತಿ ವರ್ಷವೂ ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ನಡೆಯುತ್ತಿರುವ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಮಾಜದ ಮಕ್ಕಳು ಹೆಚ್ಚು ಹೆಚ್ಚು ಅಂಕ ಪಡೆದ ಪ್ರತಿಭಾ ಪುರಸ್ಕಾರ ಪಡೆದುಕೊಳ್ಳುತ್ತಿದ್ದಾರೆ. ಈ ಪ್ರಮಾಣ ಹೆಚ್ಚಾಗಬೇಕು. ಶಿಕ್ಷಣಕ್ಕೆ ಒತ್ತು ಕೊಡುವ ಮೂಲಕ ಆಡಳಿತ ವರ್ಗದಲ್ಲಿ ಕೂರುವಂತಾಗಬೇಕು. ಆ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಕುಲಶಾಸ್ತ್ರ ಅಧ್ಯಯನ ನಡೆಯುತ್ತಿದ್ದು, ಕೆಲವು ದಿನಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗುತ್ತದೆ. ಸಮಾಜದಲ್ಲಿ ಬಾಲ್ಯ ವಿವಾಹಕ್ಕೆ ಕಡಿವಾಣ ಬಿದ್ದಿದೆ. ಈ ಕಾರಣದಿಂದ ಸಮಾಜದ ಹೆಣ್ಣು ಮಕ್ಕಳು ಹೆಚ್ಚುಹೆಚ್ಚು ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ವಸತಿ ಶಾಲೆಗಳ ಅಗತ್ಯ ಇದೆ. ಅದನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು. ಹಾಲಿಯಿರುವ ಹಿಂದುಳಿದ ವರ್ಗಗಳ ವಸತಿ ಶಾಲೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು

ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಓದಿದ್ದರೆ ಉದ್ಯೋಗಗಳು ಮನೆ ಬಾಗಿಲು ತಟ್ಟುವ ಕಾಲವೊಂದಿತ್ತು. ಇಂದು ಎಂಜಿನಿಯರ್, ವೈದ್ಯಕೀಯ ಕ್ಷೇತ್ರದಲ್ಲಿ ವಿಪುಲ ಅವಕಾಶ ಇದೆ. ಉಪ್ಪಾರ ಸಮುದಾಯಕ್ಕೆ ವಿದ್ಯೆಯೊಂದೇ ಶಕ್ತಿಯಾಗಿದೆ. ಆಗಾಗಿ ಸಮುದಾಯದವರು ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಸಂಘಟಿತರಾಗಿ ಎಲ್ಲ ಕ್ಷೇತ್ರಗಳಲ್ಲೂ ಮುಂದೆ ಬರಬೇಕಿದೆ ಎಂದರು.

ಜಿ.ಪಂ.ಮಾಜಿ ಸದಸ್ಯ ಯೋಗೇಶ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಬೂದಿತಿಟ್ಟು ಲಿಂಗರಾಜು ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು ಪ್ರಾಸ್ತಾವಿಕ ನುಡಿಗಳನ್ನಾಡಿದರು.

240 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ 240 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಗ್ರಾಮಾಂತರ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಚಿಕ್ಕರಾಜಶೆಟ್ಟಿ, ಚಾಮರಾಜನಗರ ತಾಲೂಕು ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಸೋಮಣ್ಣ, ರೇಚಣ್ಣ, ಲೋಕೇಶ್, ಮಲ್ಲು, ಮಹೇಶ್, ನಗರಸಭಾ ಸದಸ್ಯ ಬಸವಣ್ಣ, ಮಂಗಲ ಗಡಿ ಯಜಮಾನರಾದ ಕೃಷ್ಣಶೆಟ್ಟಿ, ಜಯಸ್ವಾಮಿ, ಚಿಕ್ಕತಾಂಡಶೆಟ್ಟಿ, ಮರಿಸ್ವಾಮಿ, ರಂಗಸ್ವಾಮಿ, ಮಹೇಶ್, ಮುಖಂಡ ಕೃಷ್ಣಸ್ವಾಮಿ, ಪ್ರಾಂಶುಪಾಲ ಪ್ರಿಯಶಂಕರ್, ಮುಳ್ಳೂರು ಸಿದ್ದಶೆಟ್ಟಿ, ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ನಂಜುಂಡಸ್ವಾಮಿ, ಡಿ.ಪಿ.ಗೋವಿಂದ, ಮಹೇಶ್, ರಮೇಶ್, ನಾಗರಾಜು ಉಪ್ಪಾರ್, ಸೋಮಣ್ಣ ಉಪ್ಪಾರ್, ರೇಚಣ್ಣ, ಪ್ರಾಂಶುಪಾಲ ಚನ್ನಶೆಟ್ಟಿ, ರವಿ, ಮಲೆಯೂರು ಮಹೇಂದ್ರ, ಕೆಇಬಿ ಲೆಕ್ಕಾಧಿಕಾರಿ ಮಹೇಶ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್, ಕಂದಹಳ್ಳಿ ಬಸವಣ್ಣ, ಪಿ.ಗೋವಿಂದರಾಜು, ಮಹದೇವಸ್ವಾಮಿ ಇತರರು ಹಾಜರಿದ್ದರು.

ಬುಡಕಟ್ಟು ಮಕ್ಕಳಿಗೆ ಸಮವಸ್ತ್ರ ವಿತರಿಸುವ ಮೂಲಕ ವಿಶೇಷ ಮಾರಾಟಕ್ಕೆ ಚಾಲನೆ



ಮೈಸೂರು, ಅ. 8– ಮ್ಯಾಕ್ಸ್ ಫ್ಯಾಷನ್ ಸಂಸ್ಥೆಯು ಬುಡಕಟ್ಟು ಸಮುದಾಯದ ಮಕ್ಕಳಿಗೆ ಸಮವಸ್ತ್ರ ವಿತರಿಸುವ ಮೂಲಕ ದಸರಾ-ದೀಪಾವಳಿ ಹಬ್ಬದ ವಿಶೇಷ ಮಾರಾಟಕ್ಕೆ ಚಾಲನೆ ನೀಡಿತು.

ಎಚ್.ಡಿ. ಕೋಟೆ ತಾಲೂಕಿನ ನಾಗರಹೊಳೆ ಅಭಯಾರಣ್ಯದ ಹಾಡಿಯ 10 ಮಕ್ಕಳಿಗೆ ಚಲನಚಿತ್ರ ನಟಿ ನಿಶ್ವಿಕಾ ನಾಯ್ಡು ಬಟ್ಟೆಗಳನ್ನು ವಿತರಿಸಿದರು. ಮ್ಯಾಕ್ಸ್ ಫ್ಯಾಷನ್ ಲುಕ್‌ಬುಕ್ ಅನಾವರಣ ಮಾಡಿ ಮಾತನಾಡಿದ ನಟಿ ನಿಶ್ವಿಕಾ ನಾಯ್ಡು, ಮ್ಯಾಕ್ಸ್ ಫ್ಯಾಷನ್ ಶೋರೂಂನಲ್ಲಿ ಅದ್ಭುತವಾದ ಡಿಸೈನ್‌ಗಳಿವೆ. ಎಲ್ಲರ ಬಜೆಟ್‌ಗೆ ಅನುಕೂಲವಾಗುವಂತೆ ಉತ್ತಮ ಶ್ರೇಣಿಯ ಬಟ್ಟೆಗಳು ಲಭ್ಯವಿದೆ. ಒಂದೇ ಶೋರೂಂನಲ್ಲಿ ಕುಟುಂಬದ ಎಲ್ಲರಿಗೂ ಬಟ್ಟೆಗಳನ್ನು ಖರೀದಿಸಬಹುದು. ಮ್ಯಾಕ್ಸ್ ಫ್ಯಾಷನ್ ಸಂಸ್ಥೆಯ ಉಪಾಧ್ಯಕ್ಷ ಪ್ರಶಾಂತ್ ಪಾಲ್, ಆಪರೇಷನ್ ಮುಖ್ಯಸ್ಥ ಸತ್ಯ ನಂದಾ ಇದ್ದರು.

ಒಂದನೇ ಪುಟದಿಂದ

ಭಾರತಕ್ಕೆ ಭರ್ಜರಿ ಜಯ

ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಭಾರತೀಯ ಸ್ಪಿನ್ನರ್‌ಗಳ ಸ್ಪಿನ್ ದಾಳಿಗೆ ತತ್ತರಿಸಿ 49.3 ಓವರ್‌ಗಳಲ್ಲಿ 199 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಿಚೆಲ್ ಮಾರ್ಷ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಡೇವಿಡ್ ವಾರ್ನರ್ ಹಾಗೂ ಸ್ಟೀವ್ ಸ್ಮಿತ್ 69 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 41 ರನ್ ಗಳಿಸಿದ್ದ ವಾರ್ನರ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಉತ್ತಮವಾಗಿ ಆಡುತ್ತಿದ್ದ ಸ್ಟೀವ್ ಸ್ಮಿತ್ ಕೂಡ 46 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಮಾರ್ನಸ್ ಲಾಬುಶೇನ್ 27, ಮ್ಯಾಕ್ಸ್‌ವೆಲ್ 15, ಪ್ಯಾಟ್ ಕಮ್ಮಿನ್ಸ್ 15, ಮಿಚೆಲ್ ಸ್ಟಾರ್ಕ್ 28 ರನ್ ಗಳಿಸಿದಾರದರೂ ದೊಡ್ಡ ಇನ್ನಿಂಗ್ಸ್ ಆಡುವಲ್ಲಿ ವಿಫಲರಾದರು. ಭಾರತದ ಪರ ರವೀಂದ್ರ ಜಡೇಜಾ 3, ಕುಲದೀಪ್ ಯಾದವ್, ಬೂಮ್ರಾ ತಲಾ 2, ರವಿಚಂದ್ರನ್ ಅಶ್ವಿನ್, ಹಾರ್ದಿಕ್ ಪಾಂಡ್ಯ, ಮೊಹಮ್ಮದ್ ಸಿರಾಜ್ ಒಂದೊಂದು ವಿಕೆಟ್ ಪಡೆದರು. ಕೆ.ಎಲ್.ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಗೋದಾಮು ದುರಂತ; ಸಿಐಡಿ ತನಿಖೆಗೆ

ಗೋದಾಮು ನಿಖರವಾಗಿ ಏನಾಯಿತು ಎಂದು ನಮಗೆ ತಿಳಿದಿಲ್ಲ. ಆದರೆ, ಗೋದಾಮಿನಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದು ತಿಳಿದುಬಂದಿದೆ. ಇತ್ತೀಚೆಗೆ ಪರವಾನಗಿಯನ್ನು ನವೀಕರಿಸಲಾಗಿದೆ. ಗೋದಾಮಿನಲ್ಲಿ ಯಾವುದೇ ಅಗ್ನಿಶಾಮಕ ಸಾಧನ ಕಂಡುಬಂದಿಲ್ಲ. ಇದು ಗೋದಾಮು ಮಾಲೀಕರ ಸಂಪೂರ್ಣ ನಿರ್ಲಕ್ಷ್ಯವಾಗಿದೆ. ಹಾಗಾಗಿ ಘಟನೆಯ ತನಿಖೆಯನ್ನು ಸಿಐಡಿಗೆ ನೀಡುತ್ತಿದ್ದೇನೆ ಎಂದು ಹೇಳಿದರು. ಮೃತರ ಪೈಕಿ ಇನ್ನೂ ಕೆಲವು ಶವಗಳ ಗುರುತು ಪತ್ತೆಯಾಗಿಲ್ಲ. ಘಟನೆಯಲ್ಲಿ 14 ಮಂದಿ ಸಾವಿಗೀಡಾಗಿದ್ದಾರೆ ಮತ್ತು ಮೃತರೆಲ್ಲರೂ ತಮಿಳುನಾಡಿನವರು. ಅವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ಅವರು ತಮ್ಮ ಶಿಕ್ಷಣಕ್ಕಾಗಿ ಹಣ ಸಂಪಾದಿಸಲು ಇಲ್ಲಿ ಕೆಲಸ ಮಾಡುತ್ತಿದ್ದರು ಎಂದರು. ಎರಡ್ಮೂರು ದಿನಗಳಲ್ಲಿ ನಾವು ತೆಗೆದುಕೊಳ್ಳಬೇಕಾದ ಕ್ರಮದ ಯೋಜನೆಯನ್ನು ರೂಪಿಸಲಿದ್ದೇವೆ. ನಾವು ಈಗಾಗಲೇ ಸತ್ತವರಿಗೆ 5 ಲಕ್ಷ ಘೋಷಿಸಿದ್ದೇವೆ ಮತ್ತು ಆಸ್ಪತ್ರೆಯ ವೆಚ್ಚವನ್ನು ನೋಡಿಕೊಳ್ಳಲಾಗುವುದು ಎಂದರು.

10ನೇ ಆವೃತ್ತಿ ಆರಂಭ

ಹಾವೊಂದನ್ನು ಇಟ್ಟು ಬಿಗ್ ಬಾಸ್ ಮನೆಗೆ ಕಳುಹಿಸಲಾಯಿತು. 8ನೇ ಸ್ಪರ್ಧಿಯಾಗಿ ಮನೆ ಪ್ರವೇಶಿಸಿದ ಸ್ನೇಕ್ ಶ್ಯಾಂ ಪ್ಲಾಸ್ಟಿಕ್ ಹಾವಿರುವ ಬುಟ್ಟಿಯನ್ನು ನಾಗಿಣಿ ಧಾರಾವಾಹಿ ಖ್ಯಾತಿಯ ನಟಿ ನಮ್ರತಾ ಗೌಡ ಅವರಿಗೆ ನೀಡಿದಾಗ ನಮ್ರತಾಗೌಡ ಬುಟ್ಟಿಯನ್ನು ತೆರೆದಾಗ ಅದರಲ್ಲಿ ಹಾವು ಇದ್ದುದನ್ನು ಕಂಡು ಬೆಚ್ಚಿ ಬಿದ್ದರೂ, ನಂತರ ಅದು ಪ್ಲಾಸ್ಟಿಕ್ ಹಾವೆಂದು ತಿಳಿಸಿದ ಸ್ನೇಕ್ ಶ್ಯಾಂ, ಹಾವನ್ನು ಅವರ ಕೊರಳಿಗೆ ಹಾಕಿದಾಗ ಮನೆಯೊಳಗಿದ್ದ ಸ್ಪರ್ಧಿಗಳು ಎಂಜಾಯ್ ಮಾಡಿದರು.

ಹಾಸ್ಯನಟ ದಿವಂಗತ ಬುಲೆಟ್ ಪ್ರಕಾಶ್ ಪುತ್ರ ರಕ್ಷಕ್ ಅವರು ಬಿಗ್ ಬಾಸ್ ಮನೆ ಪ್ರವೇಶಿಸಿದ್ದಾರೆ. ನನ್ನ ಮೇಲೆ ನೆಗೆಟೀವ್ ಇಮೇಜ್ ಕಟ್ಟಿದವರಿಗೆ ನನ್ನ ನಿಜವಾದ ಫೇಸ್ ಅನ್ನು ಬಿಗ್ ಬಾಸ್ ಮನೆಯಲ್ಲಿ ಖಂಡಿತಾ ತೋರಿಸುತ್ತೇನೆ ಎಂದು ಸುದೀಪ್ ಅವರಿಗೆ ಹೇಳಿದ ರಕ್ಷಕ್, ಬದುಕಿನಲ್ಲಿ ಪಾಸಿಟೀವ್-ನೆಗೆಟೀವ್ ಎರಡೂ ಇರಬೇಕು ಎಂದು ಪ್ರಬುದ್ಧವಾಗಿ ಮಾತನಾಡಿದರು. ಅಲ್ಲದೇ ನನ್ನ ರಿಯಲ್ ಫೇಸ್ ನೋಡುವುದಕ್ಕಾಗಿ ನನಗೆ ಓಟ್ ಮಾಡಿ ಎಂದು ಮನವಿ ಮಾಡಿ ಎಂದರು.

ಟ್ರಾನ್ಸ್‌ಜೆಂಡರ್ ಸಮುದಾಯದಿಂದ ನೀತೂ ವನಜಾಕ್ಷಿ ಅವರು 'ಯಾರಮ್ಮಾ ಇವಳು ಚೆಲುವೆ' ಹಾಡಿನೊಂದಿಗೆ ಬಿಗ್ ಬಾಸ್ ಮನೆ ವೇದಿಕೆ ಮೇಲೆ ಕಾಣಿಸಿಕೊಂಡರು. ಟ್ರಾನ್ಸ್‌ಜೆಂಡರ್ ಬಗ್ಗೆ ಇರುವ ಪೂರ್ವಾಗ್ರಹಗಳನ್ನು ಹೋಗಲಾಡಿಸುವ ಉದ್ದೇಶದಿಂದ ಬಿಗ್ ಬಾಸ್‌ಗೆ ಬಂದಿರುವುದಾಗಿ ಅವರು ಹೇಳಿಕೊಂಡರು.

30 ವರ್ಷಗಳ ಕಾಲ ಕನ್ನಡ ಕಿರು ತೆರೆಯಲ್ಲಿ ಅಭಿನಯಿಸುತ್ತಿರುವ ಸಿರಿ ಅವರು ಬಿಗ್ ಬಾಸ್ ಮನೆ ಪ್ರವೇಶಿಸಿದ್ದಾರೆ. ನಾನು ನಾನಾಗಿರಬೇಕು ಎಂಬ ಆಸೆಯೊಂದಿಗೆ ಬಿಗ್ ಬಾಸ್‌ಗೆ ಬಂದಿರುವುದಾಗಿ ಹೇಳಿದ ಅವರು, ತೆರೆಯ ಮೇಲೆ ಪಾತ್ರವಾಗಿಯಷ್ಟೇ ನನ್ನನ್ನು ನೋಡಿರುವ ಜನರಿಗೆ ನನ್ನ ನಿಜವಾದ ವ್ಯಕ್ತಿತ್ವವನ್ನು ತೋರಿಸಬೇಕು ಎಂಬ ಆಸೆಯಿಂದ ಬಿಗ್ ಬಾಸ್‌ಗೆ ಬಂದಿರುವುದಾಗಿ ಅವರು ಹೇಳಿದರು.

ಪೊಲೀಸ್ ಇಲಾಖೆ ಸಿದ್ಧತೆ

ಸೇರಿದಂತೆ ಇನ್ನಿತರ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಈ ಸಭೆಯಲ್ಲಿ ದಸರಾ ಉದ್ಘಾಟನೆ ಕಾರ್ಯಕ್ರಮಕ್ಕೆ ಭದ್ರತೆ, ಅರಮನೆಯಲ್ಲಿ ನಡೆಯುವ ಕಾರ್ಯಕ್ರಮ, ಜಂಬೂ ಸವಾರಿ ದಿನ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದವರೆಗೆ 5 ಕಿ.ಮಿ ದೂರದ ಮೆರವಣಿಗೆಯ ಯಶಸ್ವಿಗೆ ಕೈಗೊಳ್ಳಬೇಕಾದ ಭದ್ರತೆ, ಪಂಜಿನ ಕವಾಯತ್ ಮೈದಾನದಲ್ಲಿ ಕೈಗೊಳ್ಳಬೇಕಾದ ಭದ್ರತೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಮಾಡಬೇಕಾದ ಭದ್ರತೆ ಕುರಿತು ಚರ್ಚಿಸಲಿದ್ದಾರೆ. ಈ ಹಿಂದಿನ ವರ್ಷಗಳಲ್ಲಿ ದಸರಾ ವೇಳೆ ಮಾಡಿರುವ ಭದ್ರತೆ ಹಾಗೂ ಆಗಿರುವ ಲೋಪಗಳ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ. ಈ ಬಾರಿ ಭದ್ರತೆಯಲ್ಲಿ ಯಾವುದೇ ಲೋಪವುಂಟಾಗದಂತೆ ಕ್ರಮ ಕೈಗೊಳ್ಳುವುದರೊಂದಿಗೆ ಯಾವ ಕಾರ್ಯಕ್ರಮಕ್ಕೆ ಎಷ್ಟು ಮಂದಿ ಪೊಲೀಸರನ್ನು ನಿಯೋಜಿಸಬೇಕೆಂದು ಚರ್ಚೆ ನಡೆಸಿ, ಅವಲೋಕಿಸಲಿದ್ದಾರೆ.

ಹೊರ ಜಿಲ್ಲೆಗಳ ಪೊಲೀಸರ ಆಹ್ವಾನ: ಪ್ರತಿವರ್ಷದಂತೆ ಈ ಬಾರಿಯೂ ದಸರಾ ಮಹೋತ್ಸವದ ಭದ್ರತೆಗೆ ಹೊರ ಜಿಲ್ಲೆಗಳ ಪೊಲೀಸರನ್ನು ನಿಯೋಜಿಸಲಾಗುತ್ತದೆ. ಮೈಸೂರಿನ ಪೊಲೀಸರಿಗೆ ಕೆಲವು ಆಯಕಟ್ಟಿನ ಸ್ಥಳದಲ್ಲಿ ನಿಯೋಜಿಸಿ, ಮತ್ತೆ ಕೆಲವೆಡೆ ಹೊರ ಜಿಲ್ಲೆಗಳ ಪೊಲೀಸರ ಭದ್ರತೆ ಕಲ್ಪಿಸಲು ಯೋಜನೆ ಸಿದ್ದಪಡಿಸಲಾಗಿದೆ.

ಪೂರ್ವಭಾವಿ ಸಭೆ: ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರ ಸಭೆಗೂ ಮುನ್ನ ಭಾನುವಾರ ಪೊಲೀಸ್ ಆಯುಕ್ತ ರಮೇಶ್ ಬಾನೂತ್ ಅವರ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳ ಪೂರ್ವಭಾವಿ ಸಭೆ ನಡೆಯಿತು. ಈ ಸಭೆಯಲ್ಲಿ ಭದ್ರತೆ ಬಗ್ಗೆ ಯೋಜನೆ ರೂಪಿಸಲಾಗಿದ್ದು, ನಾಳೆ ನಡೆಯುವ ಡಿಜಿ-ಐಜಿಪಿ ಸಭೆಯಲ್ಲಿ ನಗರ ಪೊಲೀಸರು ಮಂಡಿಸಲಿದ್ದಾರೆ. ಅದಕ್ಕಾಗಿ ಸಿದ್ದತೆ ಮಾಡಿಕೊಳ್ಳಲಾಗಿದೆ.

ಮೆಗಾ ಡೇರಿಗೆ ಬೆಂಕಿ

ಮುಂಜಾಗ್ರತಾ ಕ್ರಮ ವಹಿಸದ ಮನ್‌ಮುಲ್‌ಗೆ ನೋಟೀಸ್ ಕೊಡಬಹುದು. ಮೇಲಾಧಿಕಾರಿಗಳ ಗಮನಕ್ಕೆ ತಂದು ಏನು ಮಾಡಬೇಕು. ಆಡಳಿತ ಮಂಡಳಿಗೆ ಯಾವ ಸೂಚನೆ ಕೊಡಬೇಕೆಂದು ನಿರ್ಧರಿಸುತ್ತೇವೆ ಎಂದು ಹೇಳಿದರು.

ಇಂತಹ ಬೃಹತ್ ತಯಾರಿಕಾ ಘಟಕ ಸ್ಥಾಪಿಸುವಾಗ ಅಗ್ನಿಶಾಮಕ ದಳದಿಂದ ಎನ್‌ಓಸಿ ಪಡೆಯದೆ ಕಟ್ಟಡ ನಿರ್ಮಾಣ ಮಾಡಬಾರದರು. ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳದೇ ಕಟ್ಟಡ ನಿರ್ಮಾಣ ಮಾಡಿದರೆ ಅವಘಡಗಳು ಸಂಭವಿಸಿದಾಗ ಸಮಸ್ಯೆಯಾಗುತ್ತದೆ. 2016ರ ನಿಯಮದಂತೆ ಯಾವುದೇ ಕಟ್ಟಡ ನಿರ್ಮಾಣಕ್ಕೂ ಮುನ್ನ ಎನ್‌ಓಸಿ ಪಡೆಯೋದು ಕಡ್ಡಾಯ. ಈ ಕಟ್ಟಡಕ್ಕೆ ಇನ್ನೂ ಎನ್‌ಓಸಿ ಪಡೆದಿಲ್ಲ ಎಂದರು.

ಮನ್‌ಮುಲ್ ವ್ಯವಸ್ಥಾಪಕ ಮಂಜೇಶ್ ಮಾತನಾಡಿ, ದುರ್ಘಟನೆಯಲ್ಲಿ ಪ್ಯಾಕಿಂಗ್ ಘಟಕಕ್ಕೆ ಹಾನಿಯಾಗಿದ್ದು, ಸದ್ಯ ಅಲ್ಲಿ ಯಾವುದೇ ಸಿಬ್ಬಂದಿ ವರ್ಗ ಇಲ್ಲದ ಕಾರಣ ಪ್ರಾಣಾಪಾಯ ಸಂಭವಿಸಿಲ್ಲ. ಅಗ್ನಿಶಾಮಕ ಸಿಬ್ಬಂದಿ ಬಹುದೊಡ್ಡ ದುರ್ಘಟನೆ ತಪ್ಪಿಸಿದ್ದು, ಒಂದಷ್ಟು ಪ್ರಮಾಣದ ನಾಶವಾಗಿದೆ. ಶಾರ್ಟ್ ಸರ್ಕ್ಯೂಟ್‌ನಿಂದ ಘಟನೆ ನಡೆದಿರಬಹುದೆಂದು ಶಂಕಿಸಲಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದರು.

ಅಧ್ಯಕ್ಷ, ಎಂಡಿ ಜೊತೆ ವಾಗ್ವಾದ: ಬೆಂಕಿ ಅವಘಡದ ಬಗ್ಗೆ ವರದಿ ಮಾಡಲು ತೆರಳಿದ್ದ ಮಾಧ್ಯಮಗಳಿಗೆ ನಿರ್ಬಂಧ ಹಿನ್ನೆಲೆಯಲ್ಲಿ ಮನ್‌ಮುಲ್ ಅಧ್ಯಕ್ಷ ಬೋರೇಗೌಡ ಹಾಗೂ ಎಂಡಿ ಮಂಜೇಶ್ ಜೊತೆ ಪತ್ರಕರ್ತರ ವಾಗ್ವಾದ ನಡೆಯಿತು. ವಾಗ್ವಾದದ ಬಳಿಕ ಕ್ಷಮೆ ಕೇಳಿದ ಅಧ್ಯಕ್ಷ ಮತ್ತು ಎಂಡಿ, ಕ್ಷಮೆ ಕೇಳಿದ ಬಳಿಕ ಮಾಧ್ಯಮಗಳನ್ನ ಆಡಳಿತ ಮಂಡಳಿ ಸಿಬ್ಬಂದಿ ಒಳಗೆ ಬಿಟ್ಟರು.

ಡಿಸಿ, ಎಸ್ಪಿ ಭೇಟಿ: ಮನ್‌ಮುಲ್‌ನ ಬೆಂಕಿ ಬಿದ್ದ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್ ಸೇರಿದಂತೆ ಹಲವು ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಘಟನೆ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ. ಜೊತೆಗೆ ತನಿಖೆಗೆ ಆದೇಶಿಸಿದ್ದಾರೆ.

ಅರಮನೆಯ ಧಾರ್ಮಿಕ ಕಾರ್ಯಕ್ರಮಕ್ಕೆ ದರ್ಬಾರ್ ಹಾಲ್ ಸಜ್ಜು





ಮೈಸೂರು,ಅ.8(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಅರಮನೆಯಲ್ಲಿ ರಾಜವಂಶಸ್ಥರಿಂದ ನಡೆಯುವ ಧಾರ್ಮಿಕ ಕಾರ್ಯಕ್ಕೆ ಅರಮನೆ ಒಳಾಂಗಣ ಸಜ್ಜಾಗುತ್ತಿದ್ದು, ದರ್ಬಾರ್ ಹಾಲ್ ಸೇರಿದಂತೆ ವಿವಿಧೆಡೆ ನವರಾತ್ರಿ ಉತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಅ.15ರಿಂದ ಅರಮನೆಯಲ್ಲಿ ರಾಜವಂಶಸ್ಥರಿಂದ ಖಾಸಗಿ ದರ್ಬಾರ್ ನಡೆಯಲಿದ್ದು, ಅದಕ್ಕಾಗಿ ಇಂದಿನಿಂದಲೇ ಅರಮನೆಯ ಒಳಾಂಗಣ, ದರ್ಬಾರ್ ಹಾಲ್‌ನಲ್ಲಿ ಸಿದ್ಧತೆ ಬಿರುಸಾಗಿ ನಡೆಸಲಾಗುತ್ತಿದೆ. ಪ್ರಮುಖವಾಗಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ, ಕನ್ನಡಿ ತೊಟ್ಟಿಯಲ್ಲಿ ಭದ್ರಾಸನ ಜೋಡಣೆಗಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಮಾಡಲು ಸ್ವಚ್ಛತೆ ಮಾಡಿ, ರತ್ನಗಂಬಳಿ ಹಾಸಲಾಗಿದೆ. ಅಲ್ಲದೆ, ಗೊಂಚಲು ದೀಪ (ಹ್ಯಾಂಡಲರ್ ಲೈಟ್)ಗಳ ಸ್ವಚ್ಛಗೊಳಿಸಲಾಗುತ್ತಿದೆ.

ಅರಮನೆಗೆ ಜಿಲ್ಲಾ ನ್ಯಾಯಾಧೀಶರ ಭೇಟಿ



ಜಂಬೂಸವಾರಿ ವೀಕ್ಷಣೆಗೆ ಹೈಕೋರ್ಟ್ ನ್ಯಾಯಮೂರ್ತಿಗಳು ಆಗಮಿಸುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ನೇತೃತ್ವದ ತಂಡ ಭಾನುವಾರ ಅರಮನೆಗೆ ಭೇಟಿ ನೀಡಿ ಪರಿಶೀಲಿಸಿತು. ಪ್ರತಿ ವರ್ಷ ಜಂಬೂಸವಾರಿ ದಿನ ಅಂಬಾರಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ಸ್ಥಳದ ಸಮೀಪ ನ್ಯಾಯಮೂರ್ತಿಗಳಿಗೆ ಸ್ಥಳಾವಕಾಶ ಮಾಡಿಕೊಡಲಾಗುತ್ತಿತ್ತು. ಆದರೆ, ಜಂಬೂಸವಾರಿ ವೀಕ್ಷಣೆ ವೇಳೆ ಬಿಸಿಲಿನ ಬೇಗೆಯಿಂದ ಕಳೆದ ವರ್ಷ ನ್ಯಾಯಾಧೀಶರು ತತ್ತರಿಸಿದ್ದರು. ಅರಮನೆ ಮುಂಭಾಗದ ಪ್ರಾಂಗಣದಲ್ಲಿ ಪೆಂಡಾಲ್ ಹಾಕಲು ನಿರ್ಬಂಧವಿರುವ ಕಾರಣ, ಈ ಬಾರಿ ನ್ಯಾಯಾಧೀಶರಿಗಾಗಿ ಸುರಕ್ಷಿತ ಸ್ಥಳ ಮೀಸಲಿಡುವ ಸಂಬಂಧ ಜಿಲ್ಲಾ ನ್ಯಾಯಮೂರ್ತಿಗಳಿಗಾಗಿ ಜಿ.ಎಸ್.ಸಂಗ್ರೇಶಿ ಅವರು ಪರಿಶೀಲನೆ ನಡೆಸಿದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರೊಂದಿಗೆ ಅರಮನೆಯ ಆನೆ ಬಾಗಿಲು ಮೇಲ್ಭಾಗದಲ್ಲಿರುವ ಸಾರ್ವಜನಿಕ ದರ್ಬಾರ್ ಹಾಲ್‌ನಲ್ಲಿ ಸ್ಥಳ ಪರಿಶೀಲಿಸಿದರು. ಪಬ್ಲಿಕ್ ದರ್ಬಾರ್ ಹಾಲ್‌ನಲ್ಲಿ ಒಂದು ಕಡೆ ರಾಜಮನೆತನದವರು ಜಂಬೂಸವಾರಿ ವೀಕ್ಷಿಸಿದರೆ, ಮತ್ತೊಂದು ಭಾಗದಲ್ಲಿ ಗಣ್ಯರಿಗಾಗಿ ಆಸನದ ವ್ಯವಸ್ಥೆ ಮಾಡುವ ಪದ್ಧತಿ ರೂಢಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಪಬ್ಲಿಕ್ ದರ್ಬಾರ್ ಹಾಲ್ ಪರಿಶೀಲಿಸಲಾಯಿತು.

ಅರಮನೆಯಲ್ಲಿ ದಸರಾ ಮಹೋತ್ಸವದ ಸಂಭ್ರಮ ಮನೆ ಮಾಡಿದ್ದು, ಅರಮನೆಯ ಕಲ್ಯಾಣಮಂಟಪ, ಕನ್ನಡಿ ತೊಟ್ಟಿ ಆನೆ ಬಾಗಿಲು, ಮುಂಭಾಗದ ಪ್ರಾಂಗಣ ಸೇರಿದಂತೆ ಅರಮನೆಯ ಒಳಾಂಗಣವನ್ನು ಸ್ವಚ್ಛತೆ ಮಾಡಿ ನವರಾತ್ರಿ ಉತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ದಸರಾ ಮಹೋತ್ಸವದಲ್ಲಿ ರಾಜ ಮನೆತನದ ವತಿಯಿಂದ ನಡೆಯುವ ಖಾಸಗಿ ದರ್ಬಾರ್ ಸೇರಿದಂತೆ ಇನ್ನಿತರ ಧಾರ್ಮಿಕ ಚಟುವಟಿಕೆ ನಡೆಯಲಿದ್ದು, ಅದರಲ್ಲಿ ರಾಜ ವಂಶಸ್ಥರು ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಅರಮನೆ ಮಂಡಳಿ ವತಿಯಿಂದ ಅರಮನೆಯ ಒಳಾಂಗಣದ ಸಿದ್ಧತೆಯನ್ನು ಬಿರುಸಾಗಿ ನಡೆಸಲಾಗಿದೆ.

ಇಂದು ಸಿಂಹಾಸನ ಜೋಡಣೆ: ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧ

ನವರಾತ್ರಿ ಮಹೋತ್ಸವದ ಹಿನ್ನೆಲೆಯಲ್ಲಿ ಅ.15ರಿಂದ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಖಾಸಗಿ ದರ್ಬಾರ್ ಉತ್ಸವ ಜರುಗಲಿದ್ದು, ಅದಕ್ಕಾಗಿ ನಾಳೆ(ಅ.9) ಬೆಳಗ್ಗೆ ಬಿಗಿ ಭದ್ರತೆಯಲ್ಲಿ ದರ್ಬಾರ್ ಹಾಲ್‌ನಲ್ಲಿ ಸ್ಟ್ರಾಂಗ್ ರೂಮ್‌ನಿಂದ ಸಿಂಹಾಸನದ ಬಿಡಿ ಭಾಗವನ್ನು ತಂದು ಜೋಡಣೆ ಮಾಡಲಾಗುತ್ತದೆ. ಅದಕ್ಕಾಗಿ ನಾಳೆ ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ಶಿಕ್ಷಕರಿಗೆ ರಸಪ್ರಶ್ನೆ ಸ್ಪರ್ಧೆ ; ಸದ್ವಿದ್ಯಾ ಶಾಲೆ ಪ್ರಥಮ



ಮೈಸೂರು,ಅ.8(ಪಿಎಂ)– ರೋಟರಿ ಮೈಸೂರು, ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೇಷನ್, ಐಡಿಯಲ್ ಜಾವಾ ರೋಟರಿ ಸ್ಕೂಲ್‌ನ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರ ಶಾಲಾ ಶಿಕ್ಷಕರ ರಸಪ್ರಶ್ನೆ ಸ್ಪರ್ಧೆಯಲ್ಲಿ ಸದ್ವಿದ್ಯಾ ಶಾಲೆಯ ಶಿಕ್ಷಕರ ತಂಡ ಪ್ರಥಮ ಸ್ಥಾನ ಗಳಿಸಿ, 15 ಸಾವಿರ ನಗದು ಬಹುಮಾನ ಪಡೆದುಕೊಂಡಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೇಷನ್ ಸಭಾಂಗಣದಲ್ಲಿ 'ಸಾಮಾನ್ಯ ಜ್ಞಾನ' ಕುರಿತಂತೆ ಆಯೋಜಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ಸದರಿ ಶಾಲೆಯ ಶಿಕ್ಷಕರ ತಂಡ ಪ್ರಥಮ ಸ್ಥಾನಕ್ಕೆ ಭಾಜನವಾಯಿತು.

20 ಶಾಲೆಗಳ ಶಿಕ್ಷಕರು ನೋಂದಣಿ ಮಾಡಿಕೊಂಡು ಲಿಖಿತ ಪರೀಕ್ಷೆ ಎದುರಿಸಿದ್ದರು. ಈ ಪೈಕಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ 6 ಶಾಲೆಗಳಿಂದ ಶಿಕ್ಷಕರನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಯಿತು. ಬಳಿಕ ನಡೆದ ಸ್ಪರ್ಧೆಯಲ್ಲಿ ತಂಡ ಒಂದರಲ್ಲಿ ಮೂರು ಮಂದಿ ಶಿಕ್ಷಕರು ಒಳಗೊಂಡಂತೆ ಆರು ಶಾಲೆಯ ಆರು ತಂಡಗಳು ಅಂತಿಮ ಸುತ್ತಿನಲ್ಲಿ ಪೈಪೋಟಿ ನಡೆಸಿದವು.

ಈ ಪೈಕಿ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಶಾಲೆಯ ಶಿಕ್ಷಕರ ತಂಡ ಪ್ರಥಮ ಸ್ಥಾನ ಗಳಿಸಿತು. ಅಂತೆಯೇ ದ್ವಿತೀಯ ಸ್ಥಾನ ಗಳಿಸಿದ ಕೌಟಿಲ್ಯ ವಿದ್ಯಾಲಯದ ಶಿಕ್ಷಕರ ತಂಡ 9 ಸಾವಿರ ರೂ. ಹಾಗೂ ತೃತೀಯ ಸ್ಥಾನ ಪಡೆದ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಶಿಕ್ಷಕರ ತಂಡ 6 ಸಾವಿರ ರೂ. ನಗದು ಬಹುಮಾನ ಪಡೆದವು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜೆಎಸ್‌ಎಸ್ ಆಸ್ಪತ್ರೆ ನಿವೃತ್ತ ವೈದ್ಯ ಡಾ.ಕುಶಾಲಪ್ಪ ವಿಜೇತ ತಂಡಗಳಿಗೆ ನಗದು ಬಹುಮಾನ ವಿತರಿಸಿದರು. ರಸಪ್ರಶ್ನೆಗಳನ್ನು ಸಿದ್ಧಪಡಿಸಿದ್ದ ರೋಟರಿ ಮೈಸೂರು ಉಪಾಧ್ಯಕ್ಷೆ ರೂಪಾ ವೆಂಕಟೇಶ್ ಸ್ಪರ್ಧೆ ನಡೆಸಿಕೊಟ್ಟರು. ರೋಟರಿ ಮೈಸೂರು ಅಧ್ಯಕ್ಷ ಅರುಣ್ ಬೆಳವಾಡಿ, ಯೂತ್ ಸರ್ವೀಸ್ ನಿರ್ದೇಶಕ ಸಮೀರ್ ಕಶ್ಯಪ್, ರೋಟರಿ ಸದಸ್ಯ ಮನೋಹರ್, ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೇಷನ್ ಅಧ್ಯಕ್ಷ ಶ್ರೀನಿವಾಸ್ ಭಾರದ್ವಾಜ್, ಉಪಾಧ್ಯಕ್ಷ ಸುಹಾಸ್ ಮತ್ತಿತರರು ಹಾಜರಿದ್ದರು.

ಕಾವೇರಿ ಹೋರಾಟಕ್ಕೆ ಒಕ್ಕಲಿಗರ ಸಂಘ ಬೆಂಬಲ



ಮೈಸೂರು, ಅ.8(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರಿನ ಟೌನ್ ಹಾಲ್ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿಗೆ ಅಖಿಲ ಕರ್ನಾಟಕ ಒಕ್ಕಲಿಗರ ಸಂಘ ಬೆಂಬಲ ಸೂಚಿಸಿ, ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಬೇಕು. ಮೊನ್ನೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ಸಿದ್ದರಾಮಯ್ಯರವರಿಗೆ ನೀವು ನಮಗೆ ನೀರು ಬಿಡುವುದನ್ನು ನಿಲ್ಲಿಸಿದರೆ ನಾವು ಇಂಡಿಯಾ ಮೈತ್ರಿಕೂಟದಿಂದ ಹೊರಹೋಗುತ್ತೇವೆಂದು ಎಚ್ಚರಿಕೆ ನೀಡಿ ನಮಗೆ ನಮ್ಮ ರೈತರ ಹಿತಾಸಕ್ತಿ ಮುಖ್ಯ ಎಂದಿದ್ದಾರೆ. ಈ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿ ಏಕೆ ನಮ್ಮ ರೈತರ ಪರವಾಗಿಲ್ಲ. ಇದು ನಿಜಕ್ಕೂ ಖಂಡನೀಯ. ಕೇಂದ್ರ ಸರ್ಕಾರ ಈ ಕೂಡಲೇ ಮಧ್ಯಸ್ಥಿಕೆ ವಹಿಸಿ ನಮಗೆ ಶಾಶ್ವತ ಪರಿಹಾರ ನೀಡಬೇಕು. ನೀರಿದ್ದಾಗ ಮಾತ್ರ ನೀರು ಬಿಡಲು ಸೂತ್ರ ರಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಮೂಗೂರು ನಂಜುಂಡಸ್ವಾಮಿ, ಮೋಹನ್ ಕುಮಾರ್ ಗೌಡ, ಸುರೇಶ್ ಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕಾರ್ಯಾಧ್ಯಕ್ಷೆ ಸುಮಿತ್ರಾ ರಮೇಶ್, ಶಿವಲಿಂಗಯ್ಯ, ಮಂಡ್ಯ ಅಧ್ಯಕ್ಷೆ ಸುಜಾತ, ಸುರೇಶ್ ಗೋಲ್ಡ್, ದುರ್ಗಮ್ಮ, ವಿಜಯೇಂದ್ರ ಕೃಷ್ಣಯ್ಯ, ನಳಿನಿ, ಡಾ. ನರಸಿಂಹೇಗೌಡ, ಹನುಮಂತಯ್ಯ, ಪುಷ್ಪವತಿ, ಶುಭಶ್ರೀ, ಮಂಜುಳ, ಹನುಮಂತೇಶ್, ಸೋಮೇಗೌಡ, ಹೇಮಂತ್, ಪ್ರಭಾಕರ್, ಮಹಾದೇವ ಆರ್ ಮತ್ತಿತರರು ಉಪಸ್ಥಿತರಿದ್ದರು.

ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಅ.8(ಜಿಎ)–ಮೈಸೂರಿನ ಗೋಕುಲಂ ಮುಖ್ಯರಸ್ತೆ ಮತ್ತು ಕಾಂಟೂರ್ ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸಿ ಗೋಕುಲಂ ನಿವಾಸಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

ಗೋಕುಲಂ ಮುಖ್ಯ ರಸ್ತೆಯಲ್ಲಿ ಗಣೇಶ ದೇವಾಲಯದ ಮುಂಭಾಗ ಜಮಾಯಿಸಿದ ನಿವಾಸಿಗಳು ಪಾಲಿಕೆ ಮತ್ತು ಲೋಕೋಪಯೋಗಿ ಇಲಾಖೆ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಆರು ತಿಂಗಳ ಹಿಂದೆ ನೀರಿನ ಪೈಪ್ ಅಳವಡಿಸಲು ತ್ರಿನೇತ್ರ ವೃತ್ತದಿಂದ ಕಾಂಟೂರ್ ರಸ್ತೆ, ಗೋಕುಲಂ ಮುಖ್ಯ ರಸ್ತೆಯನ್ನು ಅಗೆದಿದ್ದು, ಈವರೆಗೂ ರಸ್ತೆ ದುರಸ್ತಿ ಮಾಡಿಲ್ಲ. ಮುಖ್ಯ ರಸ್ತೆ ಆಗಿರುವುದರಿಂದ ಬಸ್, ಕಾರು ಸೇರಿದಂತೆ ಎಲ್ಲಾ ರೀತಿಯ ವಾಹನಗಳು ನಿತ್ಯವೂ ಸಂಚರಿಸುತ್ತವೆ. ಇದರಿಂದ ಧೂಳಿನ ಪ್ರಮಾಣ ಹೆಚ್ಚಾಗಿ ಈಗಾಗಲೇ ಮಕ್ಕಳು ಮತ್ತು ವೃದ್ಧರಲ್ಲಿ ಉಸಿರಾಟದ ಸಮಸ್ಯೆ ಉಂಟಾಗಿದ್ದು, ಕೆಲವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಭೇಟಿ ಮಾಡಿ ನಿವಾಸಿಗಳ ಸಮಸ್ಯೆಗಳನ್ನು ಆಲಿಸಿದರು. ನಂತರ ಲೋಕೋಪಯೋಗಿ ಅಧಿಕಾರಿಗಳಿಗೆ ಕರೆ ಮಾಡಿ ಆದಷ್ಟು ಬೇಗ ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು. ಆದರೆ, ನಿವಾಸಿಗಳು ಮುಂದಿನ ಹತ್ತು ದಿನಗಳಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸದಿದ್ದರೆ, ರಸ್ತೆ ಸಂಚಾರಕ್ಕೆ ನಿರ್ಬಂಧ ಹೇರಿ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.



ಅರಣ್ಯ ಮತ್ತು ಪರಿಸರ ಇಲಾಖೆ ವತಿಯಿಂದ ಆಯೋಜಿಸಿದ್ದ 69ನೇ ವನ್ಯಜೀವಿ ಸಪ್ತಾಹ – 2023 ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾನುವಾರ ಮೈಸೂರಿಗೆ ಆಗಮಿಸಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಸ್ವಾಗತಿಸಿದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಪ್ರಶಸ್ತಿ ಪ್ರದಾನ



ಮೈಸೂರು, ಅ.8(ಜಿಎ)–ಆದರ್ಶ ಸೇವಾ ಸಂಘ ಮತ್ತು ವಿಶ್ವ ವಿಪ್ರತ್ರಯೀ ಪರಿಷತ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ವಿವಿಧ ಕ್ಷೇತ್ರದ ಸಾಧಕರಿಗೆ ಆದರ್ಶ ರತ್ನ, ಆದರ್ಶ ಸೇವಾ ರತ್ನ, ಆದರ್ಶ ಪ್ರತಿಭಾ ರತ್ನ, ಆದರ್ಶ ಬಾಲ ಪ್ರತಿಭಾ ರತ್ನ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಅವಧೂತ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ಭಗವದ್ಗೀತೆ ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲ. ಇಡೀ ಮನುಕುಲಕ್ಕೆ ಸೇರಿದ್ದಾಗಿದೆ. ಹೀಗಾಗಿ ಪ್ರಸ್ತುತ ಭಗವದ್ಗೀತೆಯ ಮೌಲ್ಯಗಳು ವಿಶ್ವದಾದ್ಯಂತ ಹೆಚ್ಚು ಮನ್ನಣೆ ಗಳಿಸುತ್ತಿದೆ. ಮನುಷ್ಯನ ಜೀವನ ಶೈಲಿಯ ಬದಲಾವಣೆಯಿಂದ ಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿವೆ. ಯುವ ಸಮೂಹದಲ್ಲಿ ಸ್ವಾರ್ಥ ಹೆಚ್ಚುತ್ತಿದೆ. ಪರರ ದುಃಖಕ್ಕೆ ಸಾಂತ್ವನ ಹೇಳುವ ಮತ್ತು ಸುಖವನ್ನು ಹಂಚಿಕೊಳ್ಳುವ ಪ್ರಕ್ರಿಯೆಗಳು ಕಡಿಮೆಯಾಗಿದೆ. ಈ ಮೌಲ್ಯಗಳು ಹೆಚ್ಚಾಬೇಕಾದರೆ ಭಗವದ್ಗೀತೆ, ವೇದ, ಉಪನಿಷತ್ತುಗಳನ್ನು ಅಭ್ಯಾಸ ಮಾಡಬೇಕು ಎಂದು ಸಲಹೆ ನೀಡಿದರು.

ವಿದೇಶಗಳಲ್ಲಿ ನೆಲೆಸಿರುವ ಹಿಂದುಗಳು ಮಕ್ಕಳಿಗೆ ಭಗವದ್ಗೀತೆ ಪಠಣ ಮಾಡಿಸುತ್ತಿದ್ದಾರೆ. ಅದರಲ್ಲಿಯೂ ಅಮೇರಿಕಾದಲ್ಲಿ ಭಗವದ್ಗೀತೆ ಅಭ್ಯಾಸ ಹೆಚ್ಚಾಗುತ್ತಿದೆ. ಕಳೆದ ಮೂರು ವರ್ಷಗಳ ಹಿಂದೆ ಸುಮಾರು 10 ಸಾವಿರಕ್ಕೂ ಹೆಚ್ಚು ಜನರಿಗೆ ಏಕಕಾಲದಲ್ಲಿ ಭಗವದ್ಗೀತೆ ಕಂಠಪಾಠ ಮಾಡಿಸಿದ್ದೇನೆ. ಈ ಬಾರಿ ಇನ್ನೂ ಹೆಚ್ಚಿನ ಜನರು ಒಟ್ಟಿಗೆ ಭಗವದ್ಗೀತೆ ಪಾರಾಯಣ ನಡೆಯಲಿದೆ ಎಂದು ತಮ್ಮ ಅಮೆರಿಕಾ ಪ್ರವಾಸವನ್ನು ಮೆಲುಕು ಹಾಕಿದರು.

ಕಾಮ, ಕ್ರೌರ್ಯ ಬಿಟ್ಟು ಸತ್ಯ ಶೋಧನೆಯಿಂದ ಬದುಕು ಕೂಡಿರಬೇಕು. ಮನಸ್ಸನ್ನು ಹಗುರವಾಗಿ ಇಟ್ಟುಕೊಳ್ಳಬೇಕು. ಈಗಿನ ಮಕ್ಕಳಲ್ಲಿ ಜ್ಞಾಪಕ ಶಕ್ತಿ ಕಡಿಮೆಯಾಗಿದೆ. ಬಾಲ್ಯದಿಂದಲೇ ಮಕ್ಕಳನ್ನು ಒತ್ತಡದಲ್ಲಿ ಬೆಳೆಸಲಾಗುತ್ತಿದೆ. ಇದರಿಂದ ಮಕ್ಕಳಲ್ಲಿ ಗೊಂದಲ ಸೃಷ್ಟಿಯಾಗಿದೆ. ಗೊಂದಲ ನಿವಾರಣೆಗೆ ಎಲ್ಲರೂ ವೇದ ಉಪನಿಷತ್ತುಗಳನ್ನು ಅಧ್ಯಯನ ಮಾಡಬೇಕು ಎಂದ ಅವರು, ಆದರ್ಶ ಸೇವಾ ಸಂಘದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆದರ್ಶ ಬಾಲಪ್ರತಿಭಾ ರತ್ನ ಪ್ರಶಸ್ತಿ ಪುರಸ್ಕೃತರು: ವೇದಾಧ್ಯಯನ ನಿರತ ಬಾಲ ಸಾಧಕ ಪೃಥು ಪಿ.ಅದ್ವೈತ್, ಭರತನಾಟ್ಯ ಬಾಲ ಕಲಾವಿದ ಭಗತ್ ಶರ್ಮ, ಕಿರುತೆರೆ ನಟ ವಿ.ಅಮೋಘ ಕೃಷ್ಣ, ವಯೋಲಿನ್ ಸಾಧಕ ಪ್ರಣವ್ ಚಂದ್ರಶೇಖರ್.

ಆದರ್ಶ ಪ್ರತಿಭಾ ರತ್ನ ಪ್ರಶಸ್ತಿ: ಯುವ ವಿಜ್ಞಾನಿ ಆಕಾಶ್, ಅಂತಾರಾಷ್ಟ್ರೀಯ ಬ್ಯಾಡ್‌ಮಿಂಟನ್ ಆಟಗಾರ ವಿದ್ಯಾನಂದ ಕಶ್ಯಪ್, ಮಾರ್ಗದರ್ಶಕ ಬಿ.ನಾಗರಾಜ್ ಕುಮಾರ್, ಯುವ ಚಿಂತಕ ಪ್ರಜ್ಞಾ ಕಶ್ಯಪ್, ಗಾಯಕ ಕೆ.ರಮೇಶ್, ಕೋಟಿ ವೃಕ್ಷ ಪ್ರತಿಷ್ಠಾನದ ಶ್ರೀಕಾಂತ್ ಭಟ್, ಮಾಧ್ಯಮ ಪ್ರವರ್ತಕ ಅಮಿತ್, ಗಾಯಕಿ ಹಂಸಿನಿ ಎಸ್.ಕುಮಾರ್, ಯುವ ಉದ್ಯಮಿ ಶೌಮಿಕಾ ಎಸ್.ರಾವ್, ವಯೋಲಿನ್ ವಾದಕ ಸಿರಿ ಪರಮಾತ್ಮ, ಚಿತ್ರ ಕಲಾವಿದೆ ಶಿವಾನಿ ಪ್ರಸಾದ್, ಇಂಜಿನಿಯರ್ ಪಿ.ಎನ್.ಪ್ರಶಾಂತ್ ಭಾಜನರಾದರು.

ಆದರ್ಶ ರತ್ನ ಪ್ರಶಸ್ತಿ: ಅಂಚೆ ಇಲಾಖೆ ನಿವೃತ್ತ ಅಧಿಕಾರಿ ಬಿ.ಎನ್.ನಾಗರಾಜು, ನಿವೃತ್ತ ಪ್ರಾಧ್ಯಾಪಕ ಕೆ.ಎನ್.ನಾಗೇಶ್, ಎಂ.ಶ್ರೀಕಂಠಮೂರ್ತಿ, ವಿನೋದಮ್ಮ ಪುರಸ್ಕೃತರಾದರು.


ಆದರ್ಶ ಸೇವಾ ರತ್ನ ಪ್ರಶಸ್ತಿ: ವನಜಾ ಪಂಡಿತ್, ಪ್ರೊ.ಎಚ್.ಎಸ್.ನಾಗರಾಜು, ಎ.ರಾಮಸ್ವಾಮಿ, ಭಾನುಪ್ರಕಾಶ್ ಶರ್ಮ, ಭೀಮೇಶ್ವರ ಜೋಷಿ, ಡಾ.ಅಯ್ಯಪ್ಪನ್, ಪ್ರಕಾಶ್ ಅಯ್ಯಂಗಾರ್, ಕಾನಾಡಿ ಗೋವಿಂದ ಭಟ್ಟ, ಕೆ.ಸುಂದರರಾಜು, ಡಾ.ಮಹೇಶ್ ಶೆಣೈ, ದಿಲೀಪ್ ಸತ್ಯ, ಡಾ.ಸುಧಾ ರಮೇಶ್, ಡಾ.ಜಿ.ಅಚ್ಯುತ ರಾವ್, ಅಶೋಕ ಎಂ.ರಾವ್, ಸುರೇಶ್ ವೃಕ್ಷಂ, ಡಾ.ಮಹಾಲಕ್ಷ್ಮೀ ಬೇಗೂರು ಪೂರ್ಣಯ್ಯ ಅವರಿಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಉಚ್ಚ ನ್ಯಾಯಾಲಯ ನಿವೃತ್ತ ನ್ಯಾಯಾಧೀಶ ಎನ್.ಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ, ವಿಶ್ವ ವಿಪ್ರತ್ರಯೀ ಪರಿಷತ್‌ನ ಅಧ್ಯಕ್ಷ ಎನ್.ರಘುನಾಥ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಪ್ರಕೃತಿಗೆ ವಿರೋಧ ಮನುಷ್ಯನ ಸಂಸ್ಕೃತಿ

ಕಾರ್ಯಾಗಾರದಲ್ಲಿ ಪ್ರಾಧ್ಯಾಪಕಿ ಕವಿತಾ ರೈ ಬೇಸರ



ಹೆಚ್.ಡಿ.ಕೋಟೆ ಅ.8– ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಗಮನಿಸಿದರೆ ಮನುಷ್ಯ ಸಾವಿರಪಟ್ಟು ಅರಣ್ಯ ನಾಶ ಮಾಡಿದ್ದಾನೆ ಎಂದು ಕನ್ನಡ ಸಂಶೋಧನಾ ಮತ್ತು ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಕವಿತಾ ರೈ ಬೇಸರ ವ್ಯಕ್ತಪಡಿಸಿದರು.

ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ವನ್ಯಜೀವ ಸಪ್ತಾಹ ಅಂಗವಾಗಿ 'ವನ್ಯಜೀವಿ ಸಂರಕ್ಷಣೆ ಮತ್ತು ಮಾನವ–ವನ್ಯಜೀವಿ ಸಂಘರ್ಷ ನಿವಾರಣೆಯಲ್ಲಿ ಪತ್ರಿಕಾ ಮತ್ತು ಮಾಧ್ಯಮದ ಪಾತ್ರ' ಕುರಿತು ಭಾನುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಪ್ರಕೃತಿಗೆ ವಿರೋಧವಾಗಿ ನಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವ ಆವಿಷ್ಕಾರದ ಪರಿಣಾಮ ಇಂದು ಅರಣ್ಯವನ್ನು ಸಂಪೂರ್ಣವಾಗಿ ನಾಶ ಮಾಡುವತ್ತ ಸಾಗಿದ್ದೇವೆ ಎಂದು ತಿಳಿಸಿದರು.

ಕಾಡಿನಲ್ಲಿರುವ ಆದಿವಾಸಿಗಳನ್ನು ನಾಡಿಗೆ ಕರೆತಂದು ಪರ್ಯಾಯ ವ್ಯವಸ್ಥೆ ಕಲ್ಪಿಸಲು ಅರಣ್ಯ ಇಲಾಖೆಯ ಸಿಬ್ಬಂದಿ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾರೆ. ನಮ್ಮ ಸಂಸ್ಕೃತಿ ನಾಶವಾಗುತ್ತದೆ ಎಂಬ ಕಾರಣದಿಂದ ಆದಿವಾಸಿಗಳು ಕಾಡಿನಿಂದ ನಾಡಿಗೆ ಬರಲು ಒಪ್ಪುತ್ತಿರಲಿಲ್ಲ. ಆದಿವಾಸಿಗಳಿಗೆ ಹುಟ್ಟಿನಿಂದ ಸಾವಿನವರೆಗೂ ಸರ್ಕಾರ ಯಾವುದೇ ಪರ್ಯಾಯ ವ್ಯವಸ್ಥೆ ಮಾಡಿದರೂ ಅವರ ಸಂಸ್ಕೃತಿಗೆ ಧಕ್ಕೆ ಬರುತ್ತದೆ ಎಂಬ ಕಾರಣಕ್ಕೆ ಅವರು ನಮ್ಮಂತಿಲ್ಲ. ಸರ್ಕಾರಕ್ಕೆ ಆರ್ಥಿಕವಾಗಿ ಹೆಚ್ಚಿನ ಸಂಪನ್ಮೂಲವನ್ನು ನೀಡುತ್ತಿರುವುದು ಅರಣ್ಯ ಇಲಾಖೆ ಎಂದರು.

ನಿಟ್ರೂರು ಗ್ರಾಪಂ ಸದಸ್ಯ ಶರಿ ಮುತ್ತಣ್ಣ ಮಾತನಾಡಿ, ಹಿಂದೆ ಕಾಫಿ ತೋಟಗಳಿಗೆ ಕಾಡಿನ ಕೆರೆ–ಕಟ್ಟೆಗಳನ್ನು ಅವಲಂಬಿಸಿದ್ದ ಕಾರಣ ಕಾಡಿನ ಕೆರೆಗಳಲ್ಲಿ ನೀರು ಬತ್ತು ಹೋಗಿ ಕಾಡುಪ್ರಾಣಿಗಳು ನೀರನ್ನರಸಿ ಕಾಡಿನಿಂದ ನಾಡಿಗೆ ಬರುವ ಸ್ಥಿತಿ ಎದುರಾಗಿತ್ತು ನಾನು ಅಂದು ಮೂರು ವರ್ಷ ಹೋರಾಟ ಮಾಡಿದ ಪರಿಣಾಮ ಇಂದು ನಿಟ್ರೂರಿನ 33 ಎಕರೆ ವಿಸ್ತೀರ್ಣದ ಕೆರೆ ಉಳಿದಿದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪತ್ರಿಕೋದ್ಯಮದ ವಿಭಾಗದ ಪ್ರಾಧ್ಯಾಪಕ ತೇಜಸ್ವಿ ನವಿಲೂರು ಮಾತನಾಡಿದರು. ಕಾರ್ಯಾಗಾರದಲ್ಲಿ ಡಿಸಿಎಫ್ ಹರ್ಷ ಕುಮಾರ್ ಚಿಕ್ಕನರಗುಂದ, ಎಸಿಎಫ್‌ಗಳಾದ ರಂಗಸ್ವಾಮಿ, ಕುಮಾರಿ, ಆರ್‌ಎಫ್‌ಓಗಳಾದ ಮಧು, ರಾಜಶೇಖರ್, ಸುಬ್ರಹ್ಮಣ್ಯ, ಮಹಮ್ಮದ್ ಜೀಷನ್, ಮಧು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ಅಧ್ಯಕ್ಷ ಕೆ.ದೀಪಕ್, ಎಚ್.ಡಿ.ಕೋಟೆ ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿ ಜಗದೀಶ್, ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಚ್.ಆರ್.ಕೃಷ್ಣಕುಮಾರ್, ಪತ್ರಕರ್ತರಾದ ರಾಘವೇಂದ್ರ, ಹಲ್ಲಹಳ್ಳಿ ಮೋಹನ್, ಸಾಲಿಗ್ರಾಮ ಯಶವಂತ್, ಕನ್ನಡ ಪ್ರಮೋದ್, ಗಜೇಂದ್ರ, ಬೀಚನಹಳ್ಳಿ ಮಂಜು, ದಾಸೇಗೌಡ, ರಂಗರಾಜು, ದೊಡ್ಡಸಿದ್ದು, ಪುರುಷೋತ್ತಮ, ಮಹೇಶ್, ರೇಣುಕಾಸ್ವಾಮಿ, ಚಂದ್ರ, ವಾಸುಕಿ ನಾಗೇಶ್, ಸುರೇಶ್, ರವಿಕುಮಾರ್ ಹಾಜರಿದ್ದರು.

> **6** ಆದಿವಾಸಿಗಳಿಂದ ಕಾಡು ನಾಶವಾಗಿಲ್ಲ. ಕೆಲ ಮಾಫಿಯಾಗಳಿಂದ ಅರಣ್ಯ ನಾಶವಾಗುತ್ತಿವೆ. ಪ್ರಜಾಪ್ರಭುತ್ವದ ಯಶಸ್ವಿಗೆ ಪತ್ರಿಕೋದ್ಯಮದ ಪಾತ್ರ ಹೆಚ್ಚಿದೆ. ಅರಣ್ಯ ಇಲಾಖೆಯವರು ಪತ್ರಕರ್ತರೊಂದಿಗೆ ಕೈಜೋಡಿಸಿದರೆ ರಾತ್ರಿ ವೇಳೆಯ ವರದಿಗಳು ಬರಲು ಸಾಧ್ಯ.
> –ಕವಿತಾ ರೈ, ಕನ್ನಡ ಸಂಶೋಧನ ಮತ್ತು ಅಧ್ಯಯನ ವಿಭಾಗದ ಪ್ರಾಧ್ಯಾಪಕಿ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ದ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ)**: ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ)**: ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ)**: ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)**: ರಾ.9.45ಕ್ಕೆ, **ಆಚಾರ್ & ಕೋ (ಕ)**: ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ)**: ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ)**: ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ)**: ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ)**: ಸಂ.6.35ಕ್ಕೆ, **ಭೋಳಾ ಶಂಕರ್ (ತೆ)**: ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ)**: ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಬೆಟ್ಟದಪುರದಿಂದ ಕುಶಾಲನಗರ ಮಾರ್ಗವಾಗಿ ಅಲ್ಲನಾಯಕನಹಳ್ಳಿ ಗ್ರಾಮಕ್ಕೆ ನೂತನವಾಗಿ ಆರಂಭವಾದ ಬಸ್‌ಗೆ ಗ್ರಾಮಸ್ಥರು ಪೂಜೆ ಸಲ್ಲಿಸಿ ಚಾಲಕ ಮತ್ತು ನಿರ್ವಾಹಕರಿಗೆ ಶುಭ ಹಾರೈಸಿದರು. ಗ್ರಾಮದ ಮುಖಂಡರಾದ ಶಿವಣ್ಣ, ಭೀಮ, ಮಹದೇವ, ದೊಡ್ಡಯ್ಯ, ವೇದಮೂರ್ತಿ ಇದ್ದರು.



ಹೆಚ್.ಡಿ.ಕೋಟೆಯ ಬಾಲಕಿಯರ ಪ್ರೌಢಶಾಲಾ ಆವರಣವನ್ನು ಕೆನರಾ ಬ್ಯಾಂಕ್ ಸಿಬ್ಬಂದಿ ಸ್ವಚ್ಛಗೊಳಿಸಿದರು. ಬ್ಯಾಂಕ್ ವ್ಯವಸ್ಥಾಪಕ ಕಾರ್ತಿಕ್ ಕುಮಾರ್, ಸಿಬ್ಬಂದಿ ಶುಶಾಂತ್, ಕುಮಾರ್, ಬೆಹೆರಾ, ಪ್ರದೀಪ್, ಚಂದ್ರು, ಎಸ್.ರವಿ, ದೀಪ್ತಿ, ನಿರ್ಮಲಾ, ಗಣೇಶ್, ಪ್ರಾಂಶುಪಾಲ ಮಂಜುನಾಥ್ ಇದ್ದರು.



ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ಮುಖ್ಯಶಿಕ್ಷಕ ವಿಜಯ, ದೇಬೂರು ಗ್ರಾಮ ದೈಹಿಕ ಶಿಕ್ಷಣ ಶಿಕ್ಷಕ ರವಿಕುಮಾರ್ ಮತ್ತು ಬಿಆರ್‌ಪಿ ಪ್ರಭಾವತಿ ಅವರಿಗೆ ಸಂಪ್ರಾಪ್ತಿ ಫೌಂಡೇಷನ್ ಮತ್ತು ಆರ್ಯಭಟ್ ಪ್ಯಾರಮೆಡಿಕಲ್ ಸಂಸ್ಥೆ ವತಿಯಿಂದ ರಾಜ್ಯಮಟ್ಟದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಜ್ಯೋತಿ ಬಾಫುಲೆ ಪ್ರಶಸ್ತಿ ನೀಡಲಾಯಿತು.

ತಿ.ನರಸೀಪುರದಲ್ಲಿ ಸುಮಯ ಭಾನುಗೆ ಬೀಳ್ಕೊಡುಗೆ



ತಿ.ನರಸೀಪುರ, ಅ.8– ಮುಂಬಡ್ತಿ ಪಡೆದು ವರ್ಗಾವಣೆಯಾದ ಪಟ್ಟಣದ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕಿ ಸುಮಯ ಭಾನು ಅವರನ್ನು ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ವತಿಯಿಂದ ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು.

ಪಟ್ಟಣದ ನ್ಯಾಯಾಲಯದಲ್ಲಿ 9 ವರ್ಷ ಸಹಾಯಕ ಅಭಿಯೋಜಕರಾಗಿ ಸೇವೆ ಸಲ್ಲಿಸಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಮುಂಬಡ್ತಿ ಪಡೆದು ಹಾಸನ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾವಣೆಗೊಂಡ ಸುಮಯಭಾನು ಅವರಿಗೆ ನ್ಯಾಯಾಲಯದ ಆವರಣದಲ್ಲಿ ಒಕ್ಕೂಟದ ಸದಸ್ಯರು ಸನ್ಮಾನಿಸಿದರು.

ಜೆಡಿಎಸ್ ರಾಜ್ಯ ಮಾಧ್ಯಮ ವಕ್ತಾರ ತಾಯೂರು ಪ್ರಕಾಶ್ ಮಾತನಾಡಿದರು.

ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲ ಚೌಹಳ್ಳಿ ರವಿಶಂಕರ್, ವಕೀಲೆ ಸುಚಿತ್ರಾ, ಯಡದೊರೆ ಮಹೇಶ್ ನಾಯಕ್, ಆಲಗೂಡು ಸತೀಶ್ ಮತ್ತಿತರರಿದ್ದರು.

ತಹಶೀಲ್ದಾರ್ ಅಶೋಕ್‌ಗೆ ಆದಿವಾಸಿಗಳ ಮನವಿ ಸಲ್ಲಿಕೆ

ಹುಣಸೂರು.ಅ.8– ವಾಸದ ದೃಢೀಕರಣ ಪತ್ರವನ್ನು ನಾಡಕಚೇರಿ ಹಾಗೂ ಗ್ರಾಪಂನಲ್ಲಿ ನೀಡುತ್ತಿಲ್ಲ ಎಂದು ಆರೋಪಿಸಿ ತಾಲೂಕಿನ ಗುರುಪುರ ಗ್ರಾಮ ಪಂಚಾಯಿತಿಯ ಹಳೆವಾರಂಚಿ ಹಾಡಿಯ ಆದಿವಾಸಿಗಳು ತಹಶೀಲ್ದಾರ್ ಡಾ.ಅಶೋಕ್ ಅವರಿಗೆ ಮನವಿ ಸಲ್ಲಿಸಿದರು.

ಆದಿವಾಸಿಗಳಿಗಾಗಿ ವಾಲ್ಮೀಕಿ ನಿಗಮದಲ್ಲಿ ನೇರಸಾಲ ಸೌಲಭ್ಯ ಪಡೆಯಲು ಹಾಡಿಯ 20ಕ್ಕೂ ಹೆಚ್ಚು ಕುಟುಂಬಗಳು ಅರ್ಜಿ ಸಲ್ಲಿಸಿದ್ದು, ಆದರೆ, ನಾಡಕಚೇರಿ ಹಾಗೂ ಗ್ರಾಪಂನಲ್ಲಿ ವಾಸದ ದೃಢೀಕರಣ ಪತ್ರ ನೀಡುತ್ತಿಲ್ಲ. ಇದರಿಂದ ಪತ್ರಕ್ಕಾಗಿ ನಿತ್ಯ ಅಲೆದಾಡುವಂತಾಗಿದೆ ಎಂದು ಮನವಿಯಲ್ಲಿ ದೂರಿದ್ದಾರೆ. ತಕ್ಷಣ ವಾಸದ ದೃಢೀಕರಣ ಪತ್ರ ನೀಡುವಂತೆ ಹನಗೋಡು ನಾಡಕಚೇರಿಗೆ ಸೂಚನೆ ನೀಡುವುದಾಗಿ ತಹಶೀಲ್ದಾರ್ ತಿಳಿಸಿದರು. ಹಾಡಿಯ ಶಿವಮ್ಮ, ನಾಗಮ್ಮ, ಸುಬ್ಬಪ್ಪ, ರತ್ನಮ್ಮ, ಗೌರಿ, ಅಶೋಕ, ಹರೀಶ್ ಇದ್ದರು.

ರಂಗಗರಡಿ ಕಲಾ ತಂಡದಿಂದ ನಾಟಕ ಪ್ರದರ್ಶನ



ಹುಣಸೂರು, ಅ.8– ಹುಣಸೂರಿನ ರಂಗಗರಡಿ ಕಲಾ ತಂಡ ಗಾಂಧಿ ಜಯಂತಿ ಪ್ರಯುಕ್ತ ಪಟ್ಟಣದ ಸರ್ಕಾರಿ ನೌಕರರ ಸಭಾಂಗಣದಲ್ಲಿ 'ಪಾಪು ಗಾಂಧಿ–ಬಾಪು ಗಾಂಧಿಯಾದ' ಕುರಿತ ನಾಟಕವನ್ನು ಪ್ರದರ್ಶಿಸಿತು.

ತಂಡದ ನಾಯಕ ಅರ್ಜುನ್ ಸತತ ಪ್ರಯತ್ನದಿಂದ ಮೊದಲ ಬಾರಿಗೆ ಈ ನಾಟಕ ಪ್ರದರ್ಶನಗೊಂಡಿತು. ಶುಭಾಷ್ ನಾಟಕ ನಿರ್ದೇಶಿಸಿದರು. ಈ ನಾಟಕವನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳು ಕಡ್ಡಾಯವಾಗಿ ನೋಡಬೇಕು ಎಂದು ಉಪನ್ಯಾಸಕ ಮಹದೇವ್ ತಿಳಿಸಿದರು.

ಇಂತಹ ಕಲಾವಂತಿಕೆಯನ್ನು ಯುವ ಜನರಲ್ಲಿ ಬೆಳೆಸಲು ಪೋಷಕರ ಅವಶ್ಯಕತೆ ಇದೆ ಎಂದು ಸಾಹಿತಿ ರೇಣುಕ ಪ್ರಸಾದ್ ಹೇಳಿದರು. ಕಲಾವಿದ ಕುಮಾರ್ ಅರಸೇಗೌಡ ಕಲಾ ತಂಡಕ್ಕೆ ಪ್ರೋತ್ಸಾಹಧನ ನೀಡಿದರು. ಸಾಹಿತಿ ಮಾದು ಪ್ರಸಾದ್ ಇದ್ದರು.

22ಕ್ಕೆ ಮಿರ್ಲೆ ಕೃಷಿ ಪತ್ತಿನ ಸಂಘದ ಚುನಾವಣೆ

ಭೇರ್ಯ, ಅ.8–ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆ ಅ.22ರಂದು ನಡೆಯಲಿದೆ.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಟ್ಟು 12 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಅಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ನಂತರ ಅದೇ ದಿನ ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಸಿ.ಎನ್.ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬನ್ನಿಕುಪ್ಪೆ: ಹುಣಸೂರು ತಾಲೂಕಿನ ಬನ್ನಿಕುಪ್ಪೆ ಸಮೀಪದ ತಿಪ್ಪೂರು ಗ್ರಾಮದ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನ ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ

ತಿಪ್ಪೂರಿನಲ್ಲಿ ರೈತ ಕ್ಷೇತ್ರ ಕಾರ್ಯಾಗಾರ

ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಸದಸ್ಯೆಯರಿಗೆ ತೋಟಗಾರಿಕೆಯ ಸಮಗ್ರ ಕೃಷಿ ಬಗ್ಗೆ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಯೋಜನಾಧಿಕಾರಿ ಧನಂಜಯ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬ್ಯಾಂಕ್ ವ್ಯವಹಾರದ ಜತೆಗೆ ಹತ್ತಾರು ಸೇವಾ ಸೌಲಭ್ಯ ಹಾಗೂ ಹೊಸ ತಾಂತ್ರಿಕ ಕೃಷಿಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪ್ರಗತಿಪರ ರೈತ ಚೆಲುವರಾಜು ತೋಟಗಾರಿಕೆ ಸಮಗ್ರ ಕೃಷಿ ಬಗ್ಗೆ ಮಾತನಾಡಿದರು. ಗ್ರಾಪಂ ಸದಸ್ಯ ಸೋಮಶೇಖರ್ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಮೇಲ್ವಿಚಾರಕ ಪುನೀತ್ ಕೃಷಿ ಅಧಿಕಾರಿ ಶಿವರಾಜ್, ಸೇವಾ ಪ್ರತಿನಿಧಿ ಜಯಶ್ರೀ, ಗ್ರಾಮದ ಮುಖಂಡ ಶ್ರೀನಿವಾಸ್‌ಗೌಡ, ಸಂಘದ ನೂರಾರು ಮಹಿಳಾ ಸದಸ್ಯೆಯರು ಹಾಜರಿದ್ದರು.



ಬನ್ನೂರಿನ ಕಾವೇರಿ ವೃತ್ತದಲ್ಲಿ ಯುವಕರ ಬಳಗದ ವತಿಯಿಂದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಆಯೋಜಿಸಲಾಗಿತ್ತು.

ಮಳೆಯಿಂದ ಬೆಳೆಗೆ ಹಸಿರು ಕಳೆ



ಬೆಟ್ಟದಪುರ: ಕಳೆದ ಒಂದು ತಿಂಗಳಿಂದ ಮಳೆ ಇಲ್ಲದೆ ಬೆಳೆಗಳು ಒಣಗುತ್ತಿದ್ದು, ಶನಿವಾರ ಬಿದ್ದ ಮಳೆ ರೈತರಿಗೆ ನೆಮ್ಮದಿ ತಂದಿದೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿಯ ಹಲವು ಗ್ರಾಮಗಳಲ್ಲಿ ಮಳೆ ಸುರಿದಿದೆ. ರಾಗಿ, ಜೋಳ, ಅಲಸಂದೆ, ಅವರೆ, ಹುರುಳಿ ಸೇರಿದಂತೆ ಹಿಂಗಾರು ಬೆಳೆಗಳಿಗೆ ಹಸಿರು ಕಳೆಬಂದಂತಾಗಿದೆ. ಇದರಿಂದ ರೈತರಿಗೆ ಸ್ವಲ್ಪಮಟ್ಟಿಗೆ ನೆಮ್ಮದಿ ಸಿಕ್ಕಂತಾಗಿದೆ. ಜತೆಗೆ ರೈತರು ಇನ್ನು ಹೆಚ್ಚಿನ ಹಿಂಗಾರು ಬೆಳೆಗೆ ಮುಂದಾಗಿದ್ದಾರೆ. ತಾಲೂಕಿನ ರೈತರಿಗೆ ಬೇಕಾದ ಬಿತ್ತನೆ ಬೀಜಗಳು ಸಮೀಪದ ರೈತ ಸಂಪರ್ಕ ಕೇಂದ್ರದಲ್ಲಿ ದಾಸ್ತಾನಿದ್ದು, ರೈತರು ಸಬ್ಸಿಡಿ ದರದಲ್ಲಿ ಪಡೆಯಬಹುದು ಎಂದು ಪಿರಿಯಾಪಟ್ಟಣ ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ತಿಳಿಸಿದ್ದಾರೆ.

ನಂಜನಾಯಕ ನಿಧನ



ಸುತ್ತೂರು: ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮ ಪಂಚಾಯಿತಿ ಸದಸ್ಯ ನಂಜನಾಯಕ (55) ಭಾನುವಾರ ನಿಧನರಾದರು. ಮೃತರು ಸತತ ನಾಲ್ಕು ಬಾರಿ ಗ್ರಾಪಂ ಸದಸ್ಯರಾಗಿದ್ದರು. ಮೃತರಿಗೆ ಸಹೋದರ ಸೇರಿದಂತೆ ಅಪಾರ ಬಂಧು– ಬಳಗ ಇದ್ದಾರೆ. ಸುತ್ತೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜ್, ಜಿಲ್ಲಾ ನಾಯಕರ ಸಂಘದ ನಿರ್ದೇಶಕ ಟೀಕಾಟೂರ್ ದೇವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಪಿಡಿಒ ಮಹದೇವಸ್ವಾಮಿ, ಗ್ರಾಪಂ ಅಧ್ಯಕ್ಷ ರವಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಅಪ್ಪಾಜಿಗೌಡ



ಚುಂಚನಕಟ್ಟೆ: ಸಾಲಿಗ್ರಾಮ ಪಟ್ಟಣದ ಜೈ ಮಾರುತಿ ಸಾಮಿಲ್ ಮಾಲೀಕ ಅಪ್ಪಾಜಿಗೌಡ (78) ಶನಿವಾರ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಇದ್ದಾರೆ. ಭಾನುವಾರ ಸಾಲಿಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಂತಾಪ: ಮಾಜಿ ಸಚಿವ ಸಾ.ರಾ.ಮಹೇಶ್, ನಟರಾಜ್, ಮಾದೇವ್ ಸಂತಾಪ ಸೂಚಿಸಿದರು.

ಪಿ.ಪುಟ್ಟರಾಜು



ತಿ.ನರಸೀಪುರ: ಪಟ್ಟಣದ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಹಾಗೂ ತಿರುಮಕೂಡಲಿನ ಕಾಂಗ್ರೆಸ್ ಮುಖಂಡ ಪಿ.ಸ್ವಾಮಿನಾಥ್‌ಗೌಡ ಸಹೋದರ ಪಿ.ಪುಟ್ಟರಾಜು(56) ಭಾನುವಾರ ನಿಧನರಾದರು. ಮೃತರು ಪತ್ನಿ ಕಾಂಚನಾ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ಕಾವೇರಿ ನದಿ ದಡದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಮಹದೇಶ್ವರ ಬಸ್ ಮಾಲೀಕ ಕೆ.ವಜ್ರೇಗೌಡ, ಮಹದೇಶ್ವರ ಭವನ್ ರಾಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ತಾಲೂಕು ವೀರಶೈವ ಮಹಾಸಭಾಧ್ಯಕ್ಷ ತೊಟ್ಟವಾಡಿ ಮಹಾದೇವಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ತುಂಬಲ ಪ್ರಕಾಶ್, ವೀರೇಶ್, ಬಸವಣ್ಣ, ಸದಸ್ಯ ಬಾದಾಮಿ ಮಂಜು, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಗ್ರಾಪಂ ಮಾಜಿ ಅಧ್ಯಕ್ಷರಾದ ಎ.ಜೆ.ವೆಂಕಟೇಶ್. ಕರಿಯಪ್ಪ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಘಟಕ ಮಹದೇವ್, ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರು ಅಧ್ಯಕ್ಷ ಕೆ.ಶಿವಲಿಂಗು, ಕಾರ್ಯದರ್ಶಿ ತಾಯೂರು ವಿಠಲ ಮೂರ್ತಿ ಅಂತಿಮ ದರ್ಶನ ಪಡೆದರು.

ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಶೀಘ್ರ ಜಾರಿ

ಅಭಿನಂದನಾ ಸಮಾರಂಭದಲ್ಲಿ ಶಾಸಕ ಅನಿಲ್‌ಚಿಕ್ಕಮಾದು



ಕೆ.ಆರ್.ನಗರ: ಪರಿಶಿಷ್ಟ ಪಂಗಡದವರಿಗೆ ಶೇ.7.5ರಷ್ಟು ಮೀಸಲಾತಿ ಸೌಲಭ್ಯ ನೀಡುವಂತೆ ಮುಖ್ಯಮಂತ್ರಿಗಳಿಗೆ ಸಮಾಜದ ವತಿಯಿಂದ ಮನವಿ ಸಲ್ಲಿಸಲಾಗಿದ್ದು, ಶೀಘ್ರದಲ್ಲೇ ಜಾರಿ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಹೆಚ್.ಡಿ.ಕೋಟೆ ಶಾಸಕ ಅನಿಲ್‌ಚಿಕ್ಕಮಾದು ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ನಾಯಕ ನೌಕರರ ಸಂಘ ಮತ್ತು ವಾಲ್ಮೀಕಿ ನಾಯಕರ ಸಂಘದ ವತಿಯಿಂದ ನಡೆದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಎಲ್ಲರಿಗೂ ಎಸ್‌ಟಿ ಪ್ರಮಾಣ ಪತ್ರ ಕೊಡಿಸಲು ಕಾನೂನು ತೊಡಕುಗಳನ್ನು ಸರಿಪಡಿಸಲಾಗಿದೆ. ನಾನು ಶಾಸಕನಾಗಲು ಡಿ.ರವಿಶಂಕರ್ ಸಹಕಾರ ಬಹಳ ಪ್ರಮುಖವಾಗಿದೆ. ಶಾಸಕ ಡಿ.ರವಿಶಂಕರ್ ಹಾಗೂ ಸಮುದಾಯದ ಮುಖಂಡರು ನನ್ನನ್ನು ಕಾಂಗ್ರೆಸ್ ಸೇರ್ಪಡೆ ಮಾಡಿ ಹೆಚ್.ಡಿ.ಕೋಟೆಯಿಂದ ಸ್ಪರ್ಧಿಸಲು ಅವಕಾಶ ನೀಡಿರುವುದನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ದುಡಿಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮುದಾಯದವರು ಬೆಂಬಲ ನೀಡಬೇಕು. ಮುಖ್ಯಮಂತ್ರಿಗಳ ಹಾದಿಯಲ್ಲೇ ನಡೆಯುತ್ತಿರುವ ಶಾಸಕ ಡಿ.ರವಿಶಂಕರ್‌ಗೂ ಎಲ್ಲಾ ಸಹಕಾರ ಮತ್ತು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಡಿ.ರವಿಶಂಕರ್, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ನಾಯಕ ಸಮಾಜದ ನಾಯಕರಾಗಿದ್ದ ಚಿಕ್ಕಮಾದು ಅವರ ನಿಧನದ ನಂತರ ಅವರ ಪುತ್ರ ಅನಿಲ್ ಚಿಕ್ಕಮಾದು ನಾಯಕತ್ವ ಬಯಸಿರುವ ನಾಯಕ ಸಮುದಾಯಕ್ಕೆ ಮುಂದಿನ ದಿನಗಳಲ್ಲಿ ಅನುಕೂಲವಾಗಲಿದೆ ಎಂದು ತಿಳಿಸಿದರು.

ಅನಿಲ್‌ಚಿಕ್ಕಮಾದುಗೆ ಸರ್ಕಾರ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡಲಿದ್ದು, ಮುಂದೆ ಸಚಿವರಾಗಲಿದ್ದಾರೆ. ಸಮಾಜದ ಬೇಡಿಕೆಗಳನ್ನು ಈಡೇರಿಸಲು ಸಹಕಾರಿಯಾಗಲಿದೆ ಎಂದರು.

ಸಮುದಾಯ ಭವನದ ದೇವಾಲಯ ನಿರ್ಮಾಣಕ್ಕೆ 5 ಲಕ್ಷ ರೂ. ಅನುದಾನ ನೀಡಲಾಗುವುದು. ಸಾಲಿಗ್ರಾಮದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರಾತಿ ಹಾಗೂ ಅಗತ್ಯ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಶಾಸಕರಾದ ಅನಿಲ್‌ಚಿಕ್ಕಮಾದು ಹಾಗೂ ಡಿ.ರವಿಶಂಕರ್ ಅವರನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಕೆ.ಆರ್.ನಗರ ತಾಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ನರಸಿಂಹನಾಯಕ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ಮಾದನಾಯಕ, ಹಿರಿಯ ಮುಖಂಡ ಬೆಟ್ಟನಾಯಕ, ನೌಕರರ ಸಂಘದ ಅಧ್ಯಕ್ಷ ಜಿ.ಕೆ.ಸಿದ್ದೇಶ್ವರ ಪ್ರಸಾದ್, ಲೋಕೋಪಯೋಗಿ ಇಲಾಖೆಯ ಎಇಇ ಸುಮಿತಾ, ಶಿಕ್ಷಣ ಸಂಯೋಜಕರಾದ ದಾಸಪ್ಪ, ಕಿರಣ್‌ಕುಮಾರ್, ಸಂಘದ ಕಾರ್ಯದರ್ಶಿ ಪರಮೇಶ್, ಟಿಎಪಿಸಿಎಂಎಸ್ ನಿರ್ದೇಶಕ ತೋಟಪ್ಪನಾಯಕ, ಪುರಸಭೆ ಸದಸ್ಯ ಶಿವುನಾಯಕ್, ಮುಖಂಡರಾದ ಕಲ್ಲಹಳ್ಳಿ ಶ್ರೀನಿವಾಸ್, ರಾಜನಾಯಕ, ಮಹದೇವ ನಾಯಕ, ಸಿದ್ದನಾಯಕ, ಲೋಹಿತ್, ಜ್ಯೋತಿಕುಮಾರ್, ಕೆ.ವಿ.ರಮೇಶ್ ಹಾಜರಿದ್ದರು.

ಸ್ಥಳೀಯ ಆಡಳಿತ ಮೂಲಸೌಕರ್ಯ ಒದಗಿಸುವಲ್ಲಿ ವಿಫಲ



ಸಭೆಯಲ್ಲಿ ಕೇಳಿಬಂದ ಸಲಹೆಗಳು

- ಉದ್ಯಾನವನ ಒತ್ತುವರಿ ಪ್ರಕರಣಗಳ ಬಗ್ಗೆ ಜಿಲ್ಲಾಡಳಿತ ಗಮನ ಸೆಳೆಯಬೇಕು
- ನಗರಾದ್ಯಂತ ಫುಟ್‌ಪಾತ್ ಒತ್ತುವರಿ ಪ್ರಕರಣಗಳ ಬಗ್ಗೆ ನಗರ ಪೊಲೀಸ್ ಆಯುಕ್ತರ ಗಮನ ಸೆಳೆಯಬೇಕು.
- ಇತ್ತೀಚೆಗೆ ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ 63 ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುವ ಕುರಿತು ನಗರ ಪಾಲಿಕೆ ಆಯುಕ್ತರ ಗಮನಸೆಳೆಯಬೇಕು.
- ಕಳೆದ ಮೂವತ್ತು ವರ್ಷಗಳಿಂದ ಕೆಎಸ್‌ಆರ್‌ಟಿಸಿ ನಗರ ಬಸ್ ರೂಟ್‌ಗಳ ನವೀಕರಣ ಆಗಿಲ್ಲ. ನವೀಕರಿಸಿ, ಹೊಸ ಬಸ್ ರೂಟ್‌ಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸುವುದು.

ಮೈಸೂರು, ಅ.8(ಎಸ್‌ಪಿಎನ್)– ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತು ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೀವ್ರಗತಿಯಲ್ಲಿ ಮೈಸೂರು ಬೆಳವಣಿಗೆ ಹೊಂದುತ್ತಿದ್ದರೂ ಸ್ಥಳೀಯ ಆಡಳಿತ ಮಾತ್ರ ಮೂಲಸೌಕರ್ಯ ಒದಗಿಸುವಲ್ಲಿ ವಿಫಲವಾಗುತ್ತಿದೆ ಎಂದು ಮೈಸೂರು ಗ್ರಾಹಕ ಪರಿಷತ್ ಪದಾಧಿಕಾರಿಗಳ ಭಾನುವಾರ ಬಿಸಿ ಬಿಸಿ ಚರ್ಚೆ ನಡೆಸಿದರು.

ಮೈಸೂರು ಒಂಟಿಕೊಪ್ಪಲಿನ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿಯಲ್ಲಿ ಮೈಗ್ರಾಪ ಮಾಸಿಕ ಸಾಮಾನ್ಯ ಸಭೆಯಲ್ಲಿ ಮೂಲ ಸೌಕರ್ಯ ಕೊರತೆ, ಉದ್ಯಾನವನ, ಫುಟ್‌ಪಾತ್, ರಸ್ತೆ ಒತ್ತುವರಿ ಹಾಗೂ ಕೆಎಸ್‌ಆರ್‌ಟಿಎಸ್ ನಗರ ಮತ್ತು ಗ್ರಾಮಾಂತರ ಬಸ್ ಸಂಚಾರ ಕುರಿತು ಸದಸ್ಯರು ಸಭೆಯಲ್ಲಿ ಚರ್ಚಿಸಿದರು.

ಮೈಸೂರಿನಲ್ಲಿ ದಿನೇದಿನೆ ಫುಟ್‌ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಪಾದಾಚಾರಿಗಳ ಓಡಾಟಕ್ಕೂ ಫುಟ್‌ಪಾತ್ ಇಲ್ಲದಂತಾಗುತ್ತಿದೆ. ಇದರ ಬಗ್ಗೆ ನಗರ ಪೊಲೀಸ್ ಆಯುಕ್ತರಾಗಲಿ, ನಗರ ಪಾಲಿಕೆ ಆಯುಕ್ತರು ಅಥವಾ ಜಿಲ್ಲಾಧಿಕಾರಿಗಳು ಗಮನಹರಿಸುತ್ತಿಲ್ಲ. ಇದರಿಂದ ಶ್ರೀಸಾಮಾನ್ಯನ ನೋವು ಕೇಳುವವರೇ ಇಲ್ಲದಂತಾಗಿದೆ ಎಂದು ಮೈಗ್ರಾಪ ಸದಸ್ಯರು ತಮ್ಮ ಅಳಲು ತೋಡಿಕೊಂಡರು.

ಪಡುವಾರಹಳ್ಳಿಯ ಮಹಾರಾಣಿ ಪದವಿ ವಾಣಿಜ್ಯ ಕಾಲೇಜಿನಲ್ಲಿ ಅಂದಾಜು 4,500ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಗ್ರಾಮೀಣ ಪ್ರದೇಶಗಳಿಂದ ವಿದ್ಯಾರ್ಥಿನಿಯರು ಆಗಮಿಸುತ್ತಾರೆ. ನಗರ ಬಸ್‌ನಿಲ್ದಾಣದಿಂದ ಪಡುವಾರಹಳ್ಳಿ ಕಡೆಗೆ ಹೋಗುವ ಬಸ್ ರೂಟ್ ವ್ಯವಸ್ಥೆ ಸರಿಯಾಗಿಲ್ಲ ಹಾಗೂ ನೂತನ ಜಿಲ್ಲಾಧಿಕಾರಿ ಕಚೇರಿಗೆ ತಲುಪುವ ಬಸ್ ವ್ಯವಸ್ಥೆ ಸರಿಯಾಗಿಲ್ಲ. ಇದರ ಬಗ್ಗೆ ಕೆಎಸ್‌ಆರ್‌ಟಿಸಿ ಉನ್ನತ ಅಧಿಕಾರಿಗಳಿಗೆ ಪತ್ರ ಬರೆದು ಬಸ್ ವ್ಯವಸ್ಥೆ ಕಲ್ಪಿಸಲು ಆಗ್ರಹಿಸಬೇಕು ಎಂದು ಸದಸ್ಯ ಶ್ರೀಧರ್ ಅವರಿಂದ ಕೇಳಿ ಬಂತು.

ಮೈಸೂರು ನಗರ ದಿನದಿಂದ ದಿನಕ್ಕೆ ಬೆಳವಣಿಗೆ ಹೊಂದುತ್ತಿದ್ದರೂ, ಸಿಡಿಪಿ ಪ್ಲಾನ್ ಪ್ರಕಾರ ರಸ್ತೆ ಫುಟ್‌ಪಾತ್, ಉದ್ಯಾನವನ ಅಭಿವೃದ್ಧಿ ಹೊಂದುತ್ತಿಲ್ಲ. ಇದರ ಬಗ್ಗೆ ಸಾರ್ವಜನಿಕರು ಜಿಲ್ಲಾಡಳಿತವನ್ನು ಪ್ರಶ್ನಿಸದಿರುವುದು ಆಶ್ಚರ್ಯಕರ ಸಂಗತಿ ಎಂಬ ಮಾತು ಸದಸ್ಯರಿಂದ ಕೇಳಿಬಂತು.

ಈ ವೇಳೆ ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾರ್ಯಾಧ್ಯಕ್ಷೆ ಎಸ್.ಶೋಭನಾ, ಸದಸ್ಯರಾದ ಬಾಮಿ ವಿ.ಶಣೈ, ಅರುಣ್ ಕುಮಾರ್, ಲಕ್ಷ್ಮಣಕುಮಾರ್, ಎ.ವಿ. ರಂಗೇಶ್, ಬಿ.ಎಸ್.ಸೋಮಶೇಖರ, ಜಿ.ಶ್ರೀಧರ,ಎಸ್.ಸುಮಲತಾ, ಗೀತಾ ವೇಲುಮಣಿ, ವಿ.ಪ್ರಭಾ, ಮರಿಗೌಡ, ಭಾನುಪ್ರಶಾಂತ್, ಕೆ.ವಿ.ಕೆ.ನಾಯ್ಡು, ಕೆ.ವಿ.ರಾಮನಾಥ್, ಸಹನ, ಲತ, ಎಸ್.ಎಸ್. ಷರೀಫ್, ಅಭಿಜ್ಞ ಸೇರಿದಂತೆ ಇತರರಿದ್ದರು.

ವಿಶೇಷ ಚೇತನರಿಗೆ ವಿದ್ಯಾನಿಧಿ ವಿತರಣೆ

ಮೈಸೂರು, ಅ.8(ಎಸ್‌ಪಿಎನ್)– ಶ್ರವಣ ದೋಷವುಳ್ಳ ವಿಶೇಷ ಚೇತನರ ಸಾಧನೆಗೆ ಸಮಾಜದಿಂದ ನೆರವಿನ ಜೊತೆಗೆ, ಸಹಕಾರವೂ ಮುಖ್ಯ ಎಂದು ಸಕ್ಷಮ ಸಮದೃಷ್ಟಿ, ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲದ ಅಧ್ಯಕ್ಷ ಡಾ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ನಂಜುಮಳಿಗೆ ಬಳಿಯ ಗೋಪಾಲಸ್ವಾಮಿ ಶಿಶುವಿಹಾರ ಆವರಣದಲ್ಲಿ ಮೈಸೂರಿನ ಸಕ್ಷಮ ಸಮದೃಷ್ಟಿ, ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ ವತಿಯಿಂದ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ವಿತರಣೆ, ಅಷ್ಟಾವಕ್ರ ಜಯಂತಿ ಹಾಗೂ ವಿಶ್ವ ಕಿವುಡರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶ್ರವಣ ದೋಷವುಳ್ಳ ವಿಶೇಷ ಚೇತನರಿಗೆ ಅನುಕಂಪಕ್ಕಿಂತ ಅವಕಾಶಗಳು ನೀಡಬೇಕು. ಅವರಲ್ಲಿರುವ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಹಿಸುವ ಕೆಲಸ ಸಮಾಜದಿಂದ ಆಗಬೇಕು. ಅಲ್ಲದೆ, ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳು ಸಿಗುವಂತಾಗಬೇಕು ಎಂದು ಒತ್ತಾಯಿಸಿದರು.

12 ಬೇಡಿಕೆ ಈಡೇರಿಕೆಗೆ ಆಗ್ರಹ: ಶ್ರವಣದೋಷವುಳ್ಳವರಿಗೆ(ಕಿವುಡರಿಗೆ) ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕೊಡಬೇಕು.



ಪ್ರಸ್ತುತ ಶ್ರವಣದೋಷವುಳ್ಳವರಿಗೆ 1400 ಮಾಸಿಕ ಮಾಸಾಶನ ನೀಡಲಾಗುತ್ತಿದ್ದು, ಇದನ್ನು ಮಾಸಿಕ ಐದು ಸಾವಿರಕ್ಕೆ ಏರಿಕೆ ಮಾಡಬೇಕು ಬೇಡಿಕೆ ಸೇರಿದಂತೆ ಒಟ್ಟು 12 ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಕಿವುಡರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ಈ ವೇಳೆ ಹೆಚ್.ಆರ್.ಚೈತ್ರಾ, ಎಂ.ಐಶ್ವರ್ಯ, ಪಿ.ಪ್ರಿಯಾ, ಕೆ.ಅನುಪಮಾ, ಜೆ.ದರ್ಶಿನಿ, ಎಸ್.ಪಿ.ದೀಪ, ಅನ್ನಪೂರ್ಣೇಶ್ವರಿ, ಬಿ.ಎನ್.ಕಾವ್ಯ, ಎಂ.ಪಿ.ಮಮತಾ, ಬಿ.ಎ.ಗಿರೀಶ್, ಎಂ.ಪ್ರಮೋದ್ ಕುಮಾರ್, ಬಿ.ಚೇತನ್, ಎಂ.ಸಿ.ಭಾರ್ಗವಿ, ಎಸ್.ಡಿ.ಬಸವರಾಜು, ಜಯಶಾಲಿನಿ, ಸೃಜನಾ, ರೋಹಿತ್ ಕುಮಾರ್,ಎಂ.ಬಿ. ಶಶಾಂಕ, ಎಸ್.ಅನಿಲ್, ಮೊಹಮ್ಮದ್ ಓವೈಜ್ ಅವರಿಗೆ ವಿತರಿಸಲಾಯಿತು.

ವೇದಿಕೆಯಲ್ಲಿ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ ಡಾ.ಎಸ್. ಮುರಳಿ, ಎನ್‌ಐಇನ ಸಹಾಯಕ ಪ್ರಾಧ್ಯಾಪಕ ವೇದಮೋಹನ್, ಮೈಸೂರು ಜಿಲ್ಲಾ ಕಿವುಡರ ಸಂಘದ ಉಪಾಧ್ಯಕ್ಷ ಮಹೇಶ ವರ್ಮಾ, ಸಕ್ಷಮ ಸಮದೃಷ್ಟಿ, ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲದ ಕಾರ್ಯದರ್ಶಿ ಅರುಣಾಚಲ ಶರ್ಮಾ ಸೇರಿದಂತೆ ಇತರರಿದ್ದರು.

ಸಿಎಂ ಸಿದ್ದರಾಮಯ್ಯ ದೆಹಲಿ ಪ್ರಯಾಣ: ಸಿಡಬ್ಲ್ಯುಸಿ ಸಭೆಯಲ್ಲಿ ಭಾಗಿ

ಕೇಂದ್ರ ಸಚಿವರ ಭೇಟಿ ಸಾಧ್ಯತೆ

ಬೆಂಗಳೂರು, ಅ.8– ನಾಳೆ (ಅ.9) ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ದೆಹಲಿಗೆ ತೆರಳಲಿದ್ದು, ಮುಂಬರುವ ಚುನಾವಣೆಗೆ ಪಕ್ಷದ ಕಾರ್ಯತಂತ್ರದ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ.

ದೆಹಲಿ ಪ್ರವಾಸದ ವೇಳೆ ಮುಖ್ಯಮಂತ್ರಿಗಳು ಕೆಲವು ಕೇಂದ್ರ ಸಚಿವರನ್ನು ಭೇಟಿ ಮಾಡಿ ಕರ್ನಾಟಕದ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಲಿದ್ದಾರೆ.

ಜಾತಿ ಗಣತಿ, ಪಂಚ ರಾಜ್ಯಗಳ ಚುನಾವಣೆ ಮತ್ತು ಕೇಂದ್ರದ ತನಿಖಾ ಸಂಸ್ಥೆಗಳಿಂದ ವಿಪಕ್ಷಗಳ ನಾಯಕರನ್ನು ಗುರಿಯಾಗಿಸುವುದು ಸೇರಿದಂತೆ ದೇಶದಲ್ಲಿನ ರಾಜಕೀಯ ಪರಿಸ್ಥಿತಿ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚೆಯಾಗಲಿದೆ.

ಅಕ್ಟೋಬರ್ 9ರಂದು ಬೆಳಗ್ಗೆ 10.30ಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಮಧ್ಯ ಪ್ರದೇಶ, ತೆಲಂಗಾಣ, ರಾಜಸ್ಥಾನ, ಛತ್ತೀಸ್‌ಗಢ ಹಾಗೂ ಮಿಜೋರಾಂ ವಿಧಾನಸಭೆಗಳಿಗೆ ನಡೆಯುವ ಚುನಾವಣಾ ಸಿದ್ಧತೆ ಬಗ್ಗೆ ಚರ್ಚೆ ನಡೆಯಲಿದೆ. ಪ್ರಚಾರದ ವೇಳೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ನಾಯಕರಿಗೆ ಸೂಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಿದ್ದರಾಮಯ್ಯ, ಹೆಚ್.ಡಿ.ದೇವೇಗೌಡ ಅನಿರೀಕ್ಷಿತ ಭೇಟಿ



ಬೆಂಗಳೂರು ಅ 8– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಜಿ ಪ್ರಧಾನಿ ದೇವೇಗೌಡರನ್ನು ಅನಿರೀಕ್ಷಿತವಾಗಿ ಭೇಟಿಯಾದರು. ಸಿಡಬ್ಲ್ಯುಸಿ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಲು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಮಂಗಳೂರಿಗೆ ತೆರಳಲು ಆಗಮಿಸಿದ್ದ ಮಾಜಿ ಪ್ರಧಾನಿ ದೇವೇಗೌಡರು ಮತ್ತು ಇವರ ಧರ್ಮಪತ್ನಿ ಚನ್ನಮ್ಮ ಅನಿರೀಕ್ಷಿತವಾಗಿ ಮುಖಾಮುಖಿಯಾದರು. ಈ ವೇಳೆ ಮುಖ್ಯಮಂತ್ರಿಗಳು ದೇವೇಗೌಡರು ಮತ್ತು ಚನ್ನಮ್ಮ ಅವರ ಆರೋಗ್ಯ ವಿಚಾರಿಸಿದರು. ಬಳಿಕ ಕೆಲ ಕಾಲ ಕುಶಲೋಪರಿ, ಮಾತುಕತೆ ಬಳಿಕ ಪರಸ್ಪರರು ಬೀಳ್ಕೊಟ್ಟರು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಉಪಸ್ಥಿತರಿದ್ದರು.

ಎಂಆರ್‌ಸಿ ಛೇರ್ಮನ್ ಆಗಿ ಕೆ.ಎಂ.ಚಂದ್ರೇಗೌಡ ಅವಿರೋಧ ಆಯ್ಕೆ



ಕೆ.ಎಂ.ಚಂದ್ರೇಗೌಡ



ಸುರೇಶ್ ಕುಮಾರ್



ಗೌತಮ್ ಬಸಪ್ಪ



ಎಂ.ವಿ.ವೇಣು

ಮೈಸೂರು, ಅ.8–ಮೈಸೂರು ರೇಸ್ ಕ್ಲಬ್‌ನ 2023–24ರ ಅವಧಿಗೆ ಛೇರ್ಮನ್ ಹಾಗೂ ಹಿರಿಯ ಸ್ಟೀವರ್ಡ್ ಆಗಿ ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎಂ. ಚಂದ್ರೇಗೌಡ ಅವರು ಭಾನುವಾರ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇದಕ್ಕೂ ಮುನ್ನ ನಡೆದ ಸ್ಟೀವರ್ಡ್ ಚುನಾವಣೆಯಲ್ಲಿ ಕೆ.ಎಂ.ಚಂದ್ರೇಗೌಡ 101 ಮತ ಹಾಗೂ ಕೆ.ಎನ್.ಸುರೇಶ್ ಕುಮಾರ್ 84 ಮತ ಪಡೆದು ಆಯ್ಕೆಯಾದರು. ವೈ.ಬಿ.ಗಣೇಶ್ 60, ಕೆ.ಕುಸುಮಾಕರ ಶೆಟ್ಟಿ 37 ಹಾಗೂ ಜಿ.ವೆಂಕಟೇಶ್ 80 ಮತ ಪಡೆದರು.

ಆಡಳಿತ ಮಂಡಳಿ ಸದಸ್ಯರ ಎರಡು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗೌತಮ್ ಬಸಪ್ಪ 161 ಮತ ಹಾಗೂ ಡಾ. ಎಂ.ವಿ.ವೇಣು 133 ಮತ ಪಡೆದು ಆಯ್ಕೆಯಾದರೆ, ಎಲ್.ಎನ್.ನಟರಾಜು 72 ಮತ ಪಡೆದರು.

ಡಿಜಿಟಲ್ ಯುಗದಲ್ಲಿ ಕಾರ್ಪೋರೇಟ್ ಉದ್ಯಮದ ಪ್ರಗತಿ ಕುರಿತಾಗಿ ಅಮೃತ ವಿಶ್ವವಿದ್ಯಾಪೀಠಂನಲ್ಲಿ ಚರ್ಚೆ



ಮೈಸೂರು, ಅ.8–ಇಂದಿನ ಡಿಜಿಟಲ್ ಯುಗದಲ್ಲಿ ಕಾರ್ಪೋರೇಟ್ ಉದ್ಯಮ ಬದಲಾಗುತ್ತಿರುವ ಪರಿ ಹಾಗೂ ಈ ಪ್ರಗತಿಗೆ ಪೂರಕವಾಗಿ ಇಂದಿನ ವಿದ್ಯಾರ್ಥಿಗಳು ಹೇಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು ವಿಷಯವಾಗಿ ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನಲ್ಲಿ ಪ್ಯಾನೆಲ್ ಡಿಸ್ಕಷನ್ ನಡೆಯಿತು. ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ ಹಾಗೂ ಕಾರ್ಪೋರೇಟ್ ಅಂಡ್ ಇಂಡಸ್ಟ್ರಿ ರಿಲೇಶನ್ಸ್ ವಿಭಾಗದ ಜಂಟಿ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಎಬಿ ವೋಲ್ವೋನ ಮಾನವ ಸಂಪನ್ಮೂಲ ವಿಭಾಗದ ಬ್ಯುಸಿನೆಸ್ ಪಾರ್ಟ್ನರ್ ಅರವಿಂದ್ ವಾರಿಯರ್, ತಿರುಚಿರಪಲ್ಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಮ್ಯಾನೇಜರ್ (ಪ್ಲೇಸ್‌ಮೆಂಟ್ಸ್) ಶ್ಯಾಮ್, ಬೆಂಗಳೂರಿನ ಐಎಸ್‌ಬಿಆರ್ ಬ್ಯುಸಿನೆಸ್ ಸ್ಕೂಲ್‌ನ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಸೀನಿಯರ್ ಮ್ಯಾನೇಜರ್ ಡಾ.ಬಾಲಚಂದರ್ ಎಸ್, ಎಂಫೆಸಿಸ್‌ನ ಇಂಡಿಯಾ ಕ್ಯಾಂಪಸ್ ಲೀಡ್ ಆಗಿರುವ ಜೋಶುವಾ ಡೇವಿಡ್, ಫ್ರೀಲಾನ್ಸ್ ಕನ್ಸಲ್ಟಂಟ್ ಪ್ರೀತಮ್ ಐಯ್ಯರ್ ಪ್ಯಾನೆಲಿಸ್ಟ್‌ಗಳಾಗಿ ಭಾಗವಹಿಸಿದ್ದರು. ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥ ಡಾ.ಕೆ.ಬಾಲಾಜಿ ಪ್ಯಾನೆಲ್ ಡಿಸ್ಕಶನ್‌ನ್ನು ನಿರ್ವಹಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ ಅರವಿಂದ್ ವಾರಿಯರ್, ಇಂದು ಕಾರ್ಪೋರೇಟ್ ಜಗತ್ತಿನಲ್ಲಿ ಕೃತಕ ಬುದ್ಧಿಮತ್ತೆಯ ಪ್ರಭಾವ ಹೆಚ್ಚುತ್ತಿದೆ. ಹೀಗಾಗಿ ಇಂದಿನ ವಿದ್ಯಾರ್ಥಿಗಳು ತಮ್ಮ ಸ್ವಂತಿಕೆ, ಸೃಜನಶೀಲತೆ ಹಾಗೂ ಕೌಶಲ್ಯಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಚ್ಯಾಟ್ ಜಿಪಿಟಿಯಂತಹ ಕೃತಕ ಬುದ್ಧಿಮತ್ತೆ ಸಂಪನ್ಮೂಲಗಳ ಮೇಲೆ ಹೆಚ್ಚು ಅವಲಂಬಿತವಾಗದೇ ಮಾನವ ಸಹಜ ಯುಕ್ತಿಯನ್ನು ಬಳಸಬೇಕು ಎಂದರು.

ಕಾರ್ಯಕ್ರಮದಲ್ಲಿದ್ದ ಮತ್ತೋರ್ವ ಸಂಪನ್ಮೂಲ ವ್ಯಕ್ತಿ ಡಾ. ಶ್ಯಾಮ್ ಮಾತನಾಡಿ, ಇಂದಿನ ವಿದ್ಯಾರ್ಥಿಗಳಿಗೆ ವೃತ್ತಿರಂಗದಲ್ಲಿ ಅವರ ಅಭಿರುಚಿಗೆ ಅನುಗುಣವಾಗಿ ಸಾಕಷ್ಟು ಆಯ್ಕೆಗಳಿವೆ. ಅವರು ಸಾಕಷ್ಟು ಕಾರ್ಯಾಗಾರಗಳು, ಪ್ರೊಜೆಕ್ಟ್‌ಗಳು ಹಾಗೂ ಇಂಟರ್ನ್‌ಶಿಪ್‌ಗಳಲ್ಲಿ ಕೆಲಸ ಮಾಡುವ ಮೂಲಕ ತಮಗೆ ಸೂಕ್ತವಾದುದನ್ನು ಆಯ್ದುಕೊಳ್ಳಬೇಕಿದೆ ಎಂದರು. ಹಾಗೆಯೇ ಅಭಿರುಚಿಗೆ ತಕ್ಕಂತಹ ಕೆಲಸ ಸಿಗುವುದು ಇಂದಿನ ದಿನಗಳಲ್ಲಿ ಒಂದು ಸವಾಲಾಗಿ ಬದಲಾಗಿದೆ ಎಂದು ಅಭಿಪ್ರಾಯಪಟ್ಟರು.

ಜೋಶುವಾ ಡೇವಿಡ್, ಸೈದ್ಧಾಂತಿಕ ಜ್ಞಾನ, ಗುರಿಯಲ್ಲಿನ ಸ್ಪಷ್ಟತೆ ಹಾಗೂ ವೈಯಕ್ತಿಕ ಬ್ರ್ಯಾಂಡಿಂಗ್ ಮೇಲೆ ಹೆಚ್ಚಿನ ಗಮನ ಹರಿಸಬೇಕು ಎಂದು ತಿಳಿಸಿದರು.

ಡಾ.ಬಾಲಚಂದರ್ ಎಸ್. ಔದ್ಯೋಗಿಕ ಕ್ಷೇತ್ರದಲ್ಲಿನ ಬೆಳವಣಿಗೆಗಾಗಿ ಕೃತಕ ಬುದ್ಧಿಮತ್ತೆಯನ್ನು ಬಳಸಲು ಸಲಹೆ ನೀಡಿದರು. ಹಾಗೆಯೇ ವಿಆರ್‌ಐಓ ಪರಿಕಲ್ಪನೆ ಹಾಗೂ ಸ್ಮಾರ್ಟ್ ಗೋಲ್‌ಗಳನ್ನು ವಿವರಿಸಿದರು.

ನಂತರ ಮಾತನಾಡಿದ ಪ್ರೀತಮ್ ಐಯ್ಯರ್, ಅತಿವೇಗದಲ್ಲಿ ಪ್ರಗತಿ ಹೊಂದುತ್ತಿರುವ ಡಿಜಿಟಲ್ ಮಾಧ್ಯಮಕ್ಕೆ ತಕ್ಕಂತೆ ಸಂವಹನ ಕೌಶಲ್ಯ, ವಿಶ್ಲೇಷಣಾ ಸಾಮರ್ಥ್ಯ ಹಾಗೂ ತಂತ್ರಜ್ಞಾನ ಕೌಶಲ್ಯಗಳನ್ನು ಹೊಂದಬೇಕಾದ ಅಗತ್ಯತೆಗಳ ಬಗ್ಗೆ ತಿಳಿಸಿದರು.

ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ಅಸೋಸಿಯೇಟ್ ಡೀನ್ ಪ್ರೊಫೆಸರ್ ಬಾಬು, ಪ್ರಾಂಶುಪಾಲ ಪ್ರೊ.ಜಿ. ರವೀಂದ್ರನಾಥ್, ಅಕ್ಯಾಡೆಮಿಕ್ ಕೋ–ಆರ್ಡಿನೇಟರ್ ಡಾ.ರೇಖಾ ಭಟ್, ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಬಾಡಿಗೆ ಕಟ್ಟಡ

ಮೈಸೂರು, ಅ.8–ಸಮಾಜ ಕಲ್ಯಾಣ ಇಲಾಖೆ ವತಿಯಿಂದ ತಾಲೂಕು ವ್ಯಾಪ್ತಿಯ 250 ರಿಂದ 300 ವಿದ್ಯಾರ್ಥಿಗಳಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಮೈಸೂರು ನಗರ ವ್ಯಾಪ್ತಿಯಲ್ಲಿ ಕಾರ್ಪೋರೇಷನ್ ಅಥವಾ ಮುಡಾದಿಂದ ಅನುಮೋದನೆಗೊಂಡಿರುವ 60x40, 60x50, 60x80 ಇತ್ಯಾದಿ ಅಳತೆಯ 3–4 ಅಂತಸ್ತಿನ ಕಟ್ಟಡ ಬಾಡಿಗೆಗೆ ಬೇಕಾಗಿರುತ್ತದೆ. ಕಟ್ಟಡದ ಬಾಡಿಗೆ ದರವನ್ನು ಲೋಕೋಪಯೋಗಿ ಇಲಾಖೆಯ ಸಹಾಯಕ ಅಭಿಯಂತರರಿಂದ ನಿಗದಿಪಡಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ಪೂರ್ವ ಬಡಾವಣೆ ಪಡುವಾರಹಳ್ಳಿ. ದೂ. ಸಂ: 0821–2520910 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಅರ್ಥಶಾಸ್ತ್ರ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಪ್ರಸಕ್ತ ಆರ್ಥಿಕ ಪರಿಸ್ಥಿತಿ ಬಗ್ಗೆ ತಿಳಿಸಬೇಕು



ಮೈಸೂರು, ಅ.8(ಎಸ್‌ಪಿಎನ್)–ದೇಶದ ಸದೃಢತೆಗೆ ಆರ್ಥಿಕ ಚಟುವಟಿಕೆಗಳು ಬಲಗೊಳ್ಳಬೇಕು ಹಾಗೂ ಆರ್ಥಿಕತೆಯ ದೂರದೃಷ್ಟಿ ಯೋಜನೆ ಗಳು ಅನುಷ್ಠಾನಗೊಳ್ಳಬೇಕು ಎಂದು ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಸಿ. ಬಸವರಾಜ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮೈಸೂರು ಜಿಲ್ಲೆಯ ಅರ್ಥಶಾಸ್ತ್ರದ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರ ವೇದಿಕೆ ವತಿಯಿಂದ ಏರ್ಪಡಿಸಿದ್ದ ಆಂತರಿಕ ಮೌಲ್ಯಮಾಪನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷ ಕಳೆದಿವೆ. ಈ ನಡುವೆ ದೇಶದ ಅಭಿವೃದ್ಧಿಗೆ ಅನೇಕ ಆರ್ಥಿಕ ತಜ್ಞರ ಕೊಡುಗೆಯೂ ಇದೆ. ನಮ್ಮ ಹಿರಿಯರು ದೇಶದ ಆರ್ಥಿಕತೆ ಅಭಿವೃದ್ಧಿ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ನಡೆಸಿ, ಅನುಷ್ಠಾನಗೊಳಿಸಿದ ಪರಿಣಾಮ, ಭಾರತದ ಆರ್ಥಿಕತೆ ವಿಶ್ವಮಟ್ಟದಲ್ಲಿ 5ನೇ ಸ್ಥಾನ ಪಡೆದುಕೊಂಡಿದೆ. 1991ರಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹ ರಾವ್, ಆರ್ಥಿಕ ತಜ್ಞ ಡಾ.ಮನಮೋಹನ್‌ಸಿಂಗ್ ಅವರ ದೂರದೃಷ್ಟಿಯ ಫಲವಾಗಿ ದೇಶದ ಆರ್ಥಿಕತೆ ನಾಗಾಲೋಟದಲ್ಲಿ ಚೇತರಿಸಿಕೊಳ್ಳುತ್ತಿದೆ ಎಂದು ಅಭಿಪ್ರಾಯಪಟ್ಟರು. ರಾಜ್ಯದ ಪಿಯು ಕಾಲೇಜು ಗಳಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರು ಇಂದಿನ ಆರ್ಥಿಕ ಸ್ಥಿತಿ–ಗತಿಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು. ಅಲ್ಲದೆ, ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಗೆ ಮಾನ್ಯತೆ ಸಿಕ್ಕಿದೆ. ಆದುದರಿಂದ ಅರ್ಥಶಾಸ್ತ್ರದ ಉಪನ್ಯಾಸಕರು ವಿದ್ಯಾರ್ಥಿಗಳ ಮನಸ್ಸಿಗೆ ಇಂಥ ಆಗು ಹೋಗುಗಳನ್ನು ತಿಳಿಸಿಕೊಡುವಂತೆ ಕಿವಿ ಮಾತು ಹೇಳಿದರು.

ರಾಜ್ಯ ಅರ್ಥಶಾಸ್ತ್ರ ಪ್ರಾಂಶುಪಾಲರು, ಉಪನ್ಯಾಸಕರ ವೇದಿಕೆ ರಾಜ್ಯಾಧ್ಯಕ್ಷ ಕಾಡ್ನೂರು ಶಿವೇಗೌಡ ಮಾತನಾಡಿದರು. ವೇದಿಕೆಯಲ್ಲಿ ಮೈಸೂರು ಜಿಲ್ಲಾ ಅರ್ಥಶಾಸ್ತ್ರ ವೇದಿಕೆ ಅಧ್ಯಕ್ಷ ನಾಗೇಗೌಡ, ಪ್ರಾಂಶುಪಾಲರಾದ ಶಿವಕುಮಾರ್, ದಿನೇಶ್, ಟಿ.ಎಸ್.ಜಾನ, ಸೋಮಶೇಖರ್, ಮೈನಾವತಿ, ನಾಗರಾಜ್, ಖಜಾಂಚಿ ಜನಾರ್ಧನ್ ಹಾಗೂ ಸರ್ಕಾರಿ ನೌಕರ ಸಂಘದ ಸದಸ್ಯ ಉಮೇಶ್, ಪದಾಧಿಕಾರಿಗಳಾದ ಕೋಟಿ ವೆಂಕಟೇಶ್, ರಾಜೇಗೌಡ, ಗುಣಶೇಖರ್, ರೇವಣ್ಣ, ಮಾಧುಸ್ವಾಮಿ, ಪ್ರಶಾಂತ, ತಮ್ಮಣ್ಣೇಗೌಡ, ಬಿ.ಆರ್. ಶ್ರೀನಿವಾಸ, ಲಿಂಗಣಸ್ವಾಮಿ, ಮಂಜುನಾಥ, ಜಗದೀಶ್, ಬಿ.ಪಿ. ಕುಮಾರ್ ಮಹಾದೇವ ನಾಯಕ, ಜಮೀರ್ ಅಹ್ಮದ್, ಜೆಎಸ್‌ಎಸ್. ರಮೇಶ್, ಜವರಯ್ಯ ಮುಂತಾದವರಿದ್ದರು.

ಅ. 20, ಬಿಜೆಪಿ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಕಾಂಗ್ರೆಸ್‌ಗೆ

ಬೆಂಗಳೂರು: ಬಿಜೆಪಿ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಅವರು ಕೇಸರಿ ಪಾಳಯಕ್ಕೆ ಶಾಕ್ ನೀಡಿದ್ದು, ಅಕ್ಟೋಬರ್ 20 ರಂದು ಕಾಂಗ್ರೆಸ್ ಸೇರಲು ನಿರ್ಧರಿಸಿದ್ದಾರೆ.

ಇಂದು ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಕ್ಷೇತ್ರದ ಮಾಜಿ ಶಾಸಕಿ ಪೂರ್ಣಿಮಾ ಅವರು ಕಾಂಗ್ರೆಸ್ ಸೇರಲಿದ್ದಾರೆ. ಅಕ್ಟೋಬರ್ 20 ರಂದು ಕೆಪಿಸಿಸಿ ಅಧ್ಯಕ್ಷ ಮತ್ತು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ಪೂರ್ಣಿಮಾ ಶ್ರೀನಿವಾಸ್ ಅವರು ಕಾಂಗ್ರೆಸ್ ಪಕ್ಷ ಸೇರಲಿದ್ದಾರೆ.

ಕಳೆದ ತಿಂಗಳಷ್ಟೇ ಕೆ.ಆರ್. ಪುರದಲ್ಲಿರುವ ಪೂರ್ಣಿಮಾ ಶ್ರೀನಿವಾಸ್ ನಿವಾಸಕ್ಕೆ ಡಿ.ಕೆ.ಶಿವಕುಮಾರ್ ಭೇಟಿ ನೀಡಿದ್ದರು. ಈ ವೇಳೆ ಪಕ್ಷ ಸೇರುವುದಾಗಿ ಡಿಕೆಶಿಗೆ ಪೂರ್ಣಿಮಾ ಭರವಸೆ ಕೊಟ್ಟಿದ್ದರು. ಅ.20 ರಂದು ಪತಿ ಶ್ರೀನಿವಾಸ್ ಜೊತೆ ಮಾಜಿ ಶಾಸಕಿ ಕಾಂಗ್ರೆಸ್ ಸೇರಲಿದ್ದಾರೆ.